
ವಾರ್ಷಿಕ ಚಂದಾ ರೂ.25/-

# ಮಾರ್ಚ್ ಜನಪದ

ಸಂಪುಟ-07 • ಸಂಚಿಕೆ-05 • ಫೆಬ್ರವರಿ 2024




Downloaded From:www.kpscvaani.com




ಜನವರಿ 19 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೋಯಿಂಗ್ ಇಂಡಿಯಾ ಅವರ ವತಿಯಿಂದ ಬೆಂಗಳೂರು ಗೈಟೆಕ್–ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್‌ನಲ್ಲಿ ಆಯೋಜಿಸಿದ್ದ ಬೋಯಿಂಗ್ ಇಂಡಿಯಾ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕೇಂದ್ರ, ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕೇಂದ್ರ ಹಾಗೂ ವಿಮಾನಯಾನ ಕ್ಷೇತ್ರದಲ್ಲಿ ಮಹಿಳೆಯರಿಗೆ ಉತ್ತೇಜನ ನೀಡುವ ಬೋಯಿಂಗ್ ಸುಕನ್ಯಾ ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹಾಗೂ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರೊಂದಿಗೆ ಪಾಲ್ಗೊಂಡಿದ್ದ ಸಂದರ್ಭ.



ಜನವರಿ 19 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆಯೋಜಿಸಿದ್ದ ಶ್ರೀ ಮಹಾಯೋಗಿ ವೇಮನ ಜಯಂತಿ ಆಚರಣೆಯ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಸಂದರ್ಭ. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶಿವರಾಜ್ ತಂಗಡಗಿ ಅವರು ಉಪಸ್ಥಿತರಿದ್ದಾರೆ.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-05 • ಫೆಬ್ರವರಿ 2024

**06** ಯುವ ಜನರ ಭವಿಷ್ಯಕ್ಕೆ ಶಕ್ತಿ ತುಂಬುವ ಯುವನಿಧಿ ಯೋಜನೆ
• ಶಫಿ ಎನ್



**09** ಗೃಹ ಇಲಾಖೆಗೆ ಆಧುನಿಕ ಸ್ಪರ್ಶ
• ನಂಜುಂಡಪ್ಪ. ವಿ

**13** ಹೆಚ್ಚಿನ ಪಾಲುದಾರರನ್ನು ಆಕರ್ಷಿಸಿದ ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳ
• ವೈ.ಸಿ. ಸಂಪತ್ ಕುಮಾರ್

ಪ್ರಧಾನ ಸಂಪಾದಕರು
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50

**17** ಯಶಸ್ವಿಯಾಗಿ ಜರುಗಿದ "ಬಾಗಿಲಿಗೆ ಬಂತು ಸರ್ಕಾರ - ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮ
• ಮಂಜುನಾಥ್

**19** ಸರ್ಕಾರದ ವತಿಯಿಂದ ನೆಮ್ಮದಿಯ ಸೂರು
• ಎಸ್. ಲಕ್ಷ್ಮಿ ನಾರಾಯಣ

**21** ಪ್ರತಿ ಮಕ್ಕಳಿಗೂ ಒಂದೇ ರೀತಿಯ ಗುಣಮಟ್ಟದ ಶಿಕ್ಷಣ ಸರ್ಕಾರದ ಆಶಯ
• ಸಂಧ್ಯಾ ಸೊರಬ

**24** ಸರಳ ವಿವಾಹಗಳ ಉತ್ತೇಜನಕ್ಕಾಗಿ ಸರ್ಕಾರದಿಂದ ಮಾಂಗಲ್ಯ ಭಾಗ್ಯ
• ಕೆ.ಎಸ್. ರಾಜಮನ್ನಾರ್



**26** ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದ ಛಾಯಾಚಿತ್ರಗಳು

**28** ಚಿತ್ತ ಸೆಳೆಯುವ ಚಿತ್ತಾರಗಳ ಚಿತ್ರ ಸಂತೆ
• ಜಡಿಯಪ್ಪ ಗೆದ್ಲಗಟ್ಟೆ

**31** ಗಣಿನಾಡಲ್ಲಿ ಯುವಜನೋತ್ಸವ ಸಾಂಸ್ಕೃತಿಕ ಲೋಕದ ಅನಾವರಣ
• ಹನುಮೇಶ.ಹೆಚ್

**34** ಮಹಿಳೆಯರ ಸ್ವಾಸ್ಥ್ಯಕ್ಕಾಗಿ ಮುಟ್ಟಿನಕಪ್ಪು ಯೋಜನೆ
• ಶೇಷಾದ್ರಿ ಡಿ.ಎನ್

**37** ಮಾನವ ದಿನಗಳ ಸೃಜನೆಯಲ್ಲಿ ರಾಯಚೂರು ಜಿಲ್ಲೆ ಪ್ರಥಮ ಸ್ಥಾನ
• ಶಶಿಧರ ಅಂಗಡಿ



**39** ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರದ ಯೋಜನೆಗಳು
• ಆರ್. ಸ್ಮಿತಾ

**43** ಕೀಟಗಳ ಸಂರಕ್ಷಣೆಗಾಗಿ "ಕೀಟ ಕೆಫೆ"
• ಮುನಿರಾಜ.ಎಂ

**45** ಕುರಿ ಸಾಕಾಣಿಕೆಯಲ್ಲಿ ಯಶಸ್ಸು ಕಂಡ ಯುವ ರೈತ
• ಬಸಪ್ಪ

**47** ಐತಿಹಾಸಿಕ ದ್ವೀಪನಗರಿ ಶ್ರೀರಂಗಪಟ್ಟಣ
• ಬನ್ನೂರು ಕೆ. ರಾಜು

**50** ಪದಬಂಧ-51

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಬೆಳಗಾವಿಯಲ್ಲಿ ಸ್ವಾಮಿ ವಿವೇಕಾನಂದರ ಹೆಜ್ಜೆ ಗುರುತುಗಳು, ದಿನೇಶ ನಾಯಕ ಅವರ ಲೇಖನ ತುಂಬಾ ಉತ್ತಮವಾಗಿತ್ತು. ಅವರ ಜನ್ಮ ದಿನಾಚರಣೆ ಸಂದರ್ಭದಲ್ಲಿ ಬೆಳಗಾವಿಯ ಜೊತೆಗೆ ಅವರ ಸಂಬಂಧ ಕುರಿತಾಗಿ ಚೆನ್ನಾಗಿ ವಿವರಿಸಿದ್ದಾರೆ. ವಿವೇಕಾನಂದರು ಇಂದಿನ ಯುವ ಜನಾಂಗಕ್ಕೆ ಆದರ್ಶಪ್ರಾಯರಾಗಿದ್ದಾರೆ. ಅವರ ವಿಚಾರಗಳನ್ನು ಯುವಕರು ಬದುಕಿನಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು.

**–ವೀರೇಂದ್ರ ಕುಮಾರ ಪಾಟೀಲ** ಮುದ್ದೇಬಿಹಾಳ

* * *

ಜನವರಿ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಬೆಳಗಾವಿಯಲ್ಲಿ ಸ್ವಾಮಿ ವಿವೇಕಾನಂದರ ಹೆಜ್ಜೆಗುರುತುಗಳು' ಲೇಖನ ಸಮಕಾಲಿಕವಾಗಿ ಮೂಡಿ ಬಂದಿದೆ. ಹಾಗೂ ಇವರ ಹನ್ನೆರಡು ದಿನಗಳ ಬೆಳಗಾವಿ ಪ್ರವಾಸವನ್ನು ಲೇಖಕರು ಸವಿವರವಾಗಿ ನಿರೂಪಿಸಿದ್ದಾರೆ. ವಿವೇಕಾನಂದರು ತಮ್ಮ ಹನ್ನೆರಡನೇ ವಯಸ್ಸಿನಲ್ಲೇ ಹಿಂದೂ ಧರ್ಮದ ಬಗ್ಗೆ ಇದ್ದ ತಮ್ಮ ವಿದ್ವತ್ ಪಾಂಡಿತ್ಯದಿಂದ ಎಲ್ಲರ ಮನಗೆದ್ದಿರುವುದು ಇವರ ಬಗ್ಗೆ ಮತ್ತಷ್ಟು ಹೆಮ್ಮೆಯಾಯಿತು.

**–ಸಂತೆಬೆನ್ನೂರು ಮಂಜಪ್ಪ,** ಭದ್ರಾವತಿ

* * *

ಬೆಳಗಾವಿಯಲ್ಲಿ ಜರುಗಿದ ಚಳಿಗಾಲದ ಅಧಿವೇಶದಲ್ಲಿ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಕಡೆಗೆ ಸರ್ಕಾರವು ಹೆಚ್ಚು ಒತ್ತು ನೀಡಿರುವುದನ್ನು ಓದಿ ತುಂಬಾ ಸಂತೋಷವಾಯಿತು. ಈ ಭಾಗದ ಯುವ ಜನರಿಗೆ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳು ನಿಜಕ್ಕೂ ಶ್ಲಾಘನೀಯವಾದುದು. ಬೆಳಗಾವಿ ಅಧಿವೇಶನದಲ್ಲಿ ಜರುಗಿದ ಕಲಾಪದ ಸಂಕ್ಷಿಪ್ತ ಮಾಹಿತಿಯನ್ನು ಲೇಖಕ ಉಮೇಶ್ ಕೋಲಿಗೆರೆ ಅವರು ಅತ್ಯುತ್ತಮವಾಗಿ ಓದುಗರಿಗೆ ಒದಗಿಸಿದ್ದಾರೆ.

**–ಸಂಗಮೇಶ್ ನಾಯಕ,** ಬಳ್ಳಾರಿ


* * *

ತಾನು ಒಬ್ಬ ಹೆಣ್ಣಾಗಿದ್ದು, ತನ್ನ ಹೊಟ್ಟೆಯಲ್ಲಿ ಹೆಣ್ಣುಮಗು ಬೆಳೆಯುತ್ತಿದೆ ಎಂದು ಗೊತ್ತಾದರೆ ಭ್ರೂಣಹತ್ಯೆಗೆ ಮುಂದಾಗುವುದು ಅತ್ಯಂತ ನೋವಿನ ಸಂಗತಿ. ಮೂಢನಂಬಿಕೆಗೆ ಒಳಗಾಗಿ ಅವಿದ್ಯಾವಂತರು ಇದಕ್ಕೆ ಮುಂದಾಗುತ್ತಾರೆ ಅಂದರೆ, ವಿದ್ಯಾವಂತರೂ ಕೂಡ ಹೆಣ್ಣು ಮಗುವನ್ನು ಭ್ರೂಣದಲ್ಲೇ ಹತ್ಯೆ ಮಾಡುತ್ತಿರುವುದು ಶೋಚನೀಯ ವಿಚಾರ. ಈ ಕೃತ್ಯಕ್ಕೆ ನೆರವಾಗುವ ವೈದ್ಯರಿಗೆ ಕಠಿಣ ಶಿಕ್ಷೆ ವಿಧಿಸಿದರೆ ಮಾತ್ರ ಇಂತಹ ಅಪರಾಧಗಳನ್ನು ತಡೆಯಲು ಸಾಧ್ಯ. ಜನವರಿ 2024 ರ ವಾರ್ತಾ ಜನಪದ ಸಂಚಿಕೆಯಲ್ಲಿ ಕಾನೂನು ಬಾಹಿರ ಅಪರಾಧವಾದ ಭ್ರೂಣಲಿಂಗ ಪತ್ತೆ ಕುರಿತು ಮಾಹಿತಿ ನೀಡಿರುವುದು ಬಹಳ ಸೂಕ್ತವಾಗಿದೆ ಎನಿಸಿತು.

**–ಭಾಗ್ಯ ರಾಮಚಂದ್ರ,** ಮೈಸೂರು

* * *

ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ಮೇಲೆ ಅಪಾರ ಕಾಳಜಿ ಹೊಂದಿರುವವರು. ಅವರು ಇತ್ತೀಚೆಗೆ ಇಡೀ ದಿನ ನಡೆಸಿದ ಜನಸ್ಪಂದನ ಕಾರ್ಯಕ್ರಮವೇ ಇದಕ್ಕೆ ನಿದರ್ಶನವಾಗಿದೆ. ಅವರು ಸದಾ ಜನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಚಿಂತಿಸುವವರು.




ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವ ಜನಸ್ಪಂದನ ಕಾರ್ಯಕ್ರಮಕ್ಕೆ ಸಂಬಂಧಿಸಿದ ವರದಿಯಿಂದ ಮುಖ್ಯಮಂತ್ರಿಯವರಿಗೆ ಜನರ ಮೇಲಿರುವ ಕಾಳಜಿಯ ಕುರಿತು ಮತ್ತಷ್ಟು ತಿಳಿಯಲು ಸಾಧ್ಯವಾಯಿತು. ಜನಸ್ಪಂದನ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಮಾತ್ರ ಮಾಡದೇ ಇತರೆ ಜಿಲ್ಲೆಗಳಲ್ಲಿಯೂ ಮಾಡಿದರೆ ಒಳ್ಳೆಯದು ಎಂಬುದು ನನ್ನ ಸಲಹೆ.

**–ಜ್ಞಾನೇಶ್,** ಗದಗ

* * *

ಜನವರಿ ವಾರ್ತಾ ಜನಪದಲ್ಲಿ ಪ್ರಹ್ಲಾದ ಪರ್ವತಿ ಅವರು ಬರೆದಿರುವ ಸಿಂಹ ಶೀರ್ಷದ ರಾಷ್ಟ್ರ ಲಾಂಛನ ಲೇಖನದಲ್ಲಿ ಅಶೋಕ ಚಕ್ರವರ್ತಿ ಸ್ಥಾಪಿಸಿದ ಶಿಲ್ಪ ಸ್ತಂಭದ ಸಿಂಹ ಶೀರ್ಷದ ರಾಷ್ಟ್ರ ಲಾಂಛನವು ಸಾರಾನಾಥದಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಇವತ್ತಿಗೂ ಸಂರಕ್ಷಿಸಿ ಇಡಲಾಗಿದೆ ಎಂದು ತಿಳಿದು ಪುಳಕಿತವಾಯಿತು. ಇಂತಹ ಉಪಯುಕ್ತ ಮಾಹಿತಿಯನ್ನು ಒದಗಿಸಿದಕ್ಕಾಗಿ ಲೇಖಕರಿಗೆ ಧನ್ಯವಾದಗಳು.

**–ಅಪರ್ಣ ಸಿ.ಎಸ್,** ಚಿತ್ರದುರ್ಗ

* * *

ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ತನ್ನ ಐದನೇ ಗ್ಯಾರಂಟಿ ಯೋಜನೆಯಾದ ಯುವನಿಧಿ ನೋಂದಾವಣೆಗೆ ಚಾಲನೆ ನೀಡಿರುವುದು ನಿಜಕ್ಕೂ ಪದವೀಧರ ಯುವ ಜನರಿಗೆ ಅತ್ಯಂತ ಸಂತಸ ತಂದಿದೆ. ಸರ್ಕಾರವು ಈ ಯೋಜನೆಯನ್ನು ಜಾರಿಗೆ ತರುವುದಿಲ್ಲ ಎಂದು ನಾನು ಭಾವಿಸಿದ್ದೆ. ಆದರೆ ಸರ್ಕಾರವು ನುಡಿದಂತೆ ನಡೆದುಕೊಂಡಿದೆ. ನಮ್ಮಂತಹ ಲಕ್ಷಾಂತರ ಪದವೀಧರ ಯುವಕ–ಯುವತಿಯರಿಗೆ ಉದ್ಯೋಗ ಕಂಡುಕೊಳ್ಳಲು ಈ ಧನಸಹಾಯ ನೆರವಾಗಲಿದೆ.

**–ಹಿಮಾಂಶು ಕೆ.ಎಂ, ಕೆ.ಆರ್.ಪೇಟೆ**

ಕಂದಾಯ ಸಚಿವರು ಅಕ್ರಮ ಸಾಗುವಳಿ ಮಂಜೂರಿಗೆ ಡಿಜಿಟಲ್ ಸ್ಪರ್ಶ ನೀಡುತ್ತಿರುವುದು ಅತ್ಯಂತ ಶ್ಲಾಘನೀಯ ವಿಚಾರ. ಬಗರ್ ಹುಕುಂ ಎಂಬ ಹೆಸರಿನಲ್ಲಿ ವಿನೂತನ ತಂತ್ರಾಂಶದ ಮೂಲಕ ಭೂ ಮಂಜೂರಾತಿಯನ್ನು ನೀಡಲು ಮುಂದಾಗಿರುವ ಸರ್ಕಾರಕ್ಕೆ ತಮ್ಮ ಪತ್ರಿಕೆ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ. ಈ ಕಾರ್ಯ ಆದಷ್ಟು ಶೀಘ್ರವಾಗಿ ಜಾರಿಗೆ ಬರಲಿ ಎಂದು ಹಾರೈಸುತ್ತೇನೆ. ಸರ್ಕಾರವು ಈ ವಿನೂತನ ತಂತ್ರಾಂಶದಿಂದ ಭೂ ಮಂಜೂರಾತಿ ನೀಡಲು ಮುಂದಾಗಿರುವುದರಿಂದ ಬಹಳಷ್ಟು ವರ್ಷಗಳಿಂದ ಮಂಜೂರಾತಿಗಾಗಿ ಕಾಯುತ್ತಾ ಕುಳಿತಿರುವ ಅರ್ಹ ರೈತರಿಗೆ ವರದಾನವಾಗಲಿದೆ.

**–ವೆಂಕಟೇಶ್ ಎಂ.ಟಿ,** ಮಂಡ್ಯ

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದ ಐದು ಗ್ಯಾರಂಟಿ ಯೋಜನೆಗಳ ಪೈಕಿ ಐದೂ ಯೋಜನೆಗಳನ್ನು ಜಾರಿಗೆ ತರುವ ಮೂಲಕ ತಮ್ಮ ಸರ್ಕಾರ ನುಡಿದಂತೆ ನಡೆವ ಸರ್ಕಾರ ಎಂಬುದನ್ನು ಸಾಬೀತು ಪಡಿಸಿದೆ. ಈ ಐದೂ ಗ್ಯಾರಂಟಿ ಯೋಜನೆಗಳು ಸೇರಿದಂತೆ ಸರ್ಕಾರದ ಸಾಧನೆಯು ಅನೇಕ ರಾಜ್ಯಗಳಿಗೆ ಮಾದರಿಯಾಗಿದೆ.

ಜನವರಿ 16 ರಂದು ರಾಷ್ಟ್ರೀಯ ಯುವ ದಿನಾಚರಣೆಯಂದು ನಿರುದ್ಯೋಗಿ ಯುವಜನರಿಗೆ ನಿರುದ್ಯೋಗ ಭತ್ಯೆ ನೀಡುವ ಐದನೇ ಮತ್ತು ಕೊನೆಯ ಗ್ಯಾರಂಟಿ ಯೋಜನೆಯಾದ 'ಯುವನಿಧಿ'ಗೆ ಚಾಲನೆ ನೀಡಲಾಗಿದೆ. ಬಡವರು ಹಾಗೂ ಮಧ್ಯಮ ವರ್ಗದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿ ಮಾಡುವ ಉದ್ದೇಶದಿಂದ ಸರ್ಕಾರವು ಈ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಐದು ಗ್ಯಾರಂಟಿ ಯೋಜನೆಯಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬವೊಂದಕ್ಕೆ ಆರು ಸಾವಿರದಿಂದ ಏಳು ಸಾವಿರ ರೂ. ಗಳವರೆಗೆ ಆರ್ಥಿಕ ನೆರವು ದೊರಕುವಂತಾಗಿದೆ.

ಈ ಯುವನಿಧಿ ಭತ್ಯೆಯಿಂದ ನಿರುದ್ಯೋಗಿ ಯುವಕ–ಯುವತಿಯರು ಉದ್ಯೋಗ ಅರಸಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಉಪಯುಕ್ತವಾಗಲಿದೆ. ಸರ್ಕಾರ ಕೇವಲ ಭತ್ಯೆಯನ್ನು ನೀಡಿ ಸುಮ್ಮನಾಗದೆ, ಅವರು ಹೊಂದಬೇಕೆಂದಿರುವ ಉದ್ಯೋಗಕ್ಕೆ ಪೂರಕವಾದ ಕೌಶಲ್ಯ ತರಬೇತಿಯನ್ನು ನೀಡುವ ಜೊತೆಗೆ ಉದ್ಯೋಗ ಮೇಳಗಳನ್ನು ಆಯೋಜಿಸಲು ಸಿದ್ಧತೆಗಳನ್ನು ನಡೆಸಿದೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ರೈತರ ಪರವಾದ ಸರ್ಕಾರ. ಸದಾ ರೈತರ ಸಂಕಷ್ಟಗಳಿಗೆ ಸದಾ ಮಿಡಿಯುತ್ತದೆ. ಸರ್ಕಾರವು ರೈತರ ಬೆಳೆ ನಷ್ಟಕ್ಕೆ ಎಸ್.ಡಿ.ಆರ್.ಎಫ್ ನಿಧಿಯಿಂದ ಎರಡು ಸಾವಿರ ರೂ. ತಾತ್ಕಾಲಿಕ ಪರಿಹಾರ ಮತ್ತು ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರು ಪಡೆದಿರುವ ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲದ ಅಸಲನ್ನು ಪಾವತಿಸಿದರೆ ಬಡ್ಡಿ ಮನ್ನಾ ಮಾಡುವುದಾಗಿ ಘೋಷಣೆ ಮಾಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಸರ್ಕಾರವು ನೆಮ್ಮದಿಯಾಗಿ ಉತ್ತಮ ಆಡಳಿತ ನೀಡಲು ಗೃಹ ಇಲಾಖೆಯ ಪಾತ್ರ ಬಹಳ ಪ್ರಮುಖವಾಗುತ್ತದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಮೊದಲ ಬಾರಿಗೆ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಇಲಾಖೆಯ ಸುಧಾರಣೆಗಾಗಿ ಹಲವು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಂತೆ ಸೂಚಿಸಿದ್ದರು. ಈ ನಿಟ್ಟಿನಲ್ಲಿ ಗೃಹ ಇಲಾಖೆಯು ವಿಧಿವಿಜ್ಞಾನ, ಬಾಂಬ್ ನಿಷ್ಕ್ರಿಯೆ, ಕೃತಕ ಬುದ್ಧಿಮತ್ತೆ ಪರೀಕ್ಷೆ, ಸೈಬರ್ ಅಪರಾಧ ಪತ್ತೆ, ಎಫ್‌ಐಆರ್ ದಾಖಲಾತಿಗಾಗಿ ತಂತ್ರಾಂಶ ಅಭಿವೃದ್ಧಿ ಇವೇ ಮುಂತಾದ ಹಲವು ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ಇವುಗಳೆಲ್ಲವನ್ನು ಖುದ್ದು ಮುಖ್ಯಮಂತ್ರಿಗಳು ಪರಿಶೀಲನೆ ನಡೆಸಿದ್ದಾರೆ.

ಸಮಸ್ಯೆಗಳ ಪರಿಹಾರಕ್ಕಾಗಿ ಸಾರ್ವಜನಿಕರು ಸರ್ಕಾರಿ ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಅವರ ಮನೆ ಬಾಗಿಲಲ್ಲೇ ಸಮಸ್ಯೆಗೆ ಪರಿಹಾರ ಒದಗಿಸುವ ಸಲುವಾಗಿ ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಡಿ.ಕೆ ಶಿವಕುಮಾರ್ ಅವರು ಬೆಂಗಳೂರು ವ್ಯಾಪ್ತಿಯಲ್ಲಿ "**ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ**" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಮೊದಲನೇ ಹಂತದಲ್ಲಿ ಮಹದೇವಪುರ, ಯಲಹಂಕ, ಪೂರ್ವ, ಬೊಮ್ಮನಹಳ್ಳಿ ಹಾಗೂ ಪಶ್ಚಿಮ ವಲಯ ವ್ಯಾಪ್ತಿಯ 15 ವಿಧಾನಸಭಾ ಕ್ಷೇತ್ರಗಳಲ್ಲಿ ಈಗಾಗಲೇ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಎರಡನೇ ಹಂತದಲ್ಲಿ ಉಳಿದ 13 ವಿಧಾನಸಭಾ ಕ್ಷೇತ್ರಗಳಲ್ಲಿ ಶೀಘ್ರದಲ್ಲೇ ಕಾರ್ಯಕ್ರಮವನ್ನು ನಡೆಸಲು ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ.

ಕೊಳೆಗೇರಿ ವಾಸಿಗಳಿಗೆ ಮನೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಮಹತ್ವದ ತೀರ್ಮಾನವನ್ನು ತೆಗೆದುಕೊಂಡಿದೆ. ಫಲಾನುಭವಿಗಳು 4.50 ಲಕ್ಷ ರೂ. ಬದಲಾಗಿ ಒಂದು ಲಕ್ಷ ರೂ. ಪಾವತಿಸಿದರೆ ಸಾಕು ಉಳಿದ 3.50 ಲಕ್ಷ ರೂ. ಗಳನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಮೊದಲ ಹಂತದಲ್ಲಿ 36000 ಮನೆಗಳನ್ನು ಫೆಬ್ರವರಿ ಮಾಹೆಯಲ್ಲಿ ಹಂಚಿಕೆ ಮಾಡಲು ಸರ್ಕಾರವು ಸಿದ್ಧತೆ ಮಾಡಿಕೊಳ್ಳುತ್ತಿದೆ. ಹಾಗಾಗಿ ಬಹುವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ತಲೆ ಮೇಲೆ ಸೂರು ಪಡೆಯುವ ಲಕ್ಷಾಂತರ ಕೊಳೆಗೇರಿ ವಾಸಿಗಳ ಕನಸು ನನಸಾಗಲಿದೆ.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com




# ಯುವಜನರ ಭವಿಷ್ಯಕ್ಕೆ ಶಕ್ತಿ ತುಂಬುವ

## ಯುವನಿಧಿ

### ಪ್ರತಿ ತಿಂಗಳು ನಿರುದ್ಯೋಗ ಭತ್ಯೆ

## ಯೋಜನೆ

ಶಫಿ. ಎಸ್

ದೇಶದಲ್ಲಿ ನಿರುದ್ಯೋಗ ಪ್ರಮಾಣ ಎನ್‌ಎಫ್‌ಎಚ್‌ಎಸ್ ವರದಿ ಪ್ರಕಾರ ಕಳೆದ ಹಣಕಾಸು ವರ್ಷದ ಆರಂಭದಲ್ಲಿ ಶೇ.7.8 ರಷ್ಟಿದ್ದು, ರಾಜ್ಯದಲ್ಲಿ ಇದರ ಪ್ರಮಾಣ ಶೇ.2.3 ರಷ್ಟಿದೆ. ರಾಜ್ಯದಲ್ಲಿ ಪ್ರತಿ ವರ್ಷ 4.81 ಲಕ್ಷ ಪದವೀಧರರು ಹಾಗೂ ಡಿಪ್ಲೊಮಾ ಪಡೆದವರು ಕಾಲೇಜುಗಳಿಂದ ಹೊರಬಂದು ಉದ್ಯೋಗ ಅರಸುವಿಕೆಗೆ ತೊಡಗುತ್ತಾರೆ.

ಯುವಜನರಿಗೆ ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಷ್ಟಿಸುವುದು ಮಾತ್ರವಲ್ಲದೆ, ಶೈಕ್ಷಣಿಕ ಹಿನ್ನೆಲೆಗೆ ತಕ್ಕಂತೆ ಉದ್ಯೋಗ ಪಡೆಯಲು ನೆರವಾಗುವುದು, ಉದ್ಯೋಗ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಕೌಶಲ್ಯ ತರಬೇತಿಯನ್ನು ಒದಗಿಸುವುದು, ಹಾಗೂ ಉದ್ಯೋಗ ಅರಸುವಿಕೆಯ ಸಂದರ್ಭದಲ್ಲಿ ಯುವಜನರಿಗೆ ಪೂರಕವಾಗಿ ಸಾಮಾಜಿಕ ಆರ್ಥಿಕ ಭದ್ರತೆಯನ್ನು ಒದಗಿಸುವುದು ಮುಖ್ಯ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಜನತೆಗೆ ನೀಡಿದ್ದ ಐದನೇ ಗ್ಯಾರಂಟಿ ಯೋಜನೆಯಾದ 'ಯುವನಿಧಿ'ಯನ್ನು ಜಾರಿಗೊಳಿಸುವ ಮೂಲಕ ರಾಜ್ಯ



Downloaded From:www.kpscvaani.com

ಸರ್ಕಾರ ಈ ಅಗತ್ಯ ನೆರವನ್ನು ಒದಗಿಸುವ ಕಾರ್ಯಕ್ಕೆ ಚಾಲನೆ ನೀಡಿದೆ.

ಉದ್ಯೋಗ ಅವಕಾಶಗಳು ವಿರಳವಾಗಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಯುವಕ ಯುವತಿಯರು ಭ್ರಮನಿರಸರಾಗದಂತೆ ಅವರ ಭವಿಷ್ಯಕ್ಕೆ ಶಕ್ತಿ ತುಂಬುವ ನಿಟ್ಟಿನಲ್ಲಿ ಜಾರಿಗೊಳಿಸಿರುವ ಯುವನಿಧಿ ಯೋಜನೆಯು ಯುವ ಜನರ ಬದುಕಿನಲ್ಲಿ ಆಶಾಕಿರಣ ಮೂಡಿಸಿದೆ.

ಈ ಯೋಜನೆ ಕಲಿಕೆಯ ಬಳಿಕ ಉದ್ಯೋಗ ಹುಡುಕಾಟದ ಸಂದರ್ಭದಲ್ಲಿ ದೈನಂದಿನ ಖರ್ಚಿಗೆ ಕುಟುಂಬದವರ ಮುಂದೆ ಕೈಚಾಚುವ ಪರಿಸ್ಥಿತಿಯನ್ನು ತಪ್ಪಿಸಿ, ಯುವಜನರಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮೂಡಿಸಲು ಪೂರಕವಾಗಿದೆ. ಈ ಒತ್ತಡದ ಸಂದರ್ಭದಲ್ಲಿ ಸ್ವಾಭಿಮಾನದಿಂದ ಬದುಕಲು ಹಾಗೂ ಉದ್ಯೋಗ ಕಂಡುಕೊಳ್ಳಲು ಪೂರಕವಾಗಿ ಆರ್ಥಿಕ ನೆರವನ್ನು ಒದಗಿಸಲಿದೆ.

ರಾಷ್ಟ್ರೀಯ ಯುವದಿನದಂದು ಶಿವಮೊಗ್ಗ ನಗರದ ಅಲ್ಲಮಪ್ರಭು ಉದ್ಯಾನವನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭತ್ತ ತುಂಬಿದ ಕೊಳಗದಲ್ಲಿ ಹೊಂಬಾಳೆಯನ್ನು ಅನಾವರಣ ಮಾಡುವ ಮೂಲಕ ಯುವನಿಧಿ ಯೋಜನೆಗೆ ಚಾಲನೆ ನೀಡಿದರು.

"ನಿರುದ್ಯೋಗಿ ಪದವೀಧರರಿಗೆ ಪ್ರತಿತಿಂಗಳು ಭತ್ಯೆ ನೀಡುವುದರ ಜೊತೆಗೆ ಕೌಶಲ್ಯ ತರಬೇತಿಗೆ ಯೋಜನೆ ಸಿದ್ಧಪಡಿಸಲಾಗಿದೆ. ಯುವಕ ಯುವತಿಯರಿಗೆ ಹಣದ ಜತೆಗೆ ಉದ್ಯೋಗ ಪಡೆದುಕೊಳ್ಳಲು ಅಗತ್ಯವಾದ ಕೌಶಲ್ಯ ತರಬೇತಿಯನ್ನೂ ನೀಡಿ ಉದ್ಯೋಗ ಕೊಡಿಸುವ ದಿಕ್ಕಿನಲ್ಲಿ ನಮ್ಮ ಪ್ರಯತ್ನ ಮುಂದುವರೆಯಲಿದೆ. ಯುವಕ ಯುವತಿಯರು ಭ್ರಮನಿರಸನಕ್ಕೆ ಒಳಗಾಗದಂತೆ ಅವರ ಭವಿಷ್ಯಕ್ಕೆ ಶಕ್ತಿ ತುಂಬುವ ಸಲುವಾಗಿ ಯುವನಿಧಿ ಯೋಜನೆ ಜಾರಿ ಮಾಡಿದ್ದೇವೆ." ಎಂದು ಅಂದು ಮುಖ್ಯಮಂತ್ರಿಗಳು ತಿಳಿಸಿದರು.

ಪದವಿ ಮತ್ತು ಡಿಪ್ಲೊಮಾ ಪಡೆದು ಉದ್ಯೋಗ ಲಭಿಸದೆ ಇರುವ ಯುವಕರಿಗೆ ಎರಡು ವರ್ಷದವರೆಗೆ ಅಥವಾ ಉದ್ಯೋಗ ದೊರಕುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪ್ರತಿತಿಂಗಳು ಭತ್ಯೆ ನೀಡಲಾಗುತ್ತದೆ.




**2023ರ ಡಿಸೆಂಬರ್ 26 ರಿಂದ ಈ ವರ್ಷದ ಜನವರಿ 19 ರವರೆಗೆ ಯುವನಿಧಿ ಯೋಜನೆಯಡಿ ಒಟ್ಟು 90,863 ಮಂದಿ ಹೆಸರು ನೋಂದಾಯಿಸಿದ್ದು, ವಿವಿಧ ವಿಶ್ವವಿದ್ಯಾಲಯಗಳು ಎನ್‌ಎಡಿ ಯಲ್ಲಿ 4.12 ಲಕ್ಷ ಪ್ರಮಾಣ ಪತ್ರಗಳನ್ನು ಈಗಾಗಲೇ ಡೆಪಾಸಿಟ್ ಮಾಡಿವೆ. ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡುವ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ.**

ಮಾರುಕಟ್ಟೆಯಲ್ಲಿ ಯಾವ ಕ್ಷೇತ್ರಕ್ಕೆ ಯಾವ ಕೌಶಲ್ಯದ ಅಗತ್ಯವಿದೆಯೋ ಅದಕ್ಕೆ ತಕ್ಕ ಕೌಶಲ್ಯ ತರಬೇತಿಗೆ ಸಹ ಒತ್ತು ನೀಡಲಾಗುತ್ತಿದೆ. ಜೊತೆಗೆ ಉದ್ಯೋಗ ಮೇಳಗಳನ್ನು ಆಯೋಜಿಸಿ, ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡುವುದು ಈ ಯೋಜನೆಯ ಪ್ರಮುಖ ಗುರಿ.

ದೇಶದಲ್ಲಿ 2014ರಲ್ಲಿ ನಿರುದ್ಯೋಗ ಪ್ರಮಾಣ ಶೇ.5.5ರಷ್ಟಿತ್ತು. ಈಗ ಶೇ.10.5ಕ್ಕೆ ಏರಿಕೆಯಾಗಿದೆ. ಇದೆ ಕಾರಣಕ್ಕೆ ರಾಜ್ಯ ಸರ್ಕಾರವು ಯುವನಿಧಿ ಯೋಜನೆ ಜಾರಿಗೊಳಿಸಿದೆ. ಆ ಮೂಲಕ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ರಾಜ್ಯ ಸರ್ಕಾರವು ನುಡಿದಂತೆ ನಡೆದಿದೆ. ಗ್ಯಾರಂಟಿ ಯೋಜನೆಗಳಿಂದ ಪ್ರಸ್ತುತ ರಾಜ್ಯದಲ್ಲಿ 1.20 ಕೋಟಿ ಕುಟುಂಬಗಳಿಗೆ ಪ್ರತಿತಿಂಗಳು ಐದರಿಂದ ಆರು ಸಾವಿರ ರೂ.ವರೆಗೂ ನೆರವು ದೊರೆಯುತ್ತಿದೆ. ಐರೋಪ್ಯ ದೇಶಗಳಲ್ಲಿ ಇಂತಹ ಯೋಜನೆಗಳನ್ನು ಸಾರ್ವತ್ರಿಕ ಮೂಲ ಆದಾಯ ಹೆಚ್ಚಳದ ಕಾರ್ಯಕ್ರಮ ಎಂದು ಕರೆಯಲಾಗುತ್ತದೆ.

ದೇಶದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ. ನಿರುದ್ಯೋಗಿಗಳು ಉದ್ಯೋಗಿಗಳಾಗಿ, ಬಳಿಕ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗಳನ್ನು ಸೃಷ್ಟಿಸಬೇಕು. ಇದು ಯುವನಿಧಿ ಯೋಜನೆಯ ಪ್ರಮುಖ ಧ್ಯೇಯ. ಹಾಗಾಗಿ ಯುವನಿಧಿ ಯೋಜನೆಯ ಪ್ರತಿ ಫಲಾನುಭವಿ ಉದ್ಯೋಗ ಸೃಷ್ಟಿ ಮಾಡಿದರೆ ಯೋಜನೆ ಸಾರ್ಥಕ್ಯ ಪಡೆಯಲಿದೆ.

**–ಡಿ.ಕೆ.ಶಿವಕುಮಾರ್**
ಉಪಮುಖ್ಯಮಂತ್ರಿಗಳು

ಯುವನಿಧಿಯೋಜನೆಯನ್ನು ಘೋಷಿಸುವ ಮೂಲಕ ಸರ್ಕಾರ ಯುವಜನತೆಯನ್ನು ಸೋಮಾರಿಗಳಾಗಿ ಮಾಡುತ್ತಿದೆ ಎಂಬ ಟೀಕೆ ಕೇಳಿ ಬಂದಿದೆ. ಕೇವಲ ನಿರುದ್ಯೋಗ ಭತ್ಯೆ ನೀಡುವುದಷ್ಟೇ ಸರ್ಕಾರದ ಉದ್ದೇಶವಲ್ಲ, ಹಲವಾರು ಆರ್ಥಿಕ/ಕೌಟುಂಬಿಕ ಸಮಸ್ಯೆಗಳಿಂದ



Downloaded From:www.kpscvaani.com






ಬಳಲುತ್ತಿರುವ ಯುವ ಜನರಿಗೆ ಆತ್ಮವಿಶ್ವಾಸ ತುಂಬುವುದಲ್ಲದೇ ತಮ್ಮ ವಿದ್ಯಾರ್ಹತೆಗೆ ತಕ್ಕ ಕೌಶಲ್ಯವನ್ನು ಪಡೆದುಕೊಳ್ಳಲು ಸಹ ಸರ್ಕಾರ ನೆರವಾಗಲಿದೆ. ನಿರುದ್ಯೋಗ ಭತ್ಯೆಯನ್ನು ಪಡೆಯುವ ಅಭ್ಯರ್ಥಿಗಳು ಅನೇಕ ಸ್ಪರ್ಧಾತ್ಮಕ ಪರೀಕ್ಷಾ ಶುಲ್ಕವನ್ನು ಭರಿಸಲು, ಉತ್ತಮ ಪುಸ್ತಕಗಳನ್ನು ಖರೀದಿಸಿ ಅಧ್ಯಯನ ಮಾಡಲು, ಉದ್ಯೋಗ ಸಂದರ್ಶನಕ್ಕೆ ತೆರಳುವ ವೆಚ್ಚಕ್ಕೆ, ಉದ್ಯಮಶೀಲತೆ ತರಬೇತಿ ಪಡೆಯುವ ಮತ್ತು ವ್ಯಕ್ತಿತ್ವ ರೂಪಿಸಿಕೊಳ್ಳಲು ಬಳಸಿಕೊಳ್ಳಲಿದ್ದಾರೆ. ಒಟ್ಟಿನಲ್ಲಿ ಸಣ್ಣಪುಟ್ಟ ಖರ್ಚಿಗೂ ಪೋಷಕರನ್ನು ಅವಲಂಬಿಸುವುದು ತಪ್ಪುತ್ತದೆ.

ನಿರುದ್ಯೋಗ ಭತ್ಯೆಯನ್ನು ಜವಾಬ್ದಾರಿಯುತವಾಗಿ ಉಪಯೋಗಿಸಿಕೊಂಡು ತಂದೆ–ತಾಯಿಗಳಿಗೆ ಹೊರೆಯಾಗದಂತೆ ಸ್ವಾವಲಂಬಿಯಾಗಿ ಜೀವನ ರೂಪಿಸಿಕೊಳ್ಳುವಲ್ಲಿ ಈ ಯೋಜನೆ ಬೆಂಬಲವಾಗಿ ನಿಲ್ಲಲಿದೆ.

ಅಧಿಕಾರ ಸ್ವೀಕರಿಸಿದ ತಕ್ಷಣವೇ ಸಂಪುಟ ಸಭೆ ನಡೆಸಿ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ನಿರ್ಧಾರವನ್ನು ಸರ್ಕಾರವು ಕೈಗೊಂಡಿತು. ಜೂನ್ 11 ರಂದು 'ಶಕ್ತಿ' ಯೋಜನೆಗೆ ಚಾಲನೆ ನೀಡಲಾಯಿತು. ಈಗ 130.28 ಕೋಟಿ ಮಹಿಳೆಯರು ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮಾಡಿದ್ದಾರೆ. 1.65 ಕೋಟಿ ಕುಟುಂಬಗಳು 'ಗೃಹಜ್ಯೋತಿ' ಯೋಜನೆ ಮೂಲಕ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. 'ಅನ್ನಭಾಗ್ಯ' ಯೋಜನೆಗೆ ಹೆಚ್ಚುವರಿ ಐದು ಕೆ.ಜಿ. ಅಕ್ಕಿ ಕೊಡುವ ಭರವಸೆ ನೀಡಲಾಗಿತ್ತು. ಮಾರುಕಟ್ಟೆಯಲ್ಲಿ ಅಕ್ಕಿ ದೊರಕದ ಕಾರಣ ಪ್ರತಿಯೊಬ್ಬರಿಗೂ 170 ರೂ. ನೀಡಲಾಗುತ್ತಿದೆ. 'ಗೃಹಲಕ್ಷ್ಮಿ' ಯೋಜನೆಯಡಿ 1.18 ಕೋಟಿ ಕುಟುಂಬದ ಯಜಮಾನಿಯರಿಗೆ 2 ಸಾವಿರ ರೂ. ನೀಡಲಾಗುತ್ತಿದೆ. ಚುನಾವಣೆ ಸಂದರ್ಭ ನೀಡಿದ್ದ ಐದು ಗ್ಯಾರಂಟಿ ಭರವಸೆಗಳನ್ನು ಸರ್ಕಾರವು ಈಡೇರಿಸಿದೆ.

ಒಟ್ಟಿನಲ್ಲಿ ಬಡವರು ಹಾಗೂ ಮಧ್ಯಮ ವರ್ಗದವರು ಆರ್ಥಿಕವಾಗಿ, ಸಾಮಾಜಿಕವಾಗಿ ಮುಖ್ಯ ವಾಹಿನಿಗೆ ಬರುವಂತಾಗಬೇಕೆಂಬ ಉದ್ದೇಶದಿಂದ ಸಾರ್ವತ್ರಿಕ ಮೂಲ ಆದಾಯದ ತತ್ವದಂತೆ ಆರ್ಥಿಕ ಶಕ್ತಿ ತುಂಬುವ ಸಲುವಾಗಿ ಈ ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ಜಾರಿ ಮಾಡಿದೆ.

**ಯುವನಿಧಿ ಯೋಜನೆಯ ಮಾನದಂಡ**

ಕರ್ನಾಟಕದಲ್ಲಿ ವಾಸ ಇರುವವರು ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಆಯಾ ವಿಶ್ವವಿದ್ಯಾಲಯದವರೇ ನ್ಯಾಷನಲ್ ಅಕಾಡೆಮಿ ಡೆಪಾಸಿಟರಿ (ಎನ್‌ಎಡಿ) ಪ್ರಮಾಣ ಪತ್ರಗಳನ್ನು ಡೆಪಾಸಿಟ್ ಮಾಡಬೇಕು.

2022–23 ಕ್ಕಿಂತ ಮೊದಲು ಉತ್ತೀರ್ಣರಾದವರು ಸ್ಕಿಲ್ ಕನೆಕ್ಟ್ ಪೋರ್ಟಲ್‌ನಲ್ಲಿ (https://skillconnect.kaushalkar.com) ನೋಂದಣಿ ಮಾಡಿಕೊಳ್ಳಬೇಕು. ಅವರಿಗೆ ತಮಗೆ ಬೇಕಾದ ತರಬೇತಿಯನ್ನು ಆಯ್ಕೆ ಮಾಡಿಕೊಳ್ಳಲು ಪೋರ್ಟಲ್‌ನಲ್ಲಿ ಅವಕಾಶ ನೀಡಲಾಗಿದೆ. ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3,000 ರೂ., ಡಿಪ್ಲೊಮಾ ಹೊಂದಿದವರಿಗೆ 1,500 ರೂ. ಗಳನ್ನು ಎರಡು ವರ್ಷದವರೆಗೆ ನೀಡಲಾಗುತ್ತದೆ.

ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸುವವರು ಯಾವುದೇ ಸರ್ಕಾರಿ ಅಥವಾ ಖಾಸಗಿ ಉದ್ಯೋಗಿಯಾಗಿರಬಾರದು. ಸ್ವಯಂ ಉದ್ಯೋಗ ಇರಬಾರದು. ಉನ್ನತ ವಿದ್ಯಾಭ್ಯಾಸ ಮಾಡುತ್ತಿರಬಾರದು. ಈ ಮಾನದಂಡಗಳನ್ನು ಹೊರತುಪಡಿಸಿ ಇನ್ನಾವುದೇ ಷರತ್ತುಗಳು ಈ ಯೋಜನೆಗೆ ಇರುವುದಿಲ್ಲ. ಆದ್ದರಿಂದ ಈ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡು 2022–23 ರಲ್ಲಿ ಪದವಿ, ಡಿಪ್ಲೊಮಾ ಉತ್ತೀರ್ಣರಾಗಿರುವವರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಮೂಲಕ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು. ■

ನಿರುದ್ಯೋಗಿಗಳ ವಿದ್ಯಾರ್ಹತೆ ಮತ್ತು ಆಸಕ್ತಿಗೆ ಅನುಗುಣವಾಗಿ ಕೌಶಲ್ಯ ತರಬೇತಿ ನೀಡಲಾಗುವುದು. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗುವುದು. ಉದ್ಯೋಗ ನೀಡುವ ಕಂಪನಿ ಮತ್ತು ಅಭ್ಯರ್ಥಿಗಳ ನಡುವೆ ಸಂಪರ್ಕ ಕೊಂಡಿಯಾಗಿ ಸರ್ಕಾರ ಕಾರ್ಯನಿರ್ವಹಿಸಲಿದೆ. ನಿರುದ್ಯೋಗ ಸವಾಲು ಎದುರಿಸಲು ಯುವನಿಧಿ ಯೋಜನೆಯನ್ನು ಬೆಂಬಲವಾಗಿ ಬಳಸಿಕೊಳ್ಳುತ್ತೇವೆ.

**ಡಾ.ಶರಣ ಪ್ರಕಾಶ್ ಪಾಟೀಲ್**
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು



Downloaded From:www.kpscvaani.com

# ಗೃಹ ಇಲಾಖೆ ಆಡಳಿತಕ್ಕೆ

## ಆಧುನಿಕ ತಂತ್ರಜ್ಞಾನದ ಸ್ಪರ್ಶ

ನಂಜುಂಡಪ್ಪ. ವಿ

**ಸದೃಢ ಪೊಲೀಸ್ ವ್ಯವಸ್ಥೆಗಾಗಿ ಗೃಹ ಇಲಾಖೆಯಿಂದ ಹಲವು ಹೊಸ ಉಪಕ್ರಮಗಳ ಮೂಲಕ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ.**

ಯಾವುದೇ ಸರ್ಕಾರಕ್ಕೆ ಕಾನೂನು ಸುವ್ಯವಸ್ಥೆ ಅತ್ಯಂತ ಮುಖ್ಯವಾದದ್ದು. ಸರ್ಕಾರದ ಯಶಸ್ಸು, ಉತ್ತಮ ಆಡಳಿತಕ್ಕೆ ಕಾನೂನು ಸುವ್ಯವಸ್ಥೆ ಪ್ರಮುಖ ಮಾನದಂಡ. ಒಳ್ಳೆಯ ಮತ್ತು ಕೆಟ್ಟ ಹೆಸರು ಬರುವುದು ಕೂಡ ಕಾನೂನು ಸುವ್ಯವಸ್ಥೆಯಿಂದಲೇ. ಹೀಗಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಚಾರದಲ್ಲಿ ಹೆಚ್ಚು ಮುನ್ನೆಚ್ಚರಿಕೆಯನ್ನು ವಹಿಸುತ್ತಾರೆ. ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ ನಡೆಸಿದ ಮೊದಲ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಪೊಲೀಸರಿಗೆ ಸಾಕಷ್ಟು ಸಲಹೆ, ಸೂಚನೆಗಳನ್ನು ನೀಡಿದ್ದರು. ಇದರ ಪರಿಣಾಮ ಗೃಹ ಇಲಾಖೆಯಲ್ಲಿ ಭೌತಿಕವಾಗಿ ಸುಧಾರಣೆಗಳು ಕಂಡು ಬಂದಿವೆ.

ಮಹಿಳೆಯರು, ಪರಿಶಿಷ್ಟ ಜಾತಿ, ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಶೇ 50ರಷ್ಟು ಜಾಸ್ತಿಯಾಗಿರುವುದು ಉತ್ತಮ ಬೆಳವಣಿಗೆ. ಪೊಲೀಸರು ಜನಸ್ನೇಹಿಯಾಗಿರಬೇಕು. ನೊಂದವರಿಗೆ ಸಾಂತ್ವನ ಹೇಳಿ, ಸಂಕಷ್ಟಗಳಿಗೆ ಸ್ಪಂದಿಸಬೇಕು. ವಿಶ್ವಾಸ ಬರುವ ರೀತಿಯಲ್ಲಿ ಕೆಲಸ ಮಾಡಬೇಕು. ಒಂಟಿಯಾಗಿ ವಾಸಿಸುವವರಿಗೆ ರಕ್ಷಣೆ ನೀಡಬೇಕು. ಹಿರಿಯ ಅಧಿಕಾರಿಗಳು, ನಿರ್ಧಿಷ್ಟವಾಗಿ ಎಸ್.ಪಿ, ಎಸಿಪಿ, ಡಿಐಜಿ ದರ್ಜೆಯ ಅಧಿಕಾರಿಗಳು ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಮೇಲ್ವಿಚಾರಣೆ ಮಾಡಬೇಕು. ಬೀಟ್ ಪೊಲೀಸರು ಹೆಚ್ಚಿನ ನಿಗಾ ವಹಿಸಬೇಕು. ಹೊಯ್ಸಳ ಗಸ್ತು ಹೆಚ್ಚಬೇಕು ಎಂದು ಆದೇಶಿಸಿದ್ದರು.

ಇದರಿಂದ ಸಾಕಷ್ಟು ಸಕಾರಾತ್ಮಕ ಬದಲಾವಣೆಗಳು ಕಂಡು ಬಂದಿವೆ. ನೂತನ ಸರ್ಕಾರದಲ್ಲಿ ಸಣ್ಣಪುಟ್ಟ ಪ್ರಕರಣಗಳು ವರದಿಯಾಗಿದ್ದು, ಕೋಮು ಗಲಭೆಗಳು ನಡೆದಿಲ್ಲ. ಹಾಲಿ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ತಿಂಗಳು ಪೂರ್ಣಗೊಂಡಿದ್ದು, ಸಣ್ಣಪುಟ್ಟ ಕಾನೂನು ಸುವ್ಯವಸ್ಥೆ ಸಮಸ್ಯೆಗಳು







Downloaded From:www.kpscvaani.com




ಬಿಟ್ಟರೆ ಗಂಭೀರ ಸವಾಲುಗಳು ಎದುರಾಗಿಲ್ಲ. ಕಾನೂನು ಕೈಗೆತ್ತಿಕೊಳ್ಳುವ ಶಕ್ತಿಗಳ ವಿರುದ್ಧ ಮುಖ್ಯಮಂತ್ರಿಯವರು ಕಠೋರವಾಗಿ ವರ್ತಿಸುತ್ತಿದ್ದಾರೆ. ದುರ್ಬಲರ ರಕ್ಷಣೆಗೆ ಆದ್ಯತೆ ನೀಡಿದ್ದಾರೆ. ಶಾಂತಿಯುತ ವಾತಾವರಣ ಇದ್ದರೆ ಹೂಡಿಕೆ ಹೆಚ್ಚುವ, ಉದ್ಯೋಗ ಸೃಷ್ಟಿಯ ಜೊತೆಗೆ ಆರ್ಥಿಕ ಬೆಳವಣಿಗೆಯಾಗುತ್ತದೆ. ಅದಕ್ಕಾಗಿಯೇ ಸದೃಢ ಪೊಲೀಸ್ ವ್ಯವಸ್ಥೆ ಅಗತ್ಯ ಎಂದು ಪ್ರತಿಪಾದಿಸುತ್ತಿರುತ್ತಾರೆ.

ಸದ್ಯದಲ್ಲೇ ಲೋಕಸಭಾ ಚುನಾವಣೆ ನಡೆಯಲಿರುವುದರಿಂದ ದೇಶವು ಮತ್ತೊಂದು ಜನಾದೇಶಕ್ಕೆ ಸಜ್ಜಾಗುತ್ತಿದೆ. ಹಾಗಾಗಿ ರಾಜ್ಯದ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ನಡೆಸುವ ಜವಾಬ್ದಾರಿ ಪೊಲೀಸರ ಮೇಲಿದೆ. ಚುನಾವಣೆಗೆ ಮುನ್ನ ಪೊಲೀಸರನ್ನು ಮತದಾನದ ಅಖಾಡಕ್ಕೆ ಸಜ್ಜುಗೊಳಿಸಬೇಕಿದೆ. ಕಾನೂನು ಬಾಹಿರ ಶಕ್ತಿಗಳು, ರೌಡಿಗಳು, ಭೀತಿಯ ವಾತಾವರಣ ಸೃಷ್ಟಿಸುವವರು, ಅಲ್ಪ ಸಂಖ್ಯಾತರು, ದುರ್ಬಲರನ್ನು ಹೆದರಿಸಿ ಮುಕ್ತ ಮತದಾನಕ್ಕೆ ಅಡ್ಡಿಪಡಿಸುವವರನ್ನು ಹತ್ತಿಕ್ಕಿ ಗಡಿಪಾರು ಮಾಡುವುದು ಪೊಲೀಸರ ಪರಮ ಕರ್ತವ್ಯ.

ಹೀಗಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನವರಿ 16 ರಂದು ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್ ಅವರ ಜೊತೆಗೂಡಿ ರಾಜ್ಯದ ಪೊಲೀಸ್ ಮಹಾನಿರ್ದೇಶಕರ ಪ್ರಧಾನ ಕಚೇರಿಯಲ್ಲಿ ಗೃಹ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು. ಪ್ರತಿವರ್ಷ ಹೊಸ ವರ್ಷದ ಆರಂಭದಲ್ಲಿ ಪೊಲೀಸ್ ಇಲಾಖೆ ಹಿರಿಯ ಅಧಿಕಾರಿಗಳ ವಾರ್ಷಿಕ ಸಮಾವೇಶ ನಡೆಯುತ್ತದೆ. ಈ ಬಾರಿಯ ಸಭೆಯಲ್ಲಿ ಮುಖ್ಯಮಂತ್ರಿಯವರು ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚಿಸಿ, ಬಿಗಿ ಆಡಳಿತಕ್ಕೆ ಅಗತ್ಯ ಮಾರ್ಗದರ್ಶನ ಮಾಡಿದ್ದಾರೆ.

> **ಉತ್ತಮ ಕಾನೂನು ಸುವ್ಯವಸ್ಥೆ ರಾಜ್ಯದ ಅಭಿವೃದ್ಧಿಗೆ ಪೂರಕ.ಇದರಿಂದ ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕತೆಯ ಹೆಚ್ಚಳ ಸಾಧ್ಯ.**
>
> **ಸಿದ್ದರಾಮಯ್ಯ**
> ಮುಖ್ಯಮಂತ್ರಿಗಳು

ಪೊಲೀಸ್ ಆಡಳಿತ ವ್ಯವಸ್ಥೆಯ ಸುಧಾರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಒಲವು ವ್ಯಕ್ತಪಡಿಸಿದ್ದು, ಹಲವು ಅತ್ಯಾಧುನಿಕ ಉಪಕ್ರಮಗಳಿಗೆ ಇದೇ ಸಂದರ್ಭದಲ್ಲಿ ಚಾಲನೆ ನೀಡಿದರು. ಪೊಲೀಸ್ ಇಲಾಖೆಯಲ್ಲಿ ಭದ್ರತೆಗೆ ಬಳಕೆಯಾಗುವ ವಿಶೇಷ ವಾಹನ, ತನಿಖೆಯಲ್ಲಿ ವಿಧಿವಿಜ್ಞಾನ ವಿಭಾಗ ಅನುಸರಿಸುತ್ತಿರುವ ನೂತನ ತನಿಖಾ ಉಪಕ್ರಮಗಳನ್ನು ವೀಕ್ಷಿಸಿದರು. 13 ಮೊಬೈಲ್ ಫೋರೆನ್ಸಿಕ್ ವ್ಯಾನ್‌ಗಳು, ಅಪರಾಧ ಪ್ರಕರಣದಲ್ಲಿ ಬಳಕೆ ಆಗುವ 16 ಬಗೆಯ ಕಿಟ್‌ಗಳು, ಪೊಲೀಸರು ತನಿಖೆಯಲ್ಲಿ ಬಳಸುವ ಕೆನೋಪಿ, ಜೆನರೇಟರ್, ಲೈಟ್‌ಗಳು, ಮುಂತಾದವುಗಳನ್ನು ಸಹ ಪರಿಶೀಲಿಸಿದರು.

ರಾಜ್ಯ ಪೊಲೀಸ್ ಇಲಾಖೆಯು ಪ್ರಥಮ ಬಾರಿಗೆ 206 ಸೀನ್ ಆಫ್ ಕ್ರೈಂ ಆಫೀಸರ್ (ಎಸ್‌ಒಸಿಒ) ಗಳನ್ನು ನೇಮಕ ಮಾಡಿಕೊಂಡಿದೆ. ಈ ಅಧಿಕಾರಿಗಳು ವಿಧಿವಿಜ್ಞಾನ ವಿಷಯದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪಡೆದವರಾಗಿದ್ದು, ಅಪರಾಧದ ಸ್ಥಳದಲ್ಲಿ ಸಾಕ್ಷ್ಯಗಳನ್ನು



Downloaded From:www.kpscvaani.com

ಸಂರಕ್ಷಿಸಿ, ಸಂಗ್ರಹಿಸಿ, ವೈಜ್ಞಾನಿಕವಾಗಿ ಸಂರಕ್ಷಿಸಲು ತನಿಖಾಧಿಕಾರಿಗಳಿಗೆ ಸಹಾಯ ಮಾಡುತ್ತಾರೆ. ಕ್ರೈಂ ಆಫೀಸರ್‌ಗಳು ಎಫ್.ಎಸ್.ಎಲ್, ಎನ್.ಎಫ್.ಎಸ್.ಯು, ಗುಜರಾತ್, ಕೆ.ಪಿ.ಎ ಬಾಂಬ್ ಸ್ಕ್ವಾಡ್, ಡಾಗ್ ಸ್ಕ್ವಾಡ್, ಸಿ.ಐ.ಡಿ, ಫೊರೆನ್ಸಿಕ್ ಮೆಡಿಸಿನ್ ಮುಂತಾದ ಕಡೆಗಳಲ್ಲಿ ತರಬೇತಿ ಪಡೆದಿದ್ದಾರೆ. ಪ್ರಸ್ತುತ ಇವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿದ್ದು, ಜಿಲ್ಲೆಯ ಡಿ.ಪಿ.ಓ. ಕಛೇರಿಯಿಂದ ಕಾರ್ಯ ನಿರ್ವಹಿಸಲಿದ್ದಾರೆ. ಕೃತ್ಯ ನಡೆದ ಸ್ಥಳಕ್ಕೆ ತ್ವರಿತವಾಗಿ ಭೇಟಿ ನೀಡಿ ತನಿಖೆಗೆ ನೆರವಾಗುತ್ತಾರೆ. ಈ ಉಪಕ್ರಮದ ಬಗ್ಗೆಯೂ ಮುಖ್ಯಮಂತ್ರಿಯವರು ಆಸಕ್ತಿಯಿಂದ ಮಾಹಿತಿ ಪಡೆದರು.

ಬಾಂಬ್ ನಿಷ್ಕ್ರಿಯೆ ಪತ್ತೆ ಮತ್ತು ನಿಷ್ಕ್ರಿಯ ದಳದ ಮೊಬೈಲ್ ಲ್ಯಾಬ್, ವಿಧಿ ವಿಜ್ಞಾನ ಮೊಬೈಲ್ ಲ್ಯಾಬ್ ವಾಹನ, ಕಂಟ್ರೋಲ್ ಸೆಂಟರ್ ವಾಹನಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ಸಂದರ್ಭದಲ್ಲಿ ಹಸಿರು ನಿಶಾನೆ ತೋರಿಸಿದರು. ಪೊಲೀಸ್ ಇಲಾಖೆಗೆ ಸಂಬಂಧಿಸಿದ ಪೊಲೀಸ್ ಮಿತ್ರ ಚಾಟ್ ಬಾಟ್‌ಗೆ ಕೂಡ ಚಾಲನೆ ನೀಡಿದರು. ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರ ನೀಡುವ, ಅವರ ಸಂದೇಹಗಳಿಗೆ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ "ಪೊಲೀಸ್ ಮಿತ್ರ ಚಾಟ್ ಬಾಟ್" ಉಪಕ್ರಮ ಸಾರ್ವಜನಿಕರ ಗೊಂದಲಗಳನ್ನು ಬಹುಮಟ್ಟಿಗೆ ಪರಿಹರಿಸುವ ನಿರೀಕ್ಷೆ ಹೊಂದಲಾಗಿದೆ. ಅಲ್ಲದೇ ಸಿಜಿ ನೋಂದಣಿ ಪೋರ್ಟಲ್, ರಾಜ್ಯ ಪೊಲೀಸ್ ಕೃತಕ ಬುದ್ದಿಮತ್ತೆ ತಂತ್ರಾಂಶ, ಆರ್ಥಿಕ ಇಂಟೆಲಿಜೆನ್ಸ್ ತಂತ್ರಾಂಶಗಳನ್ನು ಮುಖ್ಯಮಂತ್ರಿಯವರು ಬಿಡುಗಡೆಗೊಳಿಸಿದರು. ಕೃತಕ ಬುದ್ದಿಮತ್ತೆ ಇದೀಗ ಎಲ್ಲೆಡೆ ವ್ಯಾಪಕ ಚರ್ಚೆ ನಡೆಯುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಪೊಲೀಸ್ ಇಲಾಖೆ ಮಂಚೂಣಿಯಲ್ಲಿದೆ. ಇದೇ ಮೊದಲ ಬಾರಿಗೆ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವ "ಸಂಕ್ಷಿಪ್ತ ಸೈಬರ್ ಅಪರಾಧ ತನಿಖಾ ಕೈಪಿಡಿ" ಬಿಡುಗಡೆ ಮಾಡಿದ್ದು, ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಸಹಾಯ ಮಾಡಲಿದೆ.

ಎಫ್.ಐ.ಆರ್ ದಾಖಲಾತಿಯಿಂದ ತನಿಖೆ ಪೂರ್ಣಗೊಂಡು ಪ್ರಕರಣ ವಿಲೇವಾರಿಯಾಗುವ ತನಕ ಸಮಗ್ರ ನಿರ್ವಹಣೆ ಮಾಡುವ "ಪೊಲೀಸ್ ಐಟಿ – ವಿ2 ತಂತ್ರಾಂಶ", ಮಾನವ ಕಳ್ಳಸಾಗಣೆ, ಕಾರ್ಯವಿಧಾನಗಳು, ಸಂತ್ರಸ್ತರಿಗೆ ಆಶ್ರಯ ತಂಗುದಾಣದ ಬಗ್ಗೆ ಮಾಹಿತಿ ನೀಡುವ "ಎಟಿಪಿಎ ಸರಳ ಮೊಬೈಲ್ ಆ್ಯಪ್ "ಬಿಡುಗಡೆ





ಮಾಡಿದರು. ಕಾನೂನು ಸುವ್ಯವಸ್ಥೆ ನಿವಾರಣೆಗೆ ನಿರ್ಣಾಯಕವಾಗಿರುವ "ಕೆ.ಎಸ್.ಪಿ.ಎ.ಐ" ತಂತ್ರಾಂಶ ಹಾಗೂ ಹೆಚ್ಚುತ್ತಿರುವ ಆರ್ಥಿಕ ಅಪರಾಧಗಳ ಪತ್ತೆಗಾಗಿ "ಆರ್ಥಿಕ ಅಪರಾಧಗಳ ತನಿಖಾ ತಂತ್ರಾಂಶ–ದತ್ತಾಂಶಗಳ ಸಂಗ್ರಹಣೆಗಾಗಿ "ಡೇಟಾಥಾನ್–2024" ವ್ಯವಸ್ಥೆಯನ್ನು ಶುಭಾರಂಭ ಮಾಡಿದರು.

ಆಡಳಿತಕ್ಕೆ ಆಧುನಿಕ ಸ್ಪರ್ಶ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸೈಬರ್ ಅಪರಾಧಗಳನ್ನು ಹತ್ತಿಕ್ಕಲು ಗೃಹ ಇಲಾಖೆಯು ಮುಂದಾಗಿದೆ. ಸೈಬರ್ ಅಪರಾಧಗಳನ್ನು ನಿಗ್ರಹಿಸಲು ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಶಾಖೆ ಮತ್ತು ತಂತ್ರಜ್ಞಾನವಿದೆ. ತಂತ್ರಜ್ಞಾನ ಬೆಳೆದಂತೆಲ್ಲಾ ವಿವಿಧ ಸ್ವರೂಪದಲ್ಲಿ ಎದುರಾಗುತ್ತಿರುವ ಸೈಬರ್ ಅಪರಾಧಗಳನ್ನು ಪತ್ತೆ ಮಾಡಲು ಸೈಬರ್ ಪೊಲೀಸ್ ಠಾಣೆಗಳಿಗೆ ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗುವುದು ಎಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಘೋಷಿಸಿದ್ದಾರೆ. ಪೊಲೀಸ್ ಠಾಣೆಗಳ ಬಗ್ಗೆ ನಂಬಿಕೆ ಬರುವಂತಹ ಜನ ಸ್ನೇಹಿ ಪೊಲೀಸ್ ವಾತಾವರಣ ನಿರ್ಮಾಣ ಮಾಡಬೇಕು. ಎಫ್.ಐ.ಆರ್ ದಾಖಲಾದ ನಂತರ ಗುಣಮಟ್ಟದ ತನಿಖೆಯಾದರೆ ಶಿಕ್ಷೆ ಪ್ರಮಾಣ ಜಾಸ್ತಿಯಾಗುತ್ತದೆ. ಹೀಗಾಗಿ ತನಿಖೆಯ ಗುಣಮಟ್ಟ ಹೆಚ್ಚಿಸಬೇಕು. ಅದಕ್ಷತೆ, ನಿರ್ಲಕ್ಷ್ಯತನ, ಬೇಜವಾಬ್ದಾರಿತನವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಅಪರಾಧಗಳ ತಡೆಗೆ ಗುಪ್ತದಳ ಪ್ರಮುಖ ಪಾತ್ರ ವಹಿಸುತ್ತದೆ. ಗೃಹ ಇಲಾಖೆ ಗೃಹ ಸಚಿವರ ಕೈಯಲ್ಲಿದ್ದರೆ ಗುಪ್ತದಳ ಮುಖ್ಯಮಂತ್ರಿಗಳ ಬಳಿ ಇರುತ್ತದೆ. ಹೀಗಾಗಿಯೇ ಗುಪ್ತದಳದ ಮಹತ್ವವನ್ನು ಅರಿತಿರುವ ಸಿದ್ದರಾಮಯ್ಯ ಅವರು, ಗುಪ್ತದಳಕ್ಕೆ ಹೊಸ ಸ್ವರೂಪ ನೀಡಲು ಸಜ್ಜಾಗಿದ್ದಾರೆ. ಸ್ವಾತಂತ್ರ್ಯ ನಂತರ ಇದೇ ಮೊದಲ ಬಾರಿಗೆ ಗುಪ್ತದಳಕ್ಕೆ ಪ್ರತ್ಯೇಕವಾಗಿ ನೇಮಕಾತಿ ಮತ್ತು ನುರಿತ ತಜ್ಞರಿಂದ ತರಬೇತಿಗೆ ವ್ಯವಸ್ಥೆ ಮಾಡುತ್ತಿದ್ದಾರೆ. ಇದು ಮಹತ್ವದ ಸುಧಾರಣಾ ಕ್ರಮವಾಗಿದೆ. ಬೆಂಗಳೂರು ನಗರ ದಿನೇ ದಿನೇ ನಿರೀಕ್ಷೆಗೂ ಮೀರಿ ಬೆಳೆಯುತ್ತಿದ್ದು, ಯಾರ ನಿಯಂತ್ರಣಕ್ಕೂ ಸಿಗುತ್ತಿಲ್ಲ. ಜನಸಂಖ್ಯೆ ಒಂದೂವರೆ ಕೋಟಿಗೆ ಏರಿದೆ. ನಗರದ ಕಾನೂನು ಸುವ್ಯವಸ್ಥೆ ನಿಯಂತ್ರಿಸುವುದು ಬಹುದೊಡ್ಡ ಸವಾಲಾಗಿದ್ದು, ನಗರದ ಶಾಂತಿ ಕಾಪಾಡಲು 8 ಹೆಚ್ಚುವರಿ ಡಿಸಿಪಿ ಹುದ್ದೆಗಳನ್ನು ಸೃಜಿಸಲು ನಿರ್ಧರಿಸಿದ್ದಾರೆ.



Downloaded From:www.kpscvaani.com



ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಎಫ್.ಐ.ಆರ್‌ಗಳು ಆನ್‌ಲೈನ್‌ನಲ್ಲಿ ಜನ ಸಾಮಾನ್ಯರಿಗೆ ದೊರೆಯುವಂತಹ ವ್ಯವಸ್ಥೆ ಕಲ್ಪಿಸಲಾಗಿದೆ. ಪೊಲೀಸರಿಂದ ಒಂದು ಜವಾಬ್ದಾರಿಯುತ ಸರ್ಕಾರ ಏನನ್ನು ನಿರೀಕ್ಷೆ ಮಾಡುತ್ತದೆ ಎಂಬುದನ್ನು ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಸೂಚ್ಯವಾಗಿ ತಿಳಿ ಹೇಳಿದ್ದಾರೆ. ಎಸ್.ಸಿ, ಎಸ್.ಟಿ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಹೆಚ್ಚು ಮಾಡಬೇಕು. ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷೆ ಪ್ರಮಾಣ ಶೇ 33 ರಷ್ಟಿದ್ದು, ರಾಜ್ಯದಲ್ಲಿ ಉತ್ತಮ ಪ್ರಗತಿ ಸಾಧಿಸಬೇಕು. ಆರೋಪಪಟ್ಟಿ ಸಲ್ಲಿಸುವುದು ವಿಳಂಬವಾದರೆ ಶಿಕ್ಷೆ ಪ್ರಮಾಣ ಕಡಿಮೆಯಾಗಲಿದೆ. 60 ದಿನಗಳಲ್ಲಿ ದೋಷಾರೋಪಣೆ ಸಲ್ಲಿಸಬೇಕು ಎಂದು ಸ್ಪಷ್ಟ ಸೂಚನೆ ನೀಡಿದ್ದಾರೆ.

ಕರ್ನಾಟಕ ಎಂದು ನಾಮಕರಣವಾದ ಹಿನ್ನೆಲೆಯಲ್ಲಿ ಈ ವರ್ಷ ಸುವರ್ಣ ಮಹೋತ್ಸವ ಆಚರಿಸಲಾಗುತ್ತಿದೆ. ಮೈಸೂರು ಪೊಲೀಸ್ ಎಂಬ ಹೆಸರು ಕೂಡ ಇದೇ ಸಂದರ್ಭದಲ್ಲಿ ಬದಲಾವಣೆಯಾಗಿದ್ದು, ಕರ್ನಾಟಕ ಪೊಲೀಸ್ ಎಂದು ನಾಮಕರಣವಾಗಿ 50 ವರ್ಷ ಸಂದಿದೆ. ಇದರ ನೆನಪಿಗಾಗಿ ಸುವರ್ಣ ಪೊಲೀಸ್ ಭವನ ಕಟ್ಟಡ ನಿರ್ಮಾಣಕ್ಕೆ ಕ್ರಮ, ಎಲ್ಲಾ ಪೊಲೀಸರಿಗೆ ಬೆಳ್ಳಿ ಪದಕ. ವೈದ್ಯಕೀಯ ತಪಾಸಣೆ ಭತ್ಯೆ 1,000 ದಿಂದ 1,500 ರೂಪಾಯಿಗೆ ಹೆಚ್ಚಳ ಮಾಡಲಾಗುವುದು ಎಂದು ಮುಖ್ಯಮಂತ್ರಿಯವರು ಘೋಷಿಸಿದ್ದಾರೆ. ಕಳೆದ 2013 ರಲ್ಲಿ ಸಿದ್ದರಾಮಯ್ಯ ಅವರೇ ಪೊಲೀಸರಿಗೆ ಮೊದಲ ಬಾರಿಗೆ ವೈದ್ಯಕೀಯ ಭತ್ಯೆ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು ಎಂಬುದು ವಿಶೇಷ.

ರಾಜ್ಯವನ್ನು ಕಾಡುತ್ತಿರುವ ಮತ್ತೊಂದು ಪ್ರಮುಖ ಸಮಸ್ಯೆ ಮಾದಕ ದ್ರವ್ಯ ಪಿಡುಗು. ವಿದ್ಯಾರ್ಥಿ ಸಮುದಾಯದ ಹಿತ ದೃಷ್ಟಿಯಿಂದ ಕರ್ನಾಟಕವನ್ನು ಮಾದಕ ದ್ರವ್ಯ ಮುಕ್ತ ರಾಜ್ಯವನ್ನಾಗಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಅವರು ಸಭೆಯಲ್ಲಿ ತಮ್ಮ ಅಚಲ ನಿಲುವನ್ನು ಪ್ರಕಟಿಸಿದ್ದಾರೆ. ಆರು ತಿಂಗಳ ಹಿಂದೆ ನಡೆದ ಸಭೆಯಲ್ಲೂ ಇದೇ ವಿಚಾರವನ್ನು ಮುಖ್ಯಮಂತ್ರಿ ಅವರು ಪ್ರಸ್ತಾಪಿಸಿದ್ದ ಪರಿಣಾಮ 27 ಕೋಟಿ ರೂಪಾಯಿ ಮೊತ್ತದ 4,484 ಕೆ.ಜಿ. ಗಾಂಜಾ, 23 ರಾಸಾಯನಿಕ ಮಾದರಿಯ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಫೆಬ್ರವರಿ ಮೊದಲ ವಾರ ಇವುಗಳನ್ನು ನಾಶಪಡಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.

**ರಾಜ್ಯದಲ್ಲಿ ಕೋಮುಗಲಭೆಗಳು ನಡೆದಿಲ್ಲ. ಇದು ಉತ್ತಮ ಕಾನೂನು ಸುವ್ಯವಸ್ಥೆಗೆ ಸಾಕ್ಷಿ. ಆದರೆ ಸೈಬರ್ ಕ್ರೈಂ ಹೆಚ್ಚಾಗಿರುವುದರಿಂದ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಸೈಬರ್ ಅಪರಾಧ ನಿಗ್ರಹಕ್ಕೆ ಗೃಹ ಇಲಾಖೆಯು ಸಿದ್ಧತೆಯನ್ನು ನಡೆಸಿದೆ.**

ಸಿಇಎನ್ ಠಾಣಾಧಿಕಾರಿಗಳ ಹುದ್ದೆಯನ್ನು ಎಸಿಪಿ ಮತ್ತು ಡಿಸಿಪಿ ಮಟ್ಟಕ್ಕೆ ಉನ್ನತೀಕರಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ. ವರ್ಗಾವಣೆಗಳಿಗಾಗಿ ಪೊಲೀಸರು ಹಾತೊರೆಯುವುದು, ಜಾತಿ ಬಳಸುವುದು ಅತ್ಯಂತ ಕೆಟ್ಟದ್ದು. ನಮ್ಮದು ಜಾತ್ಯತೀತ ರಾಷ್ಟ್ರ. ನಾವುಗಳೇ ನಮ್ಮ ಸಂವಿಧಾನದ ಆಶಯಗಳನ್ನು ಬಲಪಡಿಸಬೇಕು ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ.


Downloaded From:www.kpscvaani.com



## ಹೆಚ್ಚಿನ ಪಾಲುದಾರರನ್ನು ಆಕರ್ಷಿಸಿದ

# ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳ

ವೈ.ಸಿ. ಸಂಪತ್ ಕುಮಾರ್

**ಭೂ**ಮಿಯ ಮೇಲಿರುವ ಎಲ್ಲಾ ಜೀವಿಗಳಿಗೂ ಆಹಾರ ಬೇಕೇ ಬೇಕು. ಆಹಾರವಿಲ್ಲದೇ ನಮ್ಮ ಬದುಕಿಲ್ಲ. ಆದ್ದರಿಂದ ಆಹಾರ ಬದುಕಿನ ಪ್ರಾಥಮಿಕ ಅವಶ್ಯಕತೆಗಳಲ್ಲಿ ಒಂದಾಗಿದೆ. ಆಹಾರದಿಂದಲೇ ಆರೋಗ್ಯ. ನಾವು ಆಯ್ಕೆ ಮಾಡಿಕೊಳ್ಳುವ ಆಹಾರ ಪದಾರ್ಥಗಳು ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ ಎಂಬುದು ಈಗಾಗಲೇ ವೈಜ್ಞಾನಿಕವಾಗಿ ಸಾಬೀತಾಗಿದೆ.

ಧಾನ್ಯಗಳು ನಮ್ಮ ಸಾಂಪ್ರದಾಯಿಕ ಆಹಾರಗಳು. ಹತ್ತಾರು ಸಾವಿರ ವರ್ಷಗಳ ಹಿಂದೆಯೇ ಧಾನ್ಯಗಳನ್ನು ಮಾನವರು ಬೆಳೆಯುತ್ತಿದ್ದರು. ನಮ್ಮ ಪ್ರಾಚೀನ ಕವಿಗಳು ಅಂದಿನ ಕಾಲದ ಆಹಾರಕ್ರಮದ ಬಗ್ಗೆ ಹೀಗೆ ಬರೆದಿದ್ದಾರೆ.

**ನವಣೆಯನು ತಿಂಬುವನು**
**ಹವಣಾಗಿ ಇರುತಿಹನು ಬವಣೆಗಳಿಗವನು ಒಳಬೀಳನೀ ಮಾತು**
**ಕವಣೆಲ್ಲೆಂದ ಸರ್ವಜ್ಞ**

**ರಾಗಿಯನ್ನು ಉಂಬುವ ನಿರೋಗಿ ಎಂದೆನಿಸುವನು**
**ರಾಗಿಯು ಭೋಗಿಗಳಿಗಲ್ಲ**
**ಬಡವರಿಂಗಾಗಿ ಬೆಳೆದಿಹುದು ಸರ್ವಜ್ಞ**

ಕವಿ ಸರ್ವಜ್ಞನ ಈ ವಚನಗಳಲ್ಲಿ ಧಾನ್ಯ ಎದ್ದು ಕಾಣುವುದು. ಆಹಾರ ಪದಾರ್ಥಗಳಲ್ಲಿ ಧಾನ್ಯಗಳೇ ಅತ್ಯಂತ ಹಳೆಯ ಆಹಾರ. ರಾಗಿ, ಜೋಳ, ಸಜ್ಜೆ, ನವಣೆ, ಸಾಮೆ, ಹಾರಕ, ಬರಗು, ಕೊರಲೆ ಇವು ಕೆಲವು ಧಾನ್ಯಗಳು. ಈ ಧಾನ್ಯಗಳ ಕಾಳುಗಳು ಗಾತ್ರದಲ್ಲಿ ಚಿಕ್ಕದಾಗಿರುವುದರಿಂದ ಇವುಗಳನ್ನು ಕಿರುಧಾನ್ಯಗಳು ಎನ್ನುತ್ತಾರೆ. ಅಕ್ಕಿ, ಗೋಧಿ ಮತ್ತು ಜೋಳದ ಹೊರತಾಗಿ ದೊರೆಯುವ ಧಾನ್ಯಗಳೇ ಕಿರುಧಾನ್ಯಗಳು. ಇವುಗಳು ದುಂಡಗೆ ಹಲವು ಬಣ್ಣಗಳಲ್ಲಿವೆ. ಈ ಒಂದೊಂದು ಕಿರುಧಾನ್ಯಕ್ಕೂ ಅದರದ್ದೇ ಆದ ರುಚಿಯಿದೆ. ಕೆಲವು ಕಿರುಧಾನ್ಯಗಳು ಸ್ವಲ್ಪ ಸಿಹಿಯಾಗಿದ್ದರೆ, ಕೆಲವು ಸ್ವಲ್ಪ ಸಪ್ಪೆಯಾಗಿವೆ. ಅತಿ


Downloaded From:www.kpscvaani.com



ಹೆಚ್ಚು ಪೌಷ್ಟಿಕಾಂಶವನ್ನು ಹೊಂದಿರುವ ಕಾರಣ ಕಿರುಧಾನ್ಯವನ್ನು 'ಸಿರಿಧಾನ್ಯಗಳು' ಎಂದು ಕರೆಯಲಾಗಿದೆ.

ಇಂದು ಜಗತ್ತಿನಾದ್ಯಂತ ಸಾವಿರಕ್ಕೂ ಮೇಲ್ಪಟ್ಟು ವಿವಿಧ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಈ ಬೆಳೆಗಳನ್ನು ಬೆಳೆಯುವ ದೇಶಗಳಲ್ಲಿ ನಮ್ಮ ಭಾರತ ಅಗ್ರಸ್ಥಾನದಲ್ಲಿದೆ. ಸಿರಿಧಾನ್ಯಗಳ ಕೃಷಿಯು ಕೇವಲ ಸಾಂಪ್ರದಾಯಿಕ ಕೃಷಿಯಲ್ಲ. ಇದೊಂದು ವಿಶೇಷ ಮತ್ತು ವಿಶಿಷ್ಟ ಕೃಷಿಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸಿರಿಧಾನ್ಯಗಳನ್ನು ಬೆಳೆಯಲು ಫಲವತ್ತಾದ ಭೂಮಿಯೇ ಬೇಕು ಎಂದಿಲ್ಲ. ತೆಳ್ಳನೆಯ ಮಣ್ಣಿನ ಪದರದ ನೆಲದಲ್ಲಿಯೂ ಸಿರಿಧಾನ್ಯಗಳು ಚೆನ್ನಾಗಿ ಬೆಳೆಯುತ್ತವೆ. ಕಲ್ಲಿನ ಜಮೀನಿನಲ್ಲಿ ಹಾರಕ ಹಾಗೂ ಕೊರಲೆ ಬೆಳೆಯುತ್ತವೆ. ಇಂತಹ ವಿಶಿಷ್ಟ ಗುಣಗಳಿಂದಲೇ ಸಿರಿಧಾನ್ಯಗಳು ರೈತರಿಗೆ ವರದಾನವಾಗಿರುವ ಬೆಳೆಗಳಾಗಿವೆ.

ಈ ಧಾನ್ಯಗಳನ್ನು ಬೆಳೆಯಲು ರೈತರು ರಾಸಾಯನಿಕ ಗೊಬ್ಬರವನ್ನು ನೆಚ್ಚಿಕೊಳ್ಳದೆ, ಕೊಟ್ಟಿಗೆ ಗೊಬ್ಬರ, ತರಗೆಲೆ ಗೊಬ್ಬರ ಬಳಸಿ ಸಿರಿಧಾನ್ಯಗಳನ್ನು ಬೆಳೆಯುತ್ತಾರೆ. ಇದರಿಂದ ಹಣ ಉಳಿಯುವ ಜೊತೆಗೆ ರಸಗೊಬ್ಬರ

### ಸಿರಿಧಾನ್ಯಗಳಿಗೆ ಅಂತಾರಾಷ್ಟ್ರೀಯ ಮನ್ನಣೆ

ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕೃಷಿ ಸಚಿವರಾಗಿದ್ದ ಕೃಷ್ಣ ಬೈರೇಗೌಡರು ಸಿರಿಧಾನ್ಯ ಉತ್ಪನ್ನಗಳಿಗೆ ಹೆಚ್ಚಿನ ಅವಕಾಶ ದೊರಕಿಸುವ ಪ್ರಯತ್ನ ಆರಂಭಿಸಿದ್ದರು. 2017ರಲ್ಲಿ ಬೆಂಗಳೂರಿನಲ್ಲಿ ಸಿರಿಧಾನ್ಯ ಉತ್ಪನ್ನಗಳ ಅಂತಾರಾಷ್ಟ್ರೀಯ ಮೇಳ ನಡೆಸಿದರು. ಕೇಂದ್ರ ಸರ್ಕಾರದ ಮೂಲಕ ವಿಶ್ವಸಂಸ್ಥೆಯ ಗಮನ ಸೆಳೆದರು. ಅಲ್ಲದೆ, ವಿಶ್ವಸಂಸ್ಥೆಯ ಅಂಗವಾದ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರತಿನಿಧಿಗಳನ್ನು ಭೇಟಿ ಮಾಡಿ ಸಿರಿಧಾನ್ಯಗಳ ಬಗ್ಗೆ ಚರ್ಚೆ ನಡೆಸಿದ್ದರು. ಇತ್ತೀಚಿಗೆ ವಿಶ್ವಸಂಸ್ಥೆ ನಡೆಸಿದ ಸಭೆಯಲ್ಲಿ ಸುಮಾರು 70 ದೇಶಗಳು 2023 ನೇ ವರ್ಷವನ್ನು "ಸಾವಯವ ಹಾಗೂ ಸಿರಿಧಾನ್ಯ ವರ್ಷ"ವೆಂದು ಘೋಷಿಸುವುದಕ್ಕೆ ಸಮ್ಮತಿ ನೀಡಿದವು. ಈ ಅಂತಾರಾಷ್ಟ್ರೀಯ ವರ್ಷಾಚರಣೆ ಆಗಲು ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಇಂದಿರಾ ಕ್ಯಾಂಟೀನ್ ಮತ್ತು ಮಧ್ಯಾಹ್ನದ ಶಾಲಾ ಊಟದಲ್ಲಿ ಸಿರಿಧಾನ್ಯವನ್ನು ಬಳಕೆ ಮಾಡಲಾಗುವುದು. ಇದರಿಂದ ನಮ್ಮ ರಾಜ್ಯದ ಜನರು ಮತ್ತು ಶಾಲಾ ಮಕ್ಕಳು ಇನ್ನಷ್ಟು ಸದೃಢವಾಗಿ ಮತ್ತು ಆರೋಗ್ಯವಂತರಾಗಲು ಸಾಧ್ಯ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳ ಸಭೆ ನಡೆಸಿ ತೀರ್ಮಾನಿಸಲಾಗುವುದು.

ಹಾಗೆಯೇ ಉತ್ತಮ ಗುಣಮಟ್ಟದ ಸಿರಿಧಾನ್ಯ ಬೀಜ ಉತ್ಪಾದನೆ, ಹೊಸ ತಳಿ ಅಭಿವೃದ್ಧಿ ಹಾಗೂ ಸಿರಿಧಾನ್ಯ ರಫ್ತಿಗೆ ಅನುಕೂಲ ಆಗುವಂತೆ ಸಿರಿಧಾನ್ಯ ಬೆಳೆಗೆ ಪ್ರೋತ್ಸಾಹದಾಯಕವಾಗಿ ಅಗತ್ಯ ಕೇಂದ್ರವನ್ನು ಸ್ಥಾಪಿಸಲು ಕ್ರಮವಹಿಸಲಾಗುವುದು.

2004 ರಲ್ಲಿ ಸಾವಯವ ಕೃಷಿ ನೀತಿ, 2014 ರಲ್ಲಿ ಪರಿಷ್ಕೃತ ಸಾವಯವ ಕೃಷಿ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಈ ಮೂಲಕ ಸಾವಯವ ಮತ್ತು ಸಿರಿಧಾನ್ಯ ಬೆಳೆ ಬೆಳೆಯಲು ನಮ್ಮ ಸರ್ಕಾರವು ನಿರಂತರವಾಗಿ ಉತ್ತೇಜನ ನೀಡುತ್ತಿದೆ.

–ಸಿದ್ದರಾಮಯ್ಯ,
ಮುಖ್ಯಮಂತ್ರಿಗಳು





Downloaded From:www.kpscvaani.com




ಬಳಸದಿರುವುದರಿಂದ ಕೀಟಗಳ ತೊಂದರೆ ಇರುವುದಿಲ್ಲ. ಹಾಗಾಗಿ ಈ ಬೆಳೆಗಳನ್ನು ಕೀಟಮುಕ್ತ ಬೆಳೆಗಳು ಎನ್ನಬಹುದು. ರಾಸಾಯನಿಕ ಗೊಬ್ಬರ, ಕೀಟನಾಶಕ ಬಳಸದೇ ಇರುವುದರಿಂದ ಪರಿಸರದ ಮೇಲೂ ಕೆಟ್ಟ ಪರಿಣಾಮ ಬೀರುವುದಿಲ್ಲ. ಜೊತೆಗೆ ಜನರಿಗೆ ಆಹಾರ ಮತ್ತು ಪಶುಗಳ ಮೇವಿನ ಬೆಳೆಯಾಗಿರುವ ಈ ಧಾನ್ಯಗಳನ್ನು ಬೆಳೆಯಲು ಹೆಚ್ಚಿನ ನೀರು, ಗೊಬ್ಬರ ಮತ್ತು ಆರೈಕೆಯ ಅವಶ್ಯಕತೆ ಇಲ್ಲ. ಮಳೆಯಾಧಾರಿತವಾಗಿ ಹಾಗೂ ಎಲ್ಲಾ ಹವಾಮಾನಕ್ಕೂ ಹೊಂದಿಕೊಂಡು ಬೆಳೆಯುವ ಈ ಧಾನ್ಯಗಳು ನಿಜಕ್ಕೂ ಸಿರಿಧಾನ್ಯಗಳೇ ಆಗಿವೆ.

ಹೆಚ್ಚು ಪೌಷ್ಟಿಕಾಂಶವನ್ನು ಹೊಂದಿರುವ ಈ ಸಾಂಪ್ರದಾಯಿಕ ಧಾನ್ಯಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸುವ ಜೊತೆಗೆ, ಜನರು ತಮ್ಮ ಆಹಾರದಲ್ಲಿ ಈ ಧಾನ್ಯಗಳನ್ನು ಬಳಸುವಂತೆ ಅರಿವು ಮೂಡಿಸಲು ರಾಜ್ಯ ಸರ್ಕಾರವು ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳಗಳನ್ನು ಆಯೋಜಿಸುತ್ತಿರುತ್ತದೆ.

ಹಾಗಾಗಿ ಕರ್ನಾಟಕದಲ್ಲಿ ಕಿರುಧಾನ್ಯಗಳ ಕುರಿತು ಒಂದು ಪ್ರಮಾಣದ ಅರಿವು ಮೂಡುತ್ತಿದೆ. ಕೃಷಿ ಇಲಾಖೆಯು ಬೆಂಗಳೂರಿನ ಅರಮನೆ ಮೈದಾನದಲ್ಲಿ ಜನವರಿ 5 ರಿಂದ 7 ರ ವರೆಗೆ ಮೂರು ದಿನಗಳ ಕಾಲ ಆಯೋಜಿಸಿದ್ದ "ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ-2024" ನ್ನು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಮೊರದಿಂದ ಸಿರಿಧಾನ್ಯವನ್ನು ರೈತ ಹಾಗೂ ರೈತ ಮಹಿಳೆ ಬೊಂಬೆಗಳು ಹಿಡಿದಿರುವ ಬುಟ್ಟಿಗೆ ಸುರಿಯುವ ಮೂಲಕ ಉದ್ಘಾಟಿಸಿದರು.

ಈ ಮೇಳದಲ್ಲಿ ರೈತರು, ಮಾರಾಟಗಾರರು, ರಫ್ತುದಾರರು, ಆಂತರಿಕ ಉತ್ಪಾದನಾ ಸಂಸ್ಥೆಗಳು, ಆಹಾರೋತ್ಪನ್ನಗಳ ಸಂಸ್ಥೆಗಳು, ರೆಸ್ಟೋರೆಂಟ್‌ಗಳು, ಸೂಪರ್ ಮಾರ್ಕೆಟ್‌ಗಳು ಮತ್ತು ಸ್ಪೆಶಾಲಿಟಿ ಚೈನ್ ಸ್ಟೋರ್‌ಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದವು. ಅಲ್ಲದೆ, ಮೇಳದಲ್ಲಿ ಉತ್ತರ ಪ್ರದೇಶ, ಪಂಜಾಬ್, ಆಂಧ್ರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ್, ಒರಿಸ್ಸಾ, ಮಧ್ಯಪ್ರದೇಶ, ಮಣಿಪುರ, ಮಿಜೋರಾಂ, ಛತ್ತೀಸ್‌ಗಢ, ಅಸ್ಸಾಂ, ಜಾರ್ಖಂಡ್, ತ್ರಿಪುರ, ಸಿಕ್ಕಿಂ, ತಮಿಳುನಾಡು ಮತ್ತು ಮೇಘಾಲಯ ಸೇರಿದಂತೆ ಒಟ್ಟು 16 ರಾಜ್ಯಗಳು ತಮ್ಮ ತಂಡದೊಂದಿಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಿದ್ದವು.

> ಸಿರಿಧಾನ್ಯಗಳ ಉತ್ಪಾದನೆ, ಮೌಲ್ಯವರ್ಧನೆ, ರಫ್ತು ಮತ್ತು ಮಾರಾಟಕ್ಕೆ ಅಭಿಯಾನದ ಸ್ವರೂಪ ನೀಡುವಲ್ಲಿ ನಮ್ಮ ರಾಜ್ಯವು ವಿಶ್ವದಲ್ಲೇ ಮುಂಚೂಣಿಯಲ್ಲಿದೆ. ರಾಜ್ಯ ಸರ್ಕಾರ ಕೃಷಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಜೊತೆಗೆ ಸಿರಿಧಾನ್ಯಗಳ ಜಾಗೃತಿಗೆ ವಿಶೇಷ ಕಾಳಜಿ ವಹಿಸಿದೆ. ನಾವು ನಮ್ಮ ಮೂಲ ಬೇರುಗಳನ್ನು ಮರೆಯಬಾರದು. ಸಿರಿಧಾನ್ಯ ನಮ್ಮ ಪರಂಪರೆಯ ಆಹಾರವಾಗಿದ್ದು, ಅದನ್ನು ಬೆಳೆಸಿ, ಬಳಸಬೇಕು.
>
> **-ಡಿ.ಕೆ.ಶಿವಕುಮಾರ್**
> ಉಪ ಮುಖ್ಯಮಂತ್ರಿಗಳು

ಕರ್ನಾಟಕ ಪೆವಿಲಿಯನ್‌ನಲ್ಲಿ 35 ಸಿರಿಧಾನ್ಯ ಸಾವಯವ ನವೋದ್ಯಮಿಗಳು, 15 ಪ್ರಾದೇಶಿಕ ಸಾವಯವ ಒಕ್ಕೂಟಗಳು, 15 ವಿವಿಧ ಸಂಸ್ಥೆಗಳು, ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಹಾಗೂ 29 ರೈತ ಉತ್ಪಾದಕ ಸಂಸ್ಥೆಗಳಿಂದ ನವಣೆ ಮಸಾಲೆ ಬ್ರೆಡ್, ರಾಗಿ ಬ್ರೆಡ್, ಪಿಜ್ಜಾ, ಬರ್ಗರ್, ನೂಡಲ್ಸ್, ಪಾಸ್ತಾ, ವಿವಿಧ ರೀತಿಯ ಬಿಸ್ಕತ್ತುಗಳು, ಚಕ್ಕುಲಿ, ಖಾರ ಸೇವ್, ಸೂಪ್, ಸಿರಿಧಾನ್ಯ ಚಿಕ್ಕಿ ಜೊತೆಗೆ ವಿಶೇಷವಾಗಿ ಯುವ ಪೀಳಿಗೆಯು ಇಷ್ಟ ಪಡುವಂತಹ ಆಧುನಿಕ ಸಿರಿಧಾನ್ಯ ಬ್ರೌನಿ, ಮಫಿನ್ಸ್, ಸಿರಿಧಾನ್ಯ ಐಸ್‌ಕ್ರೀಮ್, ರಾಗಿ ಚಾಕೋಲೇಟ್, ಜಾಮೂನು ಮುಂತಾದ ಉತ್ಪನ್ನಗಳನ್ನು ಪ್ರದರ್ಶಿಸಲಾಗಿತ್ತು.

**ಉತ್ಪಾದಕರು-ಮಾರುಕಟ್ಟೆದಾರರ ಸಭೆ:**

ರಾಜ್ಯದಲ್ಲಿ ಬೆಳೆದ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ದೇಶಿಯ ಮತ್ತು ರಫ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ವಾಣಿಜ್ಯ ಮೇಳದಲ್ಲಿ ಉತ್ಪಾದಕರು ಮತ್ತು ಮಾರುಕಟ್ಟೆದಾರರ ಬಿ2ಬಿ ಸಭೆಗಳನ್ನು


Downloaded From:www.kpscvaani.com



> ಸಿರಿಧಾನ್ಯ ಬೆಳೆಯುವ ರೈತರಿಗೆ ಉತ್ತೇಜನೆ ನೀಡಲು 'ರೈತ ಸಿರಿ' ಯೋಜನೆಯಡಿ ಇದುವರೆವಿಗೆ ಹೆಕ್ಟೇರ್‌ಗೆ 10 ಸಾವಿರದಂತೆ ಒಂದು ಲಕ್ಷ ರೈತರಿಗೆ ಪ್ರೋತ್ಸಾಹ ಧನ ನೀಡಲಾಗಿದೆ. ಕಡಿಮೆ ಖರ್ಚು ಮತ್ತು ಕಡಿಮೆ ಸಮಯದಲ್ಲಿ ಬೆಳೆಯಬಹುದಾದ ಸಿರಿಧಾನ್ಯಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ರೈತರು ಹೆಚ್ಚು ಹೆಚ್ಚು ಬೆಳೆಯುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕು.
>
> –ಎನ್.ಚಲುವರಾಯಸ್ವಾಮಿ
> ಕೃಷಿ ಸಚಿವರು

ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 97 ಮಾರುಕಟ್ಟೆದಾರರು / ರಫ್ತುದಾರರು ಮತ್ತು 154 ಉತ್ಪಾದಕರು ಬಿ2ಬಿ ಸಭೆಗಳಲ್ಲಿ ಭಾಗಹಿಸಿದ್ದರು. ಅಲ್ಲದೆ, 7 ಅಂತಾರಾಷ್ಟ್ರೀಯ ಮಾರುಕಟ್ಟೆದಾರರು, 40 ಹೊರ ರಾಜ್ಯಗಳ ಮಾರುಕಟ್ಟೆದಾರರು ಮತ್ತು 50 ರಾಜ್ಯ ಮಾರುಕಟ್ಟೆದಾರರು ಸಭೆಗಳಲ್ಲಿ ಭಾಗವಹಿಸಿದ್ದರು. 61 ಸಭೆಗಳಲ್ಲಿ ಅಂದಾಜು ಮಾರುಕಟ್ಟೆ ಮೌಲ್ಯವು ರೂ 23.14 ಕೋಟಿಯಾಗಿದ್ದು, ಈ ಪೈಕಿ 1361 ಮೆಟ್ರಿಕ್ ಟನ್‌ಗಳ ಪ್ರಮಾಣದ 5.10 ಕೋಟಿ ಮೌಲ್ಯದ 6 ಒಪ್ಪಂದಗಳಾದವು. ಅಂತಾರಾಷ್ಟ್ರೀಯ ಮಾರುಕಟ್ಟೆದಾರರ ಪೈಕಿ ಕೀನ್ಯಾ ಕುವೇತ್, ಯು.ಎ.ಇ, ಆಸ್ಟ್ರೇಲಿಯಾ, ಯುರೋಪಿಯನ್ ಯೂನಿಯನ್ ಮುಂತಾದ ದೇಶಗಳ ಮಾರುಕಟ್ಟೆದಾರರು ಭಾಗವಹಿಸಿದ್ದವು.

**ಅಂತಾರಾಷ್ಟ್ರೀಯ ಸಮ್ಮೇಳನ:**

GIZ ಹಾಗೂ IIMR ಸಂಸ್ಥೆಗಳ ಸಹಯೋಗದೊಂದಿಗೆ "Transformation into organic and agroecology-based agriculture in Karnataka" ಎಂಬ ಶೀರ್ಷಿಕೆಯಡಿ ಆಯೋಜಿಸಲಾಗಿತ್ತು. ಸುಮಾರು 51 ಪ್ರಖ್ಯಾತ ವಿಷಯ ತಜ್ಞರು ಅಧಿವೇಶನಗಳಲ್ಲಿ ಉಪನ್ಯಾಸ ನೀಡಿದರು. ಪ್ರಗತಿಪರ ರೈತರು, ವಿಶ್ವ ವಿದ್ಯಾನಿಲಯಗಳ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಇತರ ಪಾಲುದಾರರು ಸೇರಿದಂತೆ 255 ಪ್ರತಿನಿಧಿಗಳು ಭಾಗವಹಿಸಿದ್ದರು.

**ರೈತರಿಗಾಗಿ ಕಾರ್ಯಾಗಾರ:**

ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಬೆಳೆಯುವ ರೈತರಿಗಾಗಿ ಕನ್ನಡ ಭಾಷೆಯಲ್ಲಿ ಮೂರು ದಿನಗಳ ಕಾರ್ಯಗಾರವನ್ನು ಕೃಷಿ ವಿಶ್ವವಿದ್ಯಾನಿಲಯಗಳ ಸಂಶೋಧನಾ ವಿಭಾಗದಿಂದ ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ ಸಾವಯವ ಮತ್ತು ಸಿರಿಧಾನ್ಯ ತಜ್ಞರು ಸಾವಯವ ಪದ್ಧತಿ, ಸಾವಯವ ಮಾರುಕಟ್ಟೆ ಪ್ರವೃತ್ತಿ ಬೇಡಿಕೆ, ಸಾವಯವ ಪ್ರಮಾಣೀಕರಣ ಪ್ರಕ್ರಿಯೆ, ನೈಸರ್ಗಿಕ ಸಿರಿಧಾನ್ಯ ಕೃಷಿ ಮುಂತಾದ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಾಗಾರದ ಅಧಿವೇಶನಗಳ ಮಧ್ಯದಲ್ಲಿ ಮನರಂಜನೆಗಾಗಿ ದೇಶದ ವಿವಿಧ ವೈವಿಧ್ಯತೆಯನ್ನು ಬಿಂಬಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗಿತ್ತು.

**ಖಾನಾವಳಿ (ಫುಡ್ ಕೋರ್ಟ್):**

ಮೇಳದಲ್ಲಿ 20 ವಿವಿಧ ಸಿರಿಧಾನ್ಯ ಹೋಟೆಲ್/ ರೆಸ್ಟೋರೆಂಟ್‌ಗಳ ಮಳಿಗೆಗಳಲ್ಲಿ ವೈವಿಧ್ಯಮಯ ಮತ್ತು ರುಚಿಕರವಾದ ಸಿರಿಧಾನ್ಯಗಳ ಊಟ ಮತ್ತು ಉಪಹಾರಗಳನ್ನು ಸವಿಯಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿಕೊಡಲಾಗಿತ್ತು. ಸಿರಿಧಾನ್ಯಗಳ ವಿವಿಧ ಸಸ್ಯಹಾರಿ ಹಾಗೂ ಮಾಂಸಹಾರಿ ಆಹಾರ ಖಾದ್ಯಗಳನ್ನು ಸಹ ಸಾರ್ವಜನಿಕರಿಗೆ ಸವಿಯಲು ಅವಕಾಶ ಕಲ್ಪಿಸಲಾಗಿತ್ತು. ಅಲ್ಲದೇ, ಮೇಳವನ್ನು ವೀಕ್ಷಿಸಲು ಬರುವ ಸಾರ್ವಜನಿಕರಿಗೆ ಸಿರಿಧಾನ್ಯಗಳಲ್ಲಿ ತಯಾರಿಸಬಹುದಾದ ಖಾದ್ಯಗಳ ಪಾಕವಿಧಾನ ಪ್ರಾತ್ಯಕ್ಷಿಕೆಯನ್ನು 'ನೋಡಿ ಕಲಿ; ಮಾಡಿ ತಿಳಿ; ತಿಂದು ಸವಿ' ಶೀರ್ಷಿಕೆಯಡಿ ಏರ್ಪಡಿಸಲಾಗಿತ್ತು.

ಒಟ್ಟಾರೆಯಾಗಿ, ಮೇಳವು ಸಾವಯವ ಮತ್ತು ಸಿರಿಧಾನ್ಯ ಕ್ಷೇತ್ರದ ಎಲ್ಲಾ ಪಾಲುದಾರರಿಗೂ ಪರಿಣಿತಿ, ಜ್ಞಾನ ಮತ್ತು ವ್ಯಾಪಾರ ಪದ್ಧತಿಗಳನ್ನು ಹಂಚಿಕೊಳ್ಳುವ ವೇದಿಕೆಯನ್ನು ಕಲ್ಪಿಸಿತ್ತು. ಮೇಳದಲ್ಲಿ ಸುಮಾರು ಎರಡು ಲಕ್ಷಕ್ಕಿಂತ ಅಧಿಕ ಸಾರ್ವಜನಿಕರು ಭಾಗವಹಿಸಿದ್ದರು.

ರಾಜ್ಯದ ರೈತ ಗುಂಪುಗಳು ಯಾವುದೇ ಖಾಸಗಿ ಸಂಸ್ಥೆಗಳ ಉತ್ಪನ್ನಗಳಿಗೆ ಕಡಿಮೆ ಇಲ್ಲದಂತೆ ಸರಿಸಮನಾಗಿ ಆಕರ್ಷಕ ಪ್ಯಾಕಿಂಗ್ ವಿನ್ಯಾಸದೊಂದಿಗೆ ಮತ್ತು ವಿವಿಧತೆಯೊಂದಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಮೇಳದಲ್ಲಿ ಭಾಗವಹಿಸಿದ ಸಾರ್ವಜನಿಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಾವಯವ ಮತ್ತು ಸಿರಿಧಾನ್ಯಗಳನ್ನು "ಭವಿಷ್ಯದ ಪೀಳಿಗೆಯನ್ನು ಪೋಷಿಸುವ ಸಾಂಪ್ರದಾಯಿಕ ಪ್ರಜ್ಞಾವಂತ ಆಹಾರ" ಎಂದು ಜನಪ್ರಿಯಗೊಳಿಸುವುದು ರಾಜ್ಯ ಸರ್ಕಾರದ ಧ್ಯೇಯೋದ್ದೇಶವಾಗಿದೆ.

ರಾಜ್ಯದ ಸಾವಯವ ಮತ್ತು ಸಿರಿಧಾನ್ಯಗಳಿಗೆ ಉತ್ತಮ ಮಾರುಕಟ್ಟೆ ಸಂಪರ್ಕವನ್ನು ಕಲ್ಪಿಸಲು ಮತ್ತು ರೈತರು, ಖರೀದಿದಾರರು, ಮಾರಾಟಗಾರರು, ರಫ್ತುದಾರರಿಗೆ ವಿಪುಲ ಅವಕಾಶಗಳನ್ನು ಒದಗಿಸಲು ಆಯೋಜಿಸಲಾಗಿದ್ದ ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳವು ಹೆಚ್ಚಿನ ಸಂಖ್ಯೆಯ ಪಾಲುದಾರರನ್ನು ಆಕರ್ಷಿಸುವ ಜೊತೆಗೆ ಆಸಕ್ತಿ ಹುಟ್ಟು ಹಾಕುವ ಮೂಲಕ ಯಶಸ್ಸನ್ನು ಕಂಡಿತು. ■



Downloaded From:www.kpscvaani.com




# ಯಶಸ್ವಿಯಾಗಿ ಜರುಗಿದ "ಬಾಗಿಲಿಗೆ ಬಂತು ಸರ್ಕಾರ-ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮ

**ಮಂಜುನಾಥ್**

**ಬೆಂ**ಗಳೂರು ವ್ಯಾಪ್ತಿಯಲ್ಲಿ ನಾಗರಿಕರ ಅಹವಾಲು/ಕುಂದು-ಕೊರತೆಗಳನ್ನು ಆಲಿಸುವ ಸಲುವಾಗಿ ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಡಿ.ಕೆ ಶಿವಕುಮಾರ್ ಅವರ ನೇತೃತ್ವದಲ್ಲಿ "ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಾಗರಿಕರು ತಮ್ಮ ಸಮಸ್ಯೆಗಳನ್ನು ಹೊತ್ತು ಸರ್ಕಾರಿ ಕಛೇರಿಗಳಿಗೆ ಬರುವ ಬದಲು ಮನೆ ಬಾಗಿಲಲ್ಲೇ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, ಪಾಲಿಕೆ ವ್ಯಾಪ್ತಿಯ 8 ವಲಯಗಳಲ್ಲಿ ಬರುವ 28 ವಿಧಾನಸಭಾ ಕ್ಷೇತ್ರಗಳನ್ನು ವಲಯವಾರು 2 ಅಥವಾ 3 ವಿಧಾನಸಭಾ ಕ್ಷೇತ್ರಗಳನ್ನು ಒಟ್ಟುಗೂಡಿಸಿ ಸದರಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಮೊದಲನೇ ಹಂತದಲ್ಲಿ ಮಹದೇವಪುರ, ಯಲಹಂಕ, ಪೂರ್ವ, ಬೊಮ್ಮನಹಳ್ಳಿ ಹಾಗೂ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಆಯ್ದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಕ್ರಮವನ್ನು ಈಗಾಗಲೇ ನಡೆಸಲಾಗಿದ್ದು, ಎರಡನೇ ಹಂತದಲ್ಲಿ ಉಳಿದ 13 ವಿಧಾನಸಭಾ ಕ್ಷೇತ್ರಗಳಲ್ಲಿ ಶೀಘ್ರವೇ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ನಾಗರಿಕರು ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿ ನೀಡಿರುವಂತಹ ಅಹವಾಲು/ಸಮಸ್ಯೆಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಿ ಕಾಲಮಿತಿಯೊಳಗಾಗಿ ಇತ್ಯರ್ಥ ಪಡಿಸಲಾಯಿತು.

**ಕಾರ್ಯಕ್ರದ ಸ್ಥಳದಲ್ಲಿ ಸಕಲ ವ್ಯವಸ್ಥೆ:**

ನಾಗರಿಕರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಆಸನಗಳ ವ್ಯವಸ್ಥೆ, ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆ ಹಾಗೂ ಮಧ್ಯಾಹ್ನದ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ ವಿದ್ಯುತ್, ಜನರೇಟರ್ ವ್ಯವಸ್ಥೆ ಸೇರಿದಂತೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.




Downloaded From:www.kpscvaani.com





**ಸಿಬ್ಬಂದಿಗಳಿಗೆ ತರಬೇತಿ:**

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಬಂದಂತಹ ದೂರುಗಳನ್ನು Integrated Public Grievance Redressal System (iPGRS) ಸಾಫ್ಟ್‌ವೇರ್‌ನಲ್ಲಿ ದಾಖಲಿಸುವ ಸಲುವಾಗಿ ಪಾಲಿಕೆ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. ನಾಗರಿಕರ ಸಂಪೂರ್ಣ ವಿವರ ಹಾಗೂ ನಾಗರಿಕರಿಂದ ಬಂದಂತಹ ದೂರುಗಳು ಯಾವ ಇಲಾಖೆಗೆ ಸಂಬಂಧಿಸಿದ್ದು ಎಂಬುದನ್ನು ಸಾಫ್ಟ್‌ವೇರ್‌ನಲ್ಲಿ ದಾಖಲಿಸಲಾಗುತ್ತದೆ. ಅದಕ್ಕಾಗಿ ವೈ-ಫೈ, ಗಣಕಯಂತ್ರ, ಪ್ರಿಂಟರ್‌ಗಳ ವ್ಯವಸ್ಥೆಯೊಂದಿಗೆ 25ಕ್ಕೂ ಹೆಚ್ಚು ಕೌಂಟರ್‌ಗಳ ವ್ಯವಸ್ಥೆಯನ್ನು ಮಾಡಿಕೊಳ್ಳುವ ಮೂಲಕ ಶೀಘ್ರವಾಗಿ ಸಮಸ್ಯೆಗಳನ್ನು ವಿಲೇವಾರಿ ಮಾಡಲಾಯಿತು.

**ಹೆಲ್ಪ್‌ಡೆಸ್ಕ್ ನಿರ್ಮಾಣ:**

ಕಾರ್ಯಕ್ರಮದ ಸ್ಥಳದಲ್ಲಿ ನಾಗರಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಲ್ಪ್‌ಡೆಸ್ಕ್ ಅನ್ನು ಸ್ಥಾಪಿಸಲಾಗಿತ್ತಲ್ಲದೆ, ನಾಗರಿಕರಿಗೆ ಮಾಹಿತಿ ತಿಳಿಯುವ ನಿಟ್ಟಿನಲ್ಲಿ ನಾಮಫಲಕ (ಸೈನೇಜ್) ಗಳನ್ನು ಸಹ ಅಳವಡಿಸಿದ್ದು, ಸಾರ್ವಜನಿಕರಿಗೆ ಬಹಳ ಅನುಕೂಲವಾಗಿತ್ತು.

**ನಾಗರಿಕರಿಗೆ ಟೋಕನ್ ವ್ಯವಸ್ಥೆ:**

"ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮದಲ್ಲಿ ನಾಗರಿಕರು ಅಹವಾಲುಗಳನ್ನು ನೀಡಲು ಅನುಕೂಲಕರವಾಗಿರಲೆಂದು ಟೋಕನ್‌ಗಳನ್ನು ಪಡೆಯಲು 10 ಕೌಂಟರ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಅದರಲ್ಲಿ ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಒದಗಿಸಲಾಗಿತ್ತು. ಅಲ್ಲದೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್‌ರವರೇ ನೇರವಾಗಿ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಬಳಿ ತೆರಳಿ ಅಹವಾಲುಗಳನ್ನು ಸ್ವೀಕರಿಸಿದರು.

**ಒಂದೇ ಸೂರಿನಡಿ ವಿವಿಧ ಇಲಾಖೆಗಳು:**

ನಾಗರಿಕರ ಸಮಸ್ಯೆಗಳನ್ನು ಒಂದೇ ಸೂರಿನಡಿ ಬಗೆಹರಿಸುವ ನಿಟ್ಟಿನಲ್ಲಿ ಎಲ್ಲಾ ಪ್ರಮುಖ ಇಲಾಖೆಗಳಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಸ್ಕಾಂ, ಜಲಮಂಡಳಿ, ಬಿಎಂಆರ್‌ಸಿಎಲ್ (ಮೆಟ್ರೋ), ಕೊಳಗೇರಿ ಅಭಿವೃದ್ಧಿ ಮಂಡಳಿ, ಪೊಲೀಸ್ ಇಲಾಖೆ, ಬಿಎಂಟಿಸಿ, ಕಂದಾಯ ಇಲಾಖೆ ಸೇರಿದಂತೆ ಇನ್ನಿತರೆ ಇಲಾಖೆಗಳ ಅಧಿಕಾರಿಗಳು ಸ್ಥಳದಲ್ಲೇ ಉಪಸ್ಥಿತರಿದ್ದರು.

**ನಾಗರಿಕರಿಂದ ಅಭೂತಪೂರ್ವ ಸ್ಪಂದನೆ:**

"ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ಸಿಕ್ಕಿತು. ನಾಗರಿಕರ ತೊಂದರೆಗಳಿಗೆ ಪರಿಹಾರ ಕಲ್ಪಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಕಚೇರಿಗಳಿಗೆ ಅಲೆದು ಬೇಸತ್ತಿರುವಂತಹ ಬಹಳಷ್ಟು ನಾಗರಿಕರು ತಮ್ಮ ಮನೆ ಬಾಗಿಲಲ್ಲೇ ಸಮಸ್ಯೆಗಳಿಗೆ ಕಾನೂನು ಚೌಕಟ್ಟಿನಲ್ಲಿ ಪರಿಹಾರ ಕಂಡುಕೊಂಡರು.

ಹೆಚ್ಚಿನ ಪ್ರಮಾಣದಲ್ಲಿ ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್, ಬೆಸ್ಕಾಂ, ಜಲಮಂಡಳಿ, ಪೊಲೀಸ್, ಕಂದಾಯ, ಗ್ಯಾರಂಟಿ ಯೋಜನೆಗಳ ಸಮಸ್ಯೆಗಳ ಬಗ್ಗೆ ಅಹವಾಲು ಆಲಿಸಲಾಯಿತು. ಜನವರಿ 3 ರಂದು ಕೆ.ಆರ್.ಪುರ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರದ ನಾಗರಿಕರಿಗಾಗಿ, ಜನವರಿ 5 ರಂದು ಯಲಹಂಕ, ಬ್ಯಾಟರಾಯನಪುರ ಮತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ನಾಗರಿಕರಿಗಾಗಿ, ಜನವರಿ 6 ರಂದು ಹೆಬ್ಬಾಳ, ಶಿವಾಜಿನಗರ ಮತ್ತು ಪುಲಕೇಶಿನಗರ ವಿಧಾನಸಭಾ ಕ್ಷೇತ್ರದ ನಾಗರಿಕರಿಗಾಗಿ ಜನವರಿ 11 ರಂದು ಬೆಂಗಳೂರು ದಕ್ಷಿಣ, ಮೊಮ್ಮನಹಳ್ಳಿ ಮತ್ತು ಆನೇಕಲ್ ವಿಧಾನಸಭಾ ಕ್ಷೇತ್ರದ ನಾಗರಿಕರಿಗಾಗಿ ಹಾಗೂ ಜನವರಿ 16 ರಂದು ಮಲ್ಲೇಶ್ವರಂ, ಚಾಮರಾಜಪೇಟೆ ಮತ್ತು ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಗರಿಕರಿಗಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇನ್ನುಳಿದ ವಿಧಾನಸಭಾ ಕ್ಷೇತ್ರಗಳಲ್ಲಿ ಎರಡನೇ ಹಂತದಲ್ಲಿ "ಬಾಗಿಲಿಗೆ ಬಂತು ಸರ್ಕಾರ – ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ. ನಾಗರಿಕರು ಈ ಕಾರ್ಯಕ್ರಮಕ್ಕೆ ತೆರಳಿ ತಮ್ಮ ಸಮಸ್ಯೆಗಳನ್ನು ಸ್ಥಳದಲ್ಲೇ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ.


Downloaded From:www.kpscvaani.com



ಕೊಳೆಗೇರಿಗಳಲ್ಲಿ ವಾಸಿಸುವ ಲಕ್ಷಾಂತರ ಕುಟುಂಬಗಳಿಗೆ ಸೂರು ಒದಗಿಸಲು ಮುಂದಾಗಿರುವ ರಾಜ್ಯ ಸರ್ಕಾರ.

ಎಸ್. ಲಕ್ಷ್ಮಿನಾರಾಯಣ

## ಸರ್ಕಾರದ ವತಿಯಿಂದ

# ನೆಮ್ಮದಿಯ ಸೂರು

ರಾಜ್ಯದ ಕೊಳೆಗೇರಿಗಳಲ್ಲಿ ವಾಸಿಸುವ 1.83 ಲಕ್ಷ ಕುಟುಂಬಗಳಿಗೆ ನೆಮ್ಮದಿಯ ಸೂರು ಕಲ್ಪಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಮಹತ್ವದ ತೀರ್ಮಾನ ಕೈಗೊಂಡಿದೆ.

2015 ರಿಂದ 2023 ರವರೆಗೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಪ್ರಧಾನ ಮಂತ್ರಿ ಆವಾಸ್ (ನಗರ ) ಯೋಜನೆಯಡಿಯಲ್ಲಿ ಮಂಜೂರಾದ 1,83,253 ಮನೆಗಳ ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ 6,170 ಕೋಟಿ ರೂ. ರಾಜ್ಯ ಸರ್ಕಾರವೇ ಭರಿಸಿ ಬಡ ಕುಟುಂಬಗಳ ಹೊರೆ ತಗ್ಗಿಸುವ ಕ್ರಾಂತಿಕಾರಕ ನಿರ್ಧಾರಗಳನ್ನೂ ರಾಜ್ಯ ಸಚಿವ ಸಂಪುಟವು ಅನುಮೋದಿಸಿದೆ.

ಮೊದಲ ಹಂತದಲ್ಲಿ 1,80,293 ಮನೆಗಳ ಪೈಕಿ 48,796 ಮನೆಗಳ ಕಾಮಗಾರಿ ಪೂರ್ಣಗೊಳಿಸಲು 500 ಕೋಟಿ ರೂ. ಬಿಡುಗಡೆ ಮಾಡಲು ಇತ್ತೀಚಿಗೆ ನಡೆದ ಸಂಪುಟ ಸಭೆ ಒಪ್ಪಿಗೆ ನೀಡಿದೆ. 1,83,253 ಮನೆಗಳನ್ನು ಮುಂದಿನ ವರ್ಷ ಡಿಸೆಂಬರ್ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದ್ದು, 767 ಕೋಟಿ ರೂ. ವೆಚ್ಚದಲ್ಲಿ ಮೂಲ ಸೌಕರ್ಯ ಒದಗಿಸಲು ಸೇರಿದಂತೆ 6,170 ಕೋಟಿ ರೂ. ಗಳನ್ನು ರಾಜ್ಯ ಸರ್ಕಾರವು ಭರಿಸಲಿದೆ.

ಫಲಾನುಭವಿಗಳು 4.50 ಲಕ್ಷ ರೂ. ಗೆ ಬದಲಾಗಿ ಒಂದು ಲಕ್ಷ ರೂ. ಪಾವತಿಸಿದರೆ ಉಳಿದ 3.50 ಲಕ್ಷ ರೂ. ಗಳನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಇದೊಂದು ರೀತಿಯಲ್ಲಿ ಸಿದ್ದರಾಮಯ್ಯ ನೇತೃತ್ವ ಸರ್ಕಾರದ ಆರನೇ ಗ್ಯಾರಂಟಿ ಯೋಜನೆಯೆಂದು ಭಾವಿಸಲಾಗಿದೆ.





Downloaded From:www.kpscvaani.com





ಕರ್ನಾಟಕವನ್ನು ಕೊಳಗೇರಿ ಮುಕ್ತ ಮಾಡಲು ನಿರ್ಧರಿಸಿರುವ ಸಿದ್ಧರಾಮಯ್ಯ ನೇತೃತ್ವದ ನಮ್ಮ ಸರ್ಕಾರ ಬಡ ಕುಟುಂಬಗಳ ಬಗ್ಗೆ ಹೊಂದಿರುವ ಕಾಳಜಿಗೆ ಈ ತೀರ್ಮಾನ ಸಾಕ್ಷಿಯಾಗಿದೆ. ಬಡ ಕುಟುಂಬಗಳು ವಂತಿಗೆ ಪಾವತಿಸಲು ಆಗದೆ, ಬ್ಯಾಂಕ್ ಸಾಲವೂ ದೊರೆಯದೆ ಅಷ್ಟೂ ಕುಟುಂಬಗಳು ಬೀದಿಯಲ್ಲಿ ವಾಸಿಸುವಂತಾಗಿತ್ತು. ಇದೀಗ ಸರ್ಕಾರದ ತೀರ್ಮಾನದಿಂದಾಗಿ 1.80 ಲಕ್ಷ ಕುಟುಂಬಗಳಿಗೆ ನೆಮ್ಮದಿ ಸಿಕ್ಕಂತಾಗಿದೆ.

ನಾವು ಪ್ರಣಾಳಿಕೆಯಲ್ಲಿ ತಿಳಿಸದಿದ್ದರೂ ಆರನೇ ಗ್ಯಾರಂಟಿಯಾಗಿ ವಸತಿ ಯೋಜನೆಗೆ ಫಲಾನುಭವಿಗಳು ಕೊಡಬೇಕಾದ ಹಣವನ್ನು ಸರ್ಕಾರದಿಂದಲೇ ಭರಿಸುತ್ತಿದ್ದೇವೆ. ಸ್ಲಂ ಬೋರ್ಡ್‌ಗೆ ಹಾಗೂ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಣ ನೀಡಲು ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ದೊರಕಿದೆ. ಈಗಾಗಲೇ ಮುಖ್ಯಮಂತ್ರಿ ಅವರು 500 ರೂ. ಕೋಟಿಯನ್ನು ಬಿಡುಗಡೆ ಮಾಡಿದ್ದಾರೆ. ಫೆಬ್ರವರಿ ಮಾಹೆಯಲ್ಲಿ 36000 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು. ಹಾಗೆಯೇ ಇನ್ನೊಂದು ವರ್ಷದಲ್ಲಿ ಎಲ್ಲಾ ಮನೆಗಳನ್ನು ಹಂಚಿಕೆ ಮಾಡುವ ಗುರಿಯನ್ನು ಹೊಂದಲಾಗಿದೆ.

– ಬಿ. ಝಡ್.ಜಮೀರ್ ಅಹಮದ್ ಖಾನ್
ವಸತಿ ಸಚಿವರು

ಈ ಮೂಲಕ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಕೊಳೆಗೇರಿ ವಾಸಿಗಳಿಗೆ ತಲೆ ಮೇಲೆ ಸೂರು ಪಡೆಯುವ ಕನಸು ನನಸಾಗುತ್ತಿದೆ.

**ಏನಿದು ಯೋಜನೆ**

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯಡಿಯಲ್ಲಿ 1,80,293 ಲಕ್ಷ ಮನೆ ಮಂಜೂರು ಮಾಡಲಾಗಿತ್ತು, ಪ್ರತಿ ಘಟಕ ವೆಚ್ಚ 7.50 ಲಕ್ಷ ರೂ. ಆಗಿದ್ದು ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ 3 ಲಕ್ಷ ರೂ. ವರೆಗೆ ಸಬ್ಸಿಡಿ ದೊರೆಯುತ್ತಿದ್ದು ಉಳಿದ 4.50 ಲಕ್ಷ ರೂ. ಫಲಾನುಭವಿಗಳು ಪಾವತಿ ಮಾಡಬೇಕಿತ್ತು. ಅದರಂತೆ ಫಲಾನುಭವಿಗಳ ವಂತಿಗೆ 6691.15 ಕೋಟಿ ರೂ. ಸಂಗ್ರಹ ಆಗಬೇಕಿತ್ತು. ಆದರೆ, 310.19 ಕೋಟಿ ರೂ. ಮಾತ್ರ ಸಂಗ್ರಹ ವಾಗಿತ್ತು. ಎಸ್‌ಸಿಪಿ, ಟಿಎಸ್‌ಪಿ ನಿಧಿಯಿಂದ 186.66 ಕೋಟಿ ರೂ., ಕಾರ್ಮಿಕ ಇಲಾಖೆಯಿಂದ 509,80 ಕೋಟಿ ರೂ., ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 11.40 ಕೋಟಿ ರೂ., ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ 169.80 ಕೋಟಿ ರೂ. ಸರ್ಕಾರದ ಖಾತರಿಯಿಂದ 100 ಕೋಟಿ ರೂ. ಬ್ಯಾಂಕ್ ಸಾಲ ಸೇರಿ 1,288.22 ಕೋಟಿ ರೂ. ಸಂಗ್ರಹವಾಗಿ 5402.93 ಕೋಟಿ ರೂ. ಫಲಾನುಭವಿಗಳ ವಂತಿಗೆ ಬಾಕಿ ಇತ್ತು. ಬ್ಯಾಂಕ್‌ಗಳಲ್ಲಿ ಸಾಲ ಸಿಗದೆ ಫಲಾನುಭವಿಗಳು ತಮ್ಮ ಪಾಲಿನ ವಂತಿಗೆ ಪಾವತಿ ಮಾಡದೆ ವಸತಿ ಯೋಜನೆ ಕಾಮಗಾರಿ ಹಲವು ಹಂತಗಳಲ್ಲಿ ಸ್ಥಗಿತ ಗೊಂಡಿತ್ತು.

ಇದೀಗ ರಾಜ್ಯ ಸರ್ಕಾರ ಫಲಾನುಭವಿಗಳ ವಂತಿಗೆ ಮೊತ್ತ 5,403 ಕೋಟಿ ರೂ. ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ 767ಕೋಟಿ ರೂ. ಸೇರಿಸಿ 6,170 ಕೋಟಿ ರೂ. ಭರಿಸುವ ನಿರ್ಧಾರ ಕೈಗೊಂಡಿದೆ. ಇದು ಕೊಳೆಗೇರಿ ನಿವಾಸಿಗಳ ಮುಖದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ.

ವಸತಿ ಸಚಿವರಾಗಿ ಬಿ. ಝಡ್. ಜಮೀರ್ ಅಹಮದ್ ಖಾನ್ ಅವರು ಈ ಹೊಣೆಗಾರಿಕೆ ವಹಿಸಿಕೊಂಡ ನಂತರ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಮಂಜೂರಾದ ಮನೆಗಳ ಕಾಮಗಾರಿ ಪೂರ್ಣಗೊಳ್ಳದೆ ಲಕ್ಷಾಂತರ ಕುಟುಂಬ ಸಂಕಷ್ಟ ಹಾಗೂ ಆತಂಕದಲ್ಲಿದ್ದ ಬಗ್ಗೆ ವಾಸ್ತವದ ಮಾಹಿತಿ ಸಂಗ್ರಹಿಸಿ ಕೊಳೆಗೇರಿ ಅಭಿವೃದ್ಧಿ ಮಂಡಳಿ ಆಯುಕ್ತರಾದ ಬಿ. ವೆಂಕಟೇಶ್ ಅವರ ಜತೆಗೂಡಿ ಖುದ್ದು ರಾಜ್ಯದ ಹಲವು ಜಿಲ್ಲೆಗಳಿಗೆ ಪ್ರವಾಸ ಮಾಡಿ, ಹಣಕಾಸು ಇಲಾಖೆ ಅಧಿಕಾರಿಗಳ ಜತೆ ನಿರಂತರ ಸಭೆ ನಡೆಸಿ ಕೊಳೆಗೇರಿ ನಿವಾಸಿಗಳು ತಮ್ಮ ಪಾಲಿನ ವಂತಿಗೆ ಹಣ ಹೊಂದಿಸಲು ಪರದಾಡುತ್ತಿದ್ದ ಬಗ್ಗೆ ಹಾಗೂ ಸಂಕಷ್ಟದಲ್ಲಿದ್ದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು, ಬಡ ಕುಟುಂಬಗಳಿಗೆ ಶಾಶ್ವತ ಸೂರು ದೊರಕಿಸಿಕೊಡುವಲ್ಲಿ ಮುತುವರ್ಜಿ ವಹಿಸಿದ್ದಾರೆ. ■



Downloaded From:www.kpscvaani.com



# ಪ್ರತಿ ಮಕ್ಕಳಿಗೂ ಒಂದೇ ರೀತಿಯ ಗುಣಮಟ್ಟದ ಶಿಕ್ಷಣ : ಸರ್ಕಾರದ ಆಶಯ

ಸಂಧ್ಯಾ ಸೊರಬ

ಇಂದಿನ ಮಕ್ಕಳೇ ನಮ್ಮ ದೇಶದ ಮುಂದಿನ ಪ್ರಜೆಗಳು. ಭವಿಷ್ಯದ ಆ ಪ್ರಜೆಗಳಿಗೆ ಉತ್ತಮ ಶಿಕ್ಷಣ ದೊರಕಿದರೆ ದೇಶವು ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ. ಬೆಳೆಯುವ ಪೈರು ಮೊಳಕೆಯಲ್ಲೇ ಎಂಬ ಗಾದೆ ಮಾತಿನಂತೆ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವು ಭದ್ರ ಬುನಾದಿಯನ್ನು ಹಾಕಿಕೊಡುತ್ತದೆ. ಹಾಗಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಚಿವರಾದ ಎಸ್. ಮಧು ಬಂಗಾರಪ್ಪ ಅವರು ತಮ್ಮ ಸರ್ಕಾರವು ಮಕ್ಕಳ ಶಿಕ್ಷಣಕ್ಕಾಗಿ ಕೈಗೊಂಡಿರುವ ಕ್ರಮಗಳ ಕುರಿತಂತೆ ವಾರ್ತಾ ಜನಪದಕ್ಕೆ ಸಂದರ್ಶನ ನೀಡಿದ್ದಾರೆ.

**ಪಠ್ಯಪುಸ್ತಕ ಪರಿಶೀಲನೆ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು?**

ಪಠ್ಯಪುಸ್ತಕ ಪರಿಷ್ಕರಣೆ ಎನ್ನುವುದು ಅಷ್ಟು ಸುಲಭದ ಕೆಲಸವಲ್ಲ. ಮಕ್ಕಳ ಮಾನಸಿಕ ಸ್ಥಿತಿ ಮತ್ತು ಸಮಾಜದ ಮನಸ್ಥಿತಿಯನ್ನು ಅರಿತು ಪರಿಷ್ಕರಿಸಬೇಕಾಗುತ್ತದೆ. ಇದು ಸೂಕ್ಷ್ಮವಾದ ಕೆಲಸವೂ ಹೌದಾದರೂ ಮುಖ್ಯವಾದ ಕ್ರಮ. ಈ ಹಿಂದೆ ಹೇಳಿದಂತೆ ಸರ್ಕಾರವು ಪಠ್ಯಪುಸ್ತಕ ಪರಿಷ್ಕರಣೆಗೆ ಬದ್ಧವಾಗಿದೆ. ಈ ಕೆಲಸ ಶಾಲಾರಂಭಕ್ಕೂ ಮೊದಲೇ ಆಗಬೇಕಾಗಿತ್ತು. ಆದರೆ ಸರ್ಕಾರದ ಮುಂದೆ ಈ ವಿಚಾರ ಬರುವ ಮುಂಚೆ ಹಾಗೂ ಸಮಿತಿ ರಚನೆಗೂ ಮುನ್ನವೇ ಶಾಲಾಮಕ್ಕಳ ಕೈಯಲ್ಲಿ  ಪಠ್ಯಪುಸ್ತಕವಿದ್ದವು. ಮಕ್ಕಳಲ್ಲಿ ತೀರಾ ಗೊಂದಲ ಹಾಗೂ ಸಮಸ್ಯೆ ಉಂಟಾಗಬಾರದು. ಹೀಗಾಗಿ ಬಹಳ ಎಚ್ಚರಿಕೆಯಿಂದ ಸರ್ಕಾರ ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದೆ. ಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆ ಅಂತಿಮ ಹಂತದಲ್ಲಿದ್ದು, ಪ್ರೊ.ಮಂಜುನಾಥ ಜಿ.ಹೆಗಡೆ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಜನವರಿ ಅಂತ್ಯದೊಳಗೆ ಅಂತಿಮ ವರದಿ ಸಲ್ಲಿಸಲಿದೆ.

ವಿವಾದಾತ್ಮಕ ಪಠ್ಯಗಳನ್ನು ಕೈಬಿಟ್ಟು, ಅವುಗಳನ್ನು ಇತರ ಪಾಠಗಳೊಂದಿಗೆ ಬದಲಿಸಲಾಗಿದೆ. ನಾವು ಪಠ್ಯಪುಸ್ತಕಗಳಲ್ಲಿ ಯಾವುದೇ ಪ್ರಮುಖ ಬದಲಾವಣೆಗಳನ್ನು ಮಾಡಿಲ್ಲ. ನಾವು ಕೆಲವು ಪಾಠಗಳನ್ನು ಮಾತ್ರ ಸೇರಿಸಿದ್ದೇವೆ. ಪಠ್ಯಕ್ರಮ, ಇತರ ಮಾನದಂಡಗಳ ಜೊತೆಗೆ ಅಧ್ಯಯನದ ವಸ್ತುಗಳ ಪ್ರಮಾಣವನ್ನು ಆಧರಿಸಿ ಕೆಲವನ್ನು ಮಾತ್ರವಷ್ಟೇ ತೆಗೆದಿದ್ದೇವೆ. ಪೂರಕ ಓದು ಎಂದು ಕೆಲವು ಶ್ರೇಷ್ಠ ಕಾವ್ಯಗಳನ್ನು ಸೇರಿಸಿ ಪಠ್ಯಪುಸ್ತಕದಲ್ಲಿ ಕನ್ನಡ ಭಾಷೆಯ ಪಾಠ ಮತ್ತು ವ್ಯಾಕರಣದ ಪಾಠಗಳನ್ನು ಸೇರಿಸಲಾಗಿದೆ. ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು ಪ್ರಸ್ತುತ ರಾಜ್ಯದ ವಿವಿಧ ಶಾಲೆಗಳಲ್ಲಿ ಮಕ್ಕಳಿಗೆ ಬೋಧಿಸುತ್ತಿರುವ 15 ಶಿಕ್ಷಕರನ್ನು ನೇಮಿಸಿಕೊಂಡಿದೆ. ಎಲ್ಲಾ ಪರಿಷ್ಕರಣೆಗಳು ಮತ್ತು



Downloaded From:www.kpscvaani.com



ಮಾಡಿದ ಬದಲಾವಣೆಗಳ ಬಗ್ಗೆ ಅವರನ್ನು ಸಮಾಲೋಚಿಸಿದೆ. ವಿಷಯ ತಜ್ಞರ ಒಮ್ಮತವನ್ನು ಹೊರತುಪಡಿಸಿ ಯಾವುದೇ ನಿರ್ಧಾರವನ್ನು ಏಕಪಕ್ಷೀಯವಾಗಿ ತೆಗೆದುಕೊಂಡಿಲ್ಲ. ಈ ಪ್ರಕ್ರಿಯೆಯಲ್ಲಿ ಸರ್ಕಾರ ಸಮಿತಿಗೆ ಯಾವುದೇ ಸಲಹೆಗಳನ್ನು ನೀಡಿಲ್ಲ.

ಒಟ್ಟಿನಲ್ಲಿ ವಿದ್ಯಾರ್ಥಿಗಳ ಹೊರೆಯನ್ನು ಕಡಿಮೆ ಮಾಡಲು ಸಂತೋಷದಾಯಕ ಕಲಿಕೆಗೆ ಅನುಕೂಲವಾಗುವಂತೆ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗಿದೆ. ಪರಿಷ್ಕರಣೆ ಸಂದರ್ಭದಲ್ಲಿ ಮಕ್ಕಳ ಮೇಲೆ ಯಾವುದೇ ವಿಚಾರಧಾರೆಗಳನ್ನು ಹೇರದಂತೆ ಎಚ್ಚರ ವಹಿಸಿದ್ದೇವೆ. ಹಾಗಾಗಿ ಪರಿಷ್ಕೃತ ಪಠ್ಯಗಳು ವಿದ್ಯಾರ್ಥಿ ಸ್ನೇಹಿ ಹಾಗೂ ಕಲಿಕಾ ಸ್ನೇಹಿಯಾಗಲಿದೆ.

**ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ರದ್ದುಗೊಳಿಸಿ, ರಾಜ್ಯ ಶಿಕ್ಷಣ ನೀತಿ ತರುವ ಬಗ್ಗೆ ಕೈಗೊಂಡ ಕ್ರಮಗಳೇನು?**

ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಕರ್ನಾಟಕವು 15 ಸದಸ್ಯರ ಆಯೋಗವನ್ನು ರಚಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಿಗೆ ಕರ್ನಾಟಕ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ರಾಜ್ಯ ಸರ್ಕಾರವು ತಜ್ಞರ ಸಮಿತಿಯನ್ನು ರಚಿಸಿದೆ.

2024-25 ರ ಒಂದು ಶೈಕ್ಷಣಿಕ ವರ್ಷಕ್ಕೆ ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲು ಸರ್ಕಾರವು ಸಮಿತಿಗೆ ವಹಿಸಿರುವುದರಿಂದ ಅದರ ನಂತರ ಹೊಸ ಪಠ್ಯಕ್ರಮದ ಚೌಕಟ್ಟು ಮತ್ತು ಪಠ್ಯಪುಸ್ತಕಗಳನ್ನು ಕರ್ನಾಟಕ ರಾಜ್ಯ ಶಿಕ್ಷಣ ನೀತಿಯಡಿಯಲ್ಲಿ ರಚಿಸಲಾಗುವುದು. ಇದೀಗ ಕರಡು ರಚಿಸಲಾಗುತಿದ್ದು, ನಮ್ಮ ರಾಜ್ಯ ಶಿಕ್ಷಣ ನೀತಿಯು ರಾಷ್ಟ್ರೀಯ ಶಿಕ್ಷಣ ನೀತಿಗಿಂತ ಉತ್ತಮವಾಗಿರಲಿದೆ.



ಪ್ರಖ್ಯಾತ ಶಿಕ್ಷಣ ತಜ್ಞರಾದ ಪ್ರೊ. ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಶಿಕ್ಷಣ ನೀತಿಯ ಕರಡು ತಯಾರಿಸಲು ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ರಚಿಸಲು ಅನುಮತಿ ನೀಡಿದ್ದು, ಇದರಲ್ಲಿ ಅರ್ಥಶಾಸ್ತ್ರಜ್ಞರು, ಪ್ರಾಧ್ಯಾಪಕರು, ಬರಹಗಾರರು ಇದ್ದಾರೆ. ಆಯೋಗವು ತನ್ನ ವರದಿಯನ್ನು ತಿಂಗಳಾಂತ್ಯಕ್ಕೆ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರವು 15 ಸದಸ್ಯರ ಸಮಿತಿಯನ್ನು ರಚಿಸುವ 'ಸರ್ಕಾರಿ ಆದೇಶ'ವನ್ನು ಹೊರಡಿಸಿದೆ. ತಜ್ಞರ ಸಲಹೆ ನೀಡಲು ಎಂಟು ವಿಷಯ ತಜ್ಞರು/ಸಲಹೆಗಾರರ ಪ್ರತ್ಯೇಕ ಗುಂಪು ಇದೆ. ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ/ ಬೆಂಗಳೂರು ಎಲ್ಲಾ ಆಡಳಿತಾತ್ಮಕ / ಸಚಿವಾಲಯದ ನೆರವು ಮತ್ತು ಲಾಜಿಸ್ಟಿಕ್ ಬೆಂಬಲವನ್ನು ಆಯೋಗಕ್ಕೆ ಒದಗಿಸುತ್ತದೆ. ಕರ್ನಾಟಕದಲ್ಲಿ ಶಾಲೆ ಮತ್ತು ಉನ್ನತ ಶಿಕ್ಷಣವನ್ನು ಎಚ್ಚರಿಕೆಯಿಂದ ಪರಿಶೀಲಿಸಲು, ಶಾಲೆಗಳು ಮತ್ತು ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ದಾಖಲಾತಿಯನ್ನು ಸಾಧಿಸಲು, ನೀತಿಗಳನ್ನು ರಚಿಸಲು ಆಯೋಗವನ್ನು ರಚಿಸಲು ರಾಜ್ಯ ಸರ್ಕಾರವು ನಿರ್ಧರಿಸಿದೆ.

ಸುಧಾರಿತ ಗುಣಮಟ್ಟದೊಂದಿಗೆ ಶಿಕ್ಷಣವನ್ನು ವಿಸ್ತರಿಸಲು, ಅಂದರೆ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಜ್ಞಾನವನ್ನು ನೀಡುವುದು, ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸುವುದು, ಕೌಶಲ್ಯ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡಿ ಉದ್ಯೋಗವನ್ನು ಹೆಚ್ಚಿಸಲು ಮತ್ತು ವಿದ್ಯಾರ್ಥಿಗಳಲ್ಲಿ ಉತ್ತಮ ನಾಗರಿಕತೆಯನ್ನು ನಿರ್ಮಿಸಲು ನೈತಿಕ ಶಿಕ್ಷಣವನ್ನು ನೀಡುತ್ತದೆ. ಕರ್ನಾಟಕದ ರಾಜ್ಯ ಶಿಕ್ಷಣ ನೀತಿಯು ದೇಶಕ್ಕೆ ಮಾದರಿ ಶಿಕ್ಷಣ ನೀತಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಾನು ಭಾವಿಸುತ್ತೇನೆ.

ಕರ್ನಾಟಕ ರಾಜ್ಯ ಶಿಕ್ಷಣ ನೀತಿಯ ಕರಡು ಸಿದ್ಧಪಡಿಸಲು ಪ್ರೊ. ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸ್ಥಾಪಿಸಲಾಗಿದೆ. ಈ ಸಮಿತಿಯು ವೈಜ್ಞಾನಿಕ ಮನೋಧರ್ಮ, ಬೌದ್ಧಿಕ ಬೆಳವಣಿಗೆ ಮತ್ತು ಅಗತ್ಯ ಶಿಕ್ಷಣವನ್ನು ಪೋಷಿಸಲು ಸೂಕ್ತ ಶಿಫಾರಸ್ಸುಗಳನ್ನು ನೀಡುತ್ತದೆ ಎಂದು ನನಗೆ ವಿಶ್ವಾಸವಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಈ ನಮ್ಮ ನೀತಿ ಒತ್ತು ನೀಡಲಿದೆ.

**ಈ ಇಲಾಖೆಯ ಸಚಿವರಾದ ನಂತರ ತಾವು ಇಲಾಖೆಯಲ್ಲಿ ಯಾವ ರೀತಿಯ ಛಾಪು ಮೂಡಿಸಬೇಕೆಂದಿದ್ದೀರಿ?**

ಈ ಖಾತೆ ನನಗೆ ಚಾಲೆಂಜಿಂಗ್ ಆಗಿದೆ. ಖಂಡಿತ ಈ ಹುದ್ದೆ ನನಗೊಂದು ಅತ್ಯುನ್ನತ ಜವಾಬ್ದಾರಿಯನ್ನು ನೀಡಿದೆ. ನನಗೂ ಶೈಕ್ಷಣಿಕ ವ್ಯವಸ್ಥೆಯನ್ನು ಕಲಿಯುವ ಅವಕಾಶ ನೀಡಿದೆ. ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ನನ್ನ


Downloaded From:www.kpscvaani.com

ಮೇಲೆ ವಿಶ್ವಾಸವಿಟ್ಟು ಈ ದೊಡ್ಡ ಇಲಾಖೆಯ ಜವಾಬ್ದಾರಿ ನೀಡಿದ್ದಾರೆ. ನನ್ನ ಮೇಲೆ ಹಿರಿಯರು ಹಾಗೂ ಪಕ್ಷ ಇಟ್ಟಿರುವ ವಿಶ್ವಾಸಕ್ಕೆ ನಾನು ಆಭಾರಿಯಾಗಿರುವೆ. ಬಹಳ ಮುನ್ನೆಚ್ಚರಿಕೆಯಿಂದ ಇಲಾಖೆಯಲ್ಲಿ ಜವಾಬ್ದಾರಿಯುತ ಹೆಜ್ಜೆಗಳನ್ನಿಡುತ್ತಿದ್ದೇನೆ. ನನಗೆ ನೀಡಿರುವ ಈ ಜವಾಬ್ದಾರಿಯನ್ನು ನಾನು ಹೃದಯಪೂರ್ವಕವಾಗಿ ಅದರಲ್ಲಿಯೂ ಮಕ್ಕಳ ಒಳಿತಿಗಾಗಿ ಖಂಡಿತವಾಗಿ ನಿಭಾಯಿಸುತ್ತೇನೆ.

**ತಮ್ಮ ಸರ್ಕಾರದ ಈ ಅವಧಿಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಏನೆಲ್ಲಾ ಬದಲಾವಣೆಗಳಾಗಿದೆ?**

ಮಕ್ಕಳು ದೇವರಿಗೆ ಸಮಾನರಾಗಿದ್ದು, ಶಿಕ್ಷಣದ ಮೂಲಕ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವ ಮೂಲಕ ಶೈಕ್ಷಣಿಕ ಅಭಿವೃದ್ಧಿ ಹೊಂದುವಂತೆ ಮಾಡಬೇಕು. ಪ್ರತಿ ಮಕ್ಕಳಿಗೂ ಒಂದೇ ರೀತಿಯ ಗುಣಮಟ್ಟದ ಶಿಕ್ಷಣ ನೀಡಲು ಇಲಾಖೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಯನ್ನು ಮಾಡಲಾಗುತ್ತಿದೆ. ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾದ ಸೌಲಭ್ಯಗಳು, ವಿಶೇಷಚೇತನ ಮಕ್ಕಳನ್ನೂ ಸೇರಿಸಿದಂತೆ ಎಲ್ಲರಿಗೂ ಸಮಾನವಾಗಿ ಶಿಕ್ಷಣ ನೀಡಬೇಕೆಂಬ ಸದುದ್ದೇಶ ನಮ್ಮದಾಗಿದೆ. ಸರ್ಕಾರಿ, ಅನುದಾನಿತ ಅಥವಾ ಅನುದಾನರಹಿತ ಯಾವುದೇ ಶಾಲೆಯಾಗಲೀ ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತು ಪಾಠ ಕಲಿಯಬಾರದು.

ಶಾಲೆಗಳಿಗೆ ಉಚಿತ ವಿದ್ಯುತ್ ನೀಡಿರುವುದರಿಂದ ಶಾಲೆಗಳಲ್ಲಿ ಶೈಕ್ಷಣಿಕ ಮಟ್ಟದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಶಾಲೆಗಳಿಗೆ ಉಚಿತ ವಿದ್ಯುತ್ ನೀಡಿರುವುದರಿಂದ ಮೂಲೆ ಹಿಡಿದಿದ್ದ ಕಂಪ್ಯೂಟರ್ ಸೇರಿದಂತೆ ಶಾಲಾ ಶೈಕ್ಷಣಿಕ ಉಪಕರಣಗಳು ಮತ್ತೆ ಚಾಲನೆಗೊಂಡಿದ್ದು, ಈಗ ಶೈಕ್ಷಣಿಕ ಕಲಿಕಾವಸ್ತುಗಳಿಗೆ ಜೀವ ಬಂದಂತಾಗಿದೆ. ಉಚಿತ ವಿದ್ಯುತ್‌ನಿಂದಾಗಿ ಬಿಸಿಲಿನ ತಾಪ ಹೆಚ್ಚಿರುವ ಕಡೆಗಳಲ್ಲಿ ಶಾಲಾ ಕೊಠಡಿಯಲ್ಲಿ ಫ್ಯಾನ್‌ಗಳನ್ನು ಬಳಸಲು ಅನುಕೂಲವಾಗಿದೆ.

ಈ ಹಿಂದೆ ವಿದ್ಯುತ್ ವೆಚ್ಚ ಭರಿಸಬೇಕಲ್ಲಾ ಅನ್ನುವ ಚಿಂತೆ ಶಾಲಾ ಆಡಳಿತ ಮಂಡಳಿಗಿತ್ತು. ಆದರೀಗ ಈ ಸಮಸ್ಯೆ ಉಚಿತ ವಿದ್ಯುತ್‌ನಿಂದಾಗಿ ಎಲ್ಲವೂ ಬದಲಾಗಿದೆ. ಕೆಲವೆಡೆ ಸಂಜೆ ಕತ್ತಲಾದ ಮೇಲೂ ಸ್ಪೆಷಲ್ ಕ್ಲಾಸ್ ಅನ್ನು ಶಿಕ್ಷಕರು ತೆಗೆದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಉಚಿತ ಶುದ್ಧ ಕುಡಿಯುವ ನೀರು ಕೂಡ ಇದರಿಂದ ಲಭ್ಯವಾಗುತ್ತಿರುವುದು ಸಂತಸದ ವಿಚಾರ.

**ಇಲಾಖೆಯಲ್ಲಿ ಜಾರಿಗೆ ತರಲಾಗಿರುವ ಸಸ್ಯ ಶ್ಯಾಮಲ ಬಗ್ಗೆ ತಿಳಿಸಿರಿ.**

ಮರಗಳು ಮಾತನಾಡದೇ ಇರಬಹುದು ಆದರೆ ಬಾಂಧವ್ಯವನ್ನು ವೃದ್ಧಿಸುತ್ತವೆ. ಎಲ್ಲರನ್ನು ತನ್ನೊಳಗೆ ಹಿಡಿದಿಟ್ಟುಕೊಂಡು ಸಂತೈಸುವ ಮನಸ್ಸಿಗೆ ಮುದ ನೀಡುವ ಶಕ್ತಿ ಪ್ರಕೃತಿಗೆ ಇದೆ. ಪ್ರಕೃತಿಯನ್ನು, ಸಸ್ಯಗಳನ್ನು ಪ್ರೀತಿಸಿದಷ್ಟು ಮನಸ್ಸು ಹಗುರಾಗುತ್ತದೆ. ಪ್ರಾಕೃತಿಕ ಪರಿಸರದ ನೈಜ ಅರಿವಿನ ಜೊತೆಗೆ ಈ ಎಲ್ಲಾ ಗುಣಗಳು "ಬೆಳೆಯುವ ಸಿರಿ ಮೊಳಕೆಯಲ್ಲಿ" ಎನ್ನುವಂತೆ ಶಾಲಾ ಮಕ್ಕಳಲ್ಲಿ ನಮ್ಮ ಈ "ಸಸ್ಯ ಶ್ಯಾಮಲಾ" ಎನ್ನುವ ಕಾರ್ಯಕ್ರಮದ ಮೂಲಕ ಅವರಲ್ಲಿ ಬೆಸುಗೆಯನ್ನುಂಟು ಮಾಡಲಾಗುತ್ತದೆ. ಇದು ಮಕ್ಕಳಿಗಾಗಿಯೇ ಅವರ ಸಂತಸಕ್ಕಾಗಿಯೇ ರೂಪಿಸಿರುವ ಕಾರ್ಯಕ್ರಮ. ಇದು ನಮ್ಮ ತಂದೆಯವರು ಮತ್ತು ಮಾಜಿ ಮುಖ್ಯಮಂತ್ರಿಗಳಾಗಿದ್ದ ಎಸ್.ಬಂಗಾರಪ್ಪ ಅವರ ಕಲ್ಪನೆಯೂ ಆಗಿತ್ತು.

ಶಾಲಾ ಮಕ್ಕಳು ತಮ್ಮ ಹೆಸರಿನಲ್ಲಿಯೋ ಅಥವಾ ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿಯೋ ಶಾಲಾ ಅಂಗಳದಲ್ಲಿ ಸಸ್ಯವನ್ನು ನೆಟ್ಟು ಪೋಷಿಸುವ ಮನೋಭಾವ ಬೆಳೆಸಿಕೊಳ್ಳುತ್ತಾರೆ. ಪರಿಸರವನ್ನು ಪ್ರೀತಿಸಲಾರಂಭಿಸುತ್ತಾರೆ. ಅಷ್ಟೇ ಅಲ್ಲ ಈ ಸಸ್ಯ ಪ್ರೀತಿಯು ಶಾಲೆಗೆ ಗೈರಾಗುವುದನ್ನು ತಪ್ಪಿಸುವಂತೆ ಮಾಡುತ್ತದೆ.

ಮುಂದಿನ ಒಂದು ವರ್ಷದಲ್ಲಿ 'ಸಸ್ಯ ಶ್ಯಾಮಲ' ಯೋಜನೆಯಡಿ 50 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡುವ ಗುರಿಯನ್ನು ಹೊಂದಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ರಾಜ್ಯಾದ್ಯಂತ 2.5 ಕೋಟಿ ಸಸಿಗಳನ್ನು ನೆಡಲಾಗುವುದು.

ಪರಿಸರದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ರಾಜ್ಯ ಬಜೆಟ್‌ನಲ್ಲಿ ಕಾರ್ಯಕ್ರಮ ಘೋಷಿಸಲಾಗಿದೆ. ಶಿಕ್ಷಣ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ಸ್ಥಳಾವಕಾಶವುಳ್ಳ ಶಾಲೆಗಳ ಸುತ್ತಮುತ್ತ ಒಂದು ವರ್ಷದ ಕಾಲಾವಧಿಯಲ್ಲಿ 50 ಲಕ್ಷ ಸಸಿಗಳನ್ನು ನೆಡುವ ವಿನೂತನ 'ಸಸ್ಯ ಶ್ಯಾಮಲ' ಹಮ್ಮಿಕೊಳ್ಳಲಾಗುತ್ತದೆ. 1 ರಿಂದ 12 ನೇ ತರಗತಿಯ ಮಕ್ಕಳು ಸಸಿಗಳನ್ನು ನೆಡುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಪ್ರತಿ ಶಾಲೆಗೆ ಗರಿಷ್ಠ 50 ಸಸಿಗಳನ್ನು ನೀಡಲಾಗುತ್ತದೆ.

**ಏನಿದು ಕ್ಲಸ್ಟರ್ ಮಾದರಿ ಶಿಕ್ಷಣ?**

ಎಲ್ಲ ಸೌಕರ್ಯಗಳಿರುವ ಹೆಗ್ಗಳಿಕೆಗೆ ಪಾತ್ರವಾಗಿದ್ದ ಅದೆಷ್ಟೋ ಮಾದರಿ ಶಾಲೆಗಳು ಏಕೋಪಾಧ್ಯಾಯ ವ್ಯವಸ್ಥೆಯಿಂದಲೋ, ಕಡಿಮೆ ಮಕ್ಕಳು ಎನ್ನುವ ಕಾರಣಕ್ಕೋ, ಸಾರಿಗೆ ಸೌಲಭ್ಯ ಇಲ್ಲ ಎನ್ನುವ ಕಾರಣಕ್ಕೋ, ಶಾಲೆಗಳನ್ನು ಮುಚ್ಚುವ ಪರಿಸ್ಥಿತಿಗೆ ಬರುತ್ತವೆ. ಇಂತಹ ಸಮಸ್ಯೆಗಳನ್ನು ಪರಿಹರಿಸಲೆಂದೇ "ಕ್ಲಸ್ಟರ್ ಮಾದರಿ ಶಿಕ್ಷಣ" ವನ್ನು ಸರ್ಕಾರ ಜಾರಿಗೊಳಿಸಲು ಚಿಂತನೆ ನಡೆಸಿದೆ. ಶಿಕ್ಷಕರ ಕೊರತೆಯಿಂದ ಅಥವಾ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ನೆಪಕ್ಕಾಗಿ ಶಾಲೆಯನ್ನು ಮುಚ್ಚಬಾರದು. ಹಾಗಾಗಿ ಶಿಕ್ಷಕರು ಮತ್ತು ಮಕ್ಕಳನ್ನು ಒಟ್ಟುಗೂಡಿಸಿ, ಸಾರಿಗೆ ಸಂಪರ್ಕ ವ್ಯವಸ್ಥೆ ಇರುವ ಕ್ಲಸ್ಟರ್ ಮಾದರಿ ಎನ್ನುವ ಶಾಲೆಯನ್ನು ಸ್ಥಾಪಿಸಲಾಗುವುದು. ಈ ಎಲ್ಲಾ ಸೌಲಭ್ಯಗಳಿರುವಂತೆ ಮಕ್ಕಳು ಮತ್ತು ಶಿಕ್ಷಕರನ್ನು ಒಂದೆಡೆ ಸೇರಿಸಿ ಶಿಕ್ಷಣ ನೀಡುವ ವ್ಯವಸ್ಥೆಯೇ ಕ್ಲಸ್ಟರ್ ಮಾದರಿ ಶಿಕ್ಷಣ.

**ಇಲಾಖೆಯ ಹೊಸ ಯೋಜನೆಗಳೇನು?**

ಸಮಸ್ಯೆಗಳು ಯಾವಾಗ ಬೇಕಾದರೂ ಹುಟ್ಟಬಹುದು. ಅವುಗಳನ್ನು ಸರಿಪಡಿಸಲು ಮುಂದಾಗಬೇಕು. ಸಾಕಷ್ಟು ಯೋಜನೆಗಳು ನಮ್ಮ ಸರ್ಕಾರದ ಬತ್ತಳಿಕೆಯಲ್ಲಿವೆ. ಸರ್ಕಾರಿ ಶಾಲೆಯಲ್ಲಿಯೇ ಓದಬೇಕು, ಓದಿಸಬೇಕು ಎಂಬ ಭಾವನೆ ಎಲ್ಲರಲ್ಲಿಯೂ ಮೂಡಿಸಬೇಕು ಮತ್ತು ಮೂಡಬೇಕು. ಅದರತ್ತ ಚಿತ್ತಹರಿಸುವುದು ನಮ್ಮ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರು ಸೇರಿದಂತೆ ನನ್ನ ಆಶಯವೂ ಕೂಡ ಆಗಿದೆ. ಮುಂದಿನ ದಿನಗಳಲ್ಲಿ ಮಕ್ಕಳಿಗೆ ಎಲ್‌ಕೆಜಿಯಿಂದ ದ್ವಿತೀಯ ಪಿಯುಸಿ ಶಿಕ್ಷಣ ಒಂದೇ ಕಡೆ ಸಿಗುವಂತೆ ಮಾಡಬೇಕೆಂಬ ಚಿಂತನೆ ಇದೆ. ಹೀಗೆ ಮಾಡಿದಲ್ಲಿ ಮಕ್ಕಳಿಗೆ ಒಂದೇ ಕಡೆ ಈ ಎಲ್ಲಾ ಶಿಕ್ಷಣ ಸಿಗುವ ಜೊತೆ ಮಕ್ಕಳು ಬೇರೆಬೇರೆ ಕಡೆಗೆ ಚದುರಿಹೋಗುವುದು ಕಡಿಮೆಯಾಗುತ್ತದೆ. ಶಿಕ್ಷಕರಿಗೂ ನಿರಂತರ ವಿದ್ಯಾರ್ಥಿಗಳ ಮೇಲೆ ಗಮನ ಇಡಲು ಸಾಧ್ಯವಾಗಲಿದೆ.


Downloaded From:www.kpscvaani.com



# ಸರಳ ವಿವಾಹಗಳ ಉತ್ತೇಜನಕ್ಕಾಗಿ ಸರ್ಕಾರದಿಂದ ಮಾಂಗಲ್ಯ ಭಾಗ್ಯ

**ವಿವಾಹಕ್ಕೆ ಸಿದ್ಧವಾಗಿರುವ ಜೋಡಿಗಳನ್ನು ಸರಳ ವಿವಾಹಕ್ಕೆ ಉತ್ತೇಜನ ನೀಡುವ ಸಲುವಾಗಿ 'ಮಾಂಗಲ್ಯ ಭಾಗ್ಯ' ಎಂಬ ಹೆಸರಿನಡಿ ಸರ್ಕಾರವು ಸಾಮೂಹಿಕ ವಿವಾಹಗಳನ್ನು ನೆರವೇರಿಸಲು ನಿರ್ಧರಿಸಿದೆ.**

ಕೆ.ಎಸ್. ರಾಜಮನ್ಸೂರ್

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಮಾಂಗಲ್ಯ ಭಾಗ್ಯ ಯೋಜನೆ ರಾಜ್ಯದ ಎಲ್ಲಾ ಎ ಮತ್ತು ಬಿ ಗ್ರೇಡ್ ದೇವಾಲಯಗಳಿಗೆ ವಿಸ್ತರಿಣೆಯಾಗಿದೆ. ಬಡ ಮತ್ತು ಮಧ್ಯಮ ವರ್ಗದ ಜನರನ್ನು ಆರ್ಥಿಕ–ಸಾಮಾಜಿಕ ಸಂಕಷ್ಟದಿಂದ ಪಾರು ಮಾಡಿ ಸರಳ ವಿವಾಹಕ್ಕೆ ಸರ್ಕಾರವೇ ಮಾದರಿಯಾಗಿದೆ.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಉಸ್ತುವಾರಿಯಲ್ಲಿ ರಾಜ್ಯದ 395 ಎ ಮತ್ತು ಬಿ ಗ್ರೇಡ್ ದೇವಾಲಯಗಳಲ್ಲಿ ವಿವಾಹ ಕಾರ್ಯಕ್ರಮ ನಡೆಸಲಾಗುತ್ತದೆ.

ಸರಳ ವಿವಾಹ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರವು ಮುಜರಾಯಿ ಇಲಾಖೆಯ ಸಾಮೂಹಿಕ ವಿವಾಹ ಯೋಜನೆಗೆ 'ಮಾಂಗಲ್ಯ ಭಾಗ್ಯ' ಎಂದು ಮರು ನಾಮಕರಣ ಮಾಡಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪರಿಣಾಕಾರಿಯಾಗಿ ಜಾರಿಗೊಳಿಸಲು ಮುಜರಾಯಿ ಇಲಾಖೆ ನಿರ್ಧರಿಸಿದೆ.

ಈ ಹಿಂದೆ ಆಯ್ದ 100 ದೇವಾಲಯಗಳಲ್ಲಿ ಮಾತ್ರ ಜಾರಿಯಲ್ಲಿದ್ದ ಯೋಜನೆಯನ್ನು ಇದೀಗ ರಾಜ್ಯದ ಎಲ್ಲಾ 'ಎ' ಮತ್ತು 'ಬಿ' ಗ್ರೇಡ್ ದೇವಾಲಯಗಳಿಗೂ ವಿಸ್ತರಿಸಲಾಗಿದೆ. ಪ್ರತಿ ತಿಂಗಳು ಸಾಮೂಹಿಕ ವಿವಾಹ ನಡೆಸಲು ಸ್ಥಳೀಯ ದೇವಾಲಯ ಆಡಳಿತ ಮಂಡಳಿಗೆ ಸೂಚಿಸಲಾಗಿದೆ.

ವಿವಾಹಕ್ಕೆ ಸಿದ್ಧವಾಗಿರುವ ಜೋಡಿಗಳಿಗೆ ಸರಳವಾಗಿ ಮದುವೆ ಮಾಡಿಸಲು 'ಮಾಂಗಲ್ಯ ಭಾಗ್ಯ' ಎಂಬ ಹೆಸರಿನಡಿ ಸಾಮೂಹಿಕ ವಿವಾಹಗಳನ್ನು ನೆರವೇರಿಸಲು ಸರ್ಕಾರ ನಿರ್ಧರಿಸಿದೆ. ಇತ್ತೀಚೆಗೆ ನಡೆದ ರಾಜ್ಯ ಧಾರ್ಮಿಕ ಪರಿಷತ್ ಸಭೆಯಲ್ಲಿ ಈ ಯೋಜನೆಗೆ 'ಮಾಂಗಲ್ಯ ಭಾಗ್ಯ' ಎಂದು ಮರು ನಾಮಕರಣ ಮಾಡಲಾಗಿದೆ.

**ವಧು–ವರರಿಗೆ ಸಿಗುವ ಸೌಲಭ್ಯ:**

ವರನಿಗೆ ಅಂಗಿ, ಧೋತಿ ಹಾಗೂ 5 ಸಾವಿರ ರೂಪಾಯಿ ನಗದು ಮತ್ತು



Downloaded From:www.kpscvaani.com

ವಧುವಿಗೆ ಪ್ರೋತ್ಸಾಹಧನವಾಗಿ 10 ಸಾವಿರ ರುಪಾಯಿ, 8 ಗ್ರಾಂ ಚಿನ್ನದ ತಾಳಿ–ಗುಂಡು (40 ಸಾವಿರ ಮೌಲ್ಯಕ್ಕೆ ಲಭ್ಯವಾಗುವ ಚಿನ್ನ) ನೀಡಲಾಗುತ್ತದೆ. ಮದುವೆಯ ಒಟ್ಟು ವೆಚ್ಚ 55 ಸಾವಿರ ರೂಪಾಯಿ. ಜತೆಗೆ ವಧು–ವರರ ಬಂಧುಗಳಿಗೆ ಊಟೋಪಚಾರದ ವ್ಯವಸ್ಥೆಯನ್ನು ದೇವಾಲಯದ ಆಡಳಿತ ಮಂಡಳಿಗಳೇ ಮಾಡಲಿವೆ. ಈ ಹಿಂದೆ ಸಪ್ತಪದಿ ಯೋಜನೆಯಡಿ ಇದ್ದ ಈ ಎಲ್ಲಾ ನಿಯಮ ಹಾಗೂ ಮಾರ್ಗಸೂಚಿ 'ಮಾಂಗಲ್ಯ ಭಾಗ್ಯ' ಯೋಜನೆಯಲ್ಲೂ ಮುಂದುವರಿಯಲಿದೆ. ಈ ಯೋಜನೆಯಡಿ ಕೈಗೊಳ್ಳುವ ಸಾಮೂಹಿಕ ವಿವಾಹಕ್ಕೆ ತಗಲುವ ವೆಚ್ಚವನ್ನು ದೇವಾಲಯದ ನಿಧಿಯಿಂದ ಭರಿಸಲಾಗುವುದು. ಒಂದೊಮ್ಮೆ ಕಾರ್ಯಕ್ರಮ ನಡೆಸಲು ಸದರಿ ದೇವಾಲಯದಿಂದ ಸಾಧ್ಯವಾಗದಿದ್ದಾಗ ಮಾತ್ರ ವಿವಾಹವಾಗುವ ವಧು–ವರರಿಗೆ ನೀಡುವ ಪ್ರೋತ್ಸಾಹಧನವನ್ನು ಇಲಾಖೆಯ ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಲಾಗುತ್ತದೆ.

**ಪಾಲಿಸಬೇಕಾದ ನಿಬಂಧನೆಗಳು:**

- ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಧಾರ್ಮಿಕ ಪರಿಷತ್ತಿನ ಆಗಮ ಪಂಡಿತರು ಅನುಕೂಲಕರ ದಿನಾಂಕ ನಿಗದಿಪಡಿಸಿಕೊಂಡು ವಿವಾಹದ ದಿನಾಂಕ ನಿಗದಿಪಡಿಸಬಹುದು.
- ವಧು–ವರರ ತಂದೆ ತಾಯಿ ವಿವಾಹಕ್ಕೆ ಒಪ್ಪಿಗೆ ಸೂಚಿಸಿ ವಿವಾಹ ದಿನದಂದು ಉಪಸ್ಥಿತರಿರಬೇಕು ಹಾಗೂ ಎರಡೂ ಕಡೆಯಿಂದ ಸಾಕ್ಷಿದಾರರು ಹಾಜರಾದಲ್ಲಿ ಮಾತ್ರ ವಿವಾಹ ನಡೆಸಲಾಗುವುದು.
- ಒಂದು ವೇಳೆ ವಧು–ವರರ ತಂದೆ– ತಾಯಿ ಮೃತಪಟ್ಟಿದ್ದಲ್ಲಿ ಅವರ ವಾರಸುದಾರರ ಸಂಪೂರ್ಣ ಒಪ್ಪಿಗೆ ಅಗತ್ಯ. ವಿವಾಹ ದಿನದಂದು ಅವರು ಕಡ್ಡಾಯವಾಗಿ ಹಾಜರಿರಬೇಕು (ನಿಧನದ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರು ಪಡಿಸಬೇಕು).
- ಸಾರ್ವಜನಿಕರಿಂದ ಯಾವುದೇ ದೂರು, ತಕರಾರು ಬಂದಲ್ಲಿ ಅಂತಹ ವಿವಾಹವಾಗುವ ವಧು ವರರ ಬಗ್ಗೆ ಪರಿಶೀಲನೆ ಮಾಡಲಾಗುವುದು.
- ಸರ್ಕಾರದ ನಿಯಮದಂತೆ ವರನಿಗೆ ಕನಿಷ್ಠ 21 ವರ್ಷ ವಧುವಿಗೆ ಕನಿಷ್ಠ 18 ವರ್ಷ ತುಂಬಿರಬೇಕು. ವಯಸ್ಸಿನ ಬಗ್ಗೆ ಸರ್ಕಾರದ ಅಧಿಕೃತ ದಾಖಲೆ ಕಡ್ಡಾಯವಾಗಿದೆ.
- ವಿವಾಹ ನಡೆಯುವ ಸ್ಥಳದಲ್ಲಿ ವಿವಾಹ ನೋಂದಣಾಧಿಕಾರಿಗಳು ಮತ್ತು ಆಯಾ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದು ಕಡ್ಡಾಯವಾಗಿ ವಿವಾಹ ನೋಂದಣಿ ಮಾಡಿಸಲು ಕ್ರಮ ಕೈಗೊಳ್ಳಬೇಕು.
- ಐದು ಜೋಡಿಗಿಂತ ಕಡಿಮೆ ನೋಂದಣಿಯಾಗಿರುವ ದೇವಾಲಯಗಳಲ್ಲಿ ಒಂದು ದಿನಾಂಕ ನಿಗದಿಪಡಿಸಿ ಸರಳ ವಿವಾಹ ಕಾರ್ಯಕ್ರಮ ನಡೆಸಬೇಕು.
- ಆರರಿಂದ ಹತ್ತು ಜೋಡಿ ನೋಂದಣಿಯಾಗಿರುವ ದೇವಾಲಯಗಳಲ್ಲಿ ಒಂದು ಅಥವಾ ಎರಡು ದಿನಾಂಕ ನಿಗದಿಪಡಿಸಿ ಸರಳ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- 12 ರಿಂದ 23 ಜೋಡಿಗಳು ನೋಂದಾಯಿಸಿರುವ ದೇವಾಲಯಗಳಲ್ಲಿ ಎರಡು ಅಥವಾ ಮೂರು ದಿನಾಂಕಗಳಂದು ಕಾರ್ಯಕ್ರಮ ಹಮ್ಮಿಕೊಳ್ಳುವುದು.
- 60 ಜೋಡಿಗಳು ನೋಂದಾಯಿಸಿರುವ ದೇವಾಲಯಗಳಲ್ಲಿ ವಿವಿಧ ದಿನಾಂಕಗಳಂದು ಸರಳ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ವಧು–ವರರ ಕಡೆಯಿಂದ ಯಾವುದೇ ದಕ್ಷಿಣೆ ಪಡೆಯುವಂತಿಲ್ಲ.
- ಸಾಮೂಹಿಕ ವಿವಾಹದಲ್ಲಿ ಭಾಗವಹಿಸುವ ವಧು–ವರರ ಮೊದಲ ವಿವಾಹಕ್ಕೆ ಮಾತ್ರ ಅವಕಾಶ. ಎರಡನೇ ವಿವಾಹಕ್ಕೆ ಅವಕಾಶವಿರುವುದಿಲ್ಲ.
- ವಧು–ವರರಿಗಾಗಿ ನೀಡುವ ಪ್ರೋತ್ಸಾಹಧನವನ್ನು ಅವರ ಬ್ಯಾಂಕ್ ಖಾತೆಗಳಿಗೆ ವಿವಾಹವಾದ ಮೂರು ದಿನಗಳ ಒಳಗಾಗಿ ನೇರವಾಗಿ ಜಮೆ ಮಾಡಲಾಗುವುದು.
- ವಿವಾಹಕ್ಕೆ ಆಗಮಿಸುವ ವಧು–ವರರು ಮತ್ತು ಅವರ ಹತ್ತಿರದ ಬಂಧುಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡಲು ತಗಲುವ ವೆಚ್ಚವನ್ನು ದೇವಾಲಯದ ನಿಧಿಯಿಂದ ಭರಿಸತಕ್ಕದ್ದು.
- ಸಾಮೂಹಿಕ ವಿವಾಹಗಳಿಗೆ ನೋಂದಾಯಿಸಿಕೊಂಡಿರುವ ಅರ್ಜಿಗಳ ಸಂಖ್ಯೆಗೆ ಅನುಗುಣವಾಗಿ ವಿವಾಹ ನಡೆಸುವ ಸ್ಥಳವನ್ನು 15 ದಿನ ಮುಂಚಿತವಾಗಿ ಗುರುತಿಸಿ ಅಗತ್ಯ ಏರ್ಪಾಡು ಮಾಡಬೇಕು.
- ಆಯಾ ಜಿಲ್ಲಾಧಿಕಾರಿಗಳು ಮೇಲುಸ್ತುವಾರಿ ವಹಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕು.

**ಮಾಂಗಲ್ಯ ಭಾಗ್ಯ ಜಾರಿ:**

2023ರ ನವೆಂಬರ್ 16ರಿಂದಲೇ ಸಾಮೂಹಿಕ ವಿವಾಹ ಯೋಜನೆ ಮರು ಜಾರಿಯಾಗಿದೆ. 2024ರ ಜನವರಿಯಲ್ಲಿ ಸಾಮೂಹಿಕ ವಿವಾಹಕ್ಕಾಗಿ 28 ಮತ್ತು 31 ರ ದಿನಾಂಕ ನಿಗದಿಪಡಿಸಲಾಗಿದೆ.

**ದೇವಾಲಯಗಳಲ್ಲಿ ನೋಂದಣಿ:**

ಈ ಯೋಜನೆಯ ಸೌಲಭ್ಯದಡಿಯಲ್ಲಿ ಸರ್ಕಾರ ನಿಗದಿಪಡಿಸಿದ ದಿನಾಂಕಗಳಂದು ಮದುವೆಯಾಗಲು ಬಯಸುವವರು ಹತ್ತಿರದ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಅಲ್ಲಿಂದಲೇ ಪಡೆಯಬಹುದು.

**ಗ್ರೇಡ್‌ವಾರು ದೇವಾಲಯಗಳ ಸಂಖ್ಯೆ:**

ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಯಡಿ 34,563 ದೇವಾಲಯಗಳಿವೆ. 25 ಲಕ್ಷಕ್ಕೂ ಹೆಚ್ಚು ಆದಾಯವಿರುವ ದೇವಾಲಯಗಳನ್ನು 'ಎ' ಗ್ರೇಡ್, 5 ಲಕ್ಷ ರೂ. ಮೇಲ್ಪಟ್ಟು ಹಾಗೂ 25 ಲಕ್ಷ ರೂ.ಗಿಂತ ಕಡಿಮೆ ಆದಾಯ ಇರುವ ದೇವಾಲಯಗಳನ್ನು 'ಬಿ' ಗ್ರೇಡ್ ಹಾಗೂ 5 ಲಕ್ಷ ರೂಗಿಂತ ಕಡಿಮೆ ಆದಾಯವಿರುವ ದೇವಾಲಯಗಳನ್ನು 'ಸಿ' ಗ್ರೇಡ್ ದೇವಾಲಯಗಳೆಂದು ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ 205 'ಎ' ಗ್ರೇಡ್, 193 'ಬಿ' ಗ್ರೇಡ್ ಹಾಗೂ 34,105 'ಸಿ' ಗ್ರೇಡ್ ದೇವಾಲಯಗಳಿವೆ. ■



Downloaded From:www.kpscvaani.com







"ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಈ ಬಾರಿ ವಿಶ್ವಗುರು ಬಸವಣ್ಣ ಮತ್ತು ವಚನ ಸಾಹಿತ್ಯಾಧಾರಿತ ವಿಷಯದಲ್ಲಿ ಏರ್ಪಡಿಸಲಾಗಿದ್ದ 215 ನೇ ಫಲಪುಷ್ಪ ಪ್ರದರ್ಶನದ ಆಯ್ದ ಕೆಲವು ಛಾಯಚಿತ್ರಗಳು"




Downloaded From:www.kpscvaani.com









Downloaded From:www.kpscvaani.com

# ಚಿತ್ತ ಸೆಳೆಯುವ ಚಿತ್ತಾರಗಳ ಚಿತ್ರ ಸಂತೆ




ಜಡಿಯಪ್ಪ ಗೆದ್ಲಗಟ್ಟಿ





"ದೈನಂದಿನ ಜೀವನದಲ್ಲಿ ಆತ್ಮಕ್ಕೆ ಅಂಟಿಕೊಳ್ಳುವ ಕೊಳೆಯನ್ನು ಕಲೆ ತೊಳೆಯುತ್ತದೆ" ಎಂದು ಸ್ಪೇನಿನ ಜಗತ್ ಪ್ರಸಿದ್ಧ ಚಿತ್ರ ಕಲಾವಿದ ಫ್ಯಾಬ್ಲೋ ಪಿಕಾಸೊ ಹೇಳುತ್ತಾರೆ. ನಾಟಕ, ಸಂಗೀತ, ಜನಪದ, ಚಿತ್ರಕಲೆ ಸೇರಿದಂತೆ ಎಲ್ಲಾ ಕಲೆಗಳು ಹುಟ್ಟಿಕೊಂಡಿದ್ದು ಮಾನವನ ದಣಿವನ್ನು ಮರೆಸಲು ಹಾಗೂ ಅದಕ್ಕಿಂತ ಹೆಚ್ಚಾಗಿ ದೈನಂದಿನ ಜೀವನದಲ್ಲಿ ಆತ್ಮ ಅಥವಾ ಮನಸ್ಸಿಗೆ ಆಗುವ ನೋವುಗಳನ್ನು ಮರೆಸಲೊಂದು ಟಾನಿಕ್.

ಬಹುತೇಕ ಕಲೆಗಳು ಸಾಮಾನ್ಯರಿಂದ ಹಿಡಿದು ಅತೀ ಸಾಮಾನ್ಯರನ್ನು ಆಕರ್ಷಿಸಿದರೆ, ಚಿತ್ರಕಲೆ ಒಂದಿಷ್ಟು ವಿಭಿನ್ನ. ಅದನ್ನು ಆಸ್ವಾಧಿಸಲು ಮತ್ತೊಂದಿಷ್ಟು ವಿಶೇಷ ಆಸಕ್ತಿ ಹಾಗೂ ಮನಸ್ಸು ಬೇಕಾಗುತ್ತದೆ. ಸಾಮಾನ್ಯವಾಗಿ ಗಮನಿಸಿ ನೋಡಿದಲ್ಲಿ ಜನಪದ ಮತ್ತು ಸಂಗೀತ ಅತ್ಯಂತ ಹೆಚ್ಚು ಲಭ್ಯವಿರುವ ಹಾಗೂ ಜನಜನಿತವಾಗಿರುವ ಕಲೆಯಾಗಿದೆ. ನಂತರದ್ದು ರಂಗಭೂಮಿಯದ್ದು, ಇವೆರೆಡು ಆರ್ಥಿಕವಾಗಿ ಸರಳಾತಿ ಸರಳ ಜನರಿಗೂ ಕೈಗೆಟುಕುವ ದರದಲ್ಲಿ ಸಿಗುವಂತಹದ್ದು, ಚಿತ್ರಕಲೆಯು ನೂರು ರೂಪಾಯಿಂದ ನೂರು ಕೋಟಿ ರೂಪಾಯಿಗೂ ಮಾರಾಟವಾಗಬಲ್ಲದು. ರಾತ್ರೋ ರಾತ್ರಿ ಒಂದಿನ ಕಳೆಯುವುದರೊಳಗಾಗಿ ಒಬ್ಬ ಹೊಸ ಚಿತ್ರಕಲಾವಿದನನ್ನು ಕೋಟ್ಯಾದೀಶನನ್ನಾಗಿ ಮಾಡಬಲ್ಲದು. ಆ ಪೈಯಿಂಟಿಂಗ್ ಕೊಂಡವರು ಯಾಕಿಷ್ಟು ಬೆಲೆ ತೆತ್ತಿರಬಹುದು ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಸಾಧ್ಯವಿಲ್ಲ. ಇದೊಂದು ಶ್ರೀಮಂತ ಕಲೆಯಾಗಿದೆ.

ಚಿತ್ರಕಲೆಯು ಮಾನವನ ಅತ್ಯಂತ ಪುರಾತನ ಹವ್ಯಾಸಗಳಲ್ಲಿ ಒಂದು. ಇದಕ್ಕೆ ಆದಿ ಮಾನವರು ಬಿಡಿಸಿದ ಚಿತ್ರಕಲೆಗಳು ಸಾಕ್ಷಿಯಾಗಿವೆ. ಇಂತಹ ವಿಶೇಷ ಚಿತ್ರಕಲೆಗಳು ಹಾಗೂ ಚಿತ್ರಕಾರರನ್ನು ಒಳಗೊಂಡ ಹಲವು ಪ್ರದರ್ಶನಗಳು ಈ ಜಗತ್ತಿನಲ್ಲಿ ಪ್ರತಿದಿನ ಒಂದಲ್ಲ ಒಂದು ಕಡೆ ನಡೆಯುತ್ತಿರುತ್ತವೆ. ಭಾರತದಂತಹ ವಿಭಿನ್ನ



Downloaded From:www.kpscvaani.com

ಹಾಗೂ ವಿಶೇಷ ಸಾಂಸ್ಕೃತಿಕ ಹಿನ್ನಲೆಯುಳ್ಳ ದೇಶದಲ್ಲಿ ಹಲವಾರು ರೀತಿಯ ಫೈನ್ ಆರ್ಟ್ಸ್ ಪ್ರದರ್ಶನಗಳನ್ನು ಕಾಣಬಹುದಾಗಿದೆ. ಇಂತಹ ದೊಡ್ಡ ಸಾಂಸ್ಕೃತಿಕ ಹಿನ್ನೆಲೆಯುಳ್ಳ ದೊಡ್ಡ ದೇಶದಲ್ಲಿ ಎರಡು ದಶಕಗಳ ಹಿಂದೆ ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರಿನಲ್ಲಿ ಚಿಕ್ಕದಾಗಿ ಆರಂಭಿಸಿದ ಚಿತ್ರಸಂತೆ ದೇಶದ ಗಡಿಯನ್ನು ಮೀರಿ ಪ್ರಖ್ಯಾತಿ ಪಡೆದು ಇಂದು ಜಗತ್ತಿನ ಚಿತ್ರಕಲೆ ಭೂಪಟದಲ್ಲಿ ಗುರುತಿಸಿಕೊಂಡಿದೆ.

ಚಿತ್ರಕಲೆಯನ್ನು ಪ್ರೋತ್ಸಾಹಿಸಲು ಹಾಗೂ ಚಿತ್ರಕಲೆಯಲ್ಲಿ ಉತ್ತಮ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು 1960 ರ ದಶಕದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ ಅವರ ಅಧಿಕಾರಾವಧಿಯಲ್ಲಿ ಆರಂಭಿಸಿದ ಕರ್ನಾಟಕ ಚಿತ್ರಕಲಾ ಪರಿಷತ್ತು ಇಂದು ಜಾಗತಿಕ ಖ್ಯಾತಿಯ ಪ್ರಧಾನ ಲಲಿತಕಲೆಗಳ ಶಿಕ್ಷಣ ನೀಡುವ ಹಾಗೂ ಪ್ರದರ್ಶನ ಮಾಡುವ ಮತ್ತು ಪ್ರೋತ್ಸಾಹಿಸುವ ಸಂಸ್ಥೆಯಾಗಿ ಬೆಳೆದುನಿಂತಿದೆ.

ಇಂದು ಕರ್ನಾಟಕ ಚಿತ್ರಕಲಾ ಪರಿಷತ್ ಆವರಣದಲ್ಲಿ 19 ವಿವಿಧ ಗ್ಯಾಲರಿಗಳಿದ್ದು, ಅವುಗಳಲ್ಲಿ 14 ಗ್ಯಾಲರಿಗಳು ಶಾಶ್ವತ ಪ್ರದರ್ಶನಾಲಯಗಳಾಗಿವೆ. ಲಲಿತಕಲೆಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನಾ ಪದವಿ ಶಿಕ್ಷಣ ನೀಡುವುದರ ಜೊತೆಯಲ್ಲಿ ಸಂಜೆ ಕಾಲೇಜನ್ನು ಸಹ ನಡೆಸಲಾಗುತ್ತಿದೆ. ಈ ಆವರಣದಲ್ಲಿ ದೇಶ-ವಿದೇಶಗಳ ಖ್ಯಾತ ಚಿತ್ರಕಲಾವಿದರು ತಮ್ಮ ಚಿತ್ರಕಲೆಗಳ ಪ್ರದರ್ಶನವನ್ನು ಹಮ್ಮಿಕೊಂಡಿದ್ದಾರೆ.

ಚಿತ್ರಸಂತೆಯನ್ನು ಕ್ಯಾಲೆಂಡರ್ ವರ್ಷದ ಮೊದಲ ತಿಂಗಳು ಜನವರಿಯ ಮೊದಲ ಭಾನುವಾರದಂದು ವಾರ್ಷಿಕವಾಗಿ ಆಯೋಜಿಸಲಾಗುತ್ತದೆ. ಇದೊಂದು ಕಲೆಗಳ ಮತ್ತು ಕಲೆಗಾರರ ಜಾತ್ರೆಯಾಗಿದ್ದು, ಈ ಪ್ರಸಿದ್ಧ ಚಿತ್ರಕಲಾ ಸಂತೆಯಂತಹ ಉತ್ಸವವು ಬೆಂಗಳೂರಿನ ವಾರ್ಷಿಕ ಪ್ರಸಿದ್ಧ ಕಲಾ ಉತ್ಸವವಾಗಿದೆ. ಇಲ್ಲಿ ಪ್ರತಿವರ್ಷಕ್ಕಿಂತ ವರ್ಷ ಹೆಚ್ಚೆಚ್ಚು ಜನರು ಅಪಾರ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ.

ಸರಳವಾಗಿ ಕಲಾ ಮಾರುಕಟ್ಟೆ ಎಂಬರ್ಥದ ಈ ಚಿತ್ರಸಂತೆ ಕಲಾವಿದರ ಮಾರುಕಟ್ಟೆಯಾಗಿದೆ. ಕಲಾವಿದರು ತಾವು ಬಿಡಿಸುವ ಚಿತ್ರಗಳನ್ನು ಯಾವುದೇ ವೇದಿಕೆಗಾಗಿ ಕಾಯದೇ ತಾವೇ ಸ್ವತಃ ನೇರವಾಗಿ ಕಲಾಪ್ರಿಯರಿಗೆ ಮಾರಬಹುದಾಗಿದೆ. ಬೆಂಗಳೂರಿನಲ್ಲಿ ನಡೆಯುವ ಈ ವಾರ್ಷಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನೇಕ ಕಲಾವಿದರು ಹಾಗೂ ಕಲಾಪ್ರಿಯರು ಕಾಯುತ್ತಿರುತ್ತಾರೆ.

2003 ರಲ್ಲಿ ಸಣ್ಣ ಕಲಾ ಸಂತೆಯಾಗಿ ಆರಂಭವಾಗಿ ಕಾಲಾನಂತರದಲ್ಲಿ ದೇಶಾದ್ಯಂತ ವಿಸ್ತರಿಸಿದ ಈ ಚಿತ್ರಸಂತೆ ಇಂದು ಪ್ರಪಂಚದ ಕಲಾ ಭೂಪಟದಲ್ಲಿ ಗುರುತಿಸಿಕೊಳ್ಳುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು.

**ಈ ವರ್ಷದ ಚಿತ್ರಸಂತೆ ಬಾಹ್ಯಾಕಾಶ ವಿಜ್ಞಾನಿಗಳಿಗೆ ಅರ್ಪಣೆ:**

ಪ್ರಸ್ತುತ ಜಾಗತಿಕ ಬಾಹ್ಯಕಾಶ ಲೋಕದಲ್ಲಿ ಸಾಧನೆಗಳ ಉತ್ತುಂಗದಲ್ಲಿರುವ ನಮ್ಮ ದೇಶದ ವಿಜ್ಞಾನಿಗಳಿಗಾಗಿ ಈ ವರ್ಷದ ಚಿತ್ರಸಂತೆಯನ್ನು ಅರ್ಪಿಸಲಾಗಿತ್ತು. ಚಂದ್ರಯಾನ-3 ರ ಯಶಸ್ಸಿನ ನಂತರ ಸೂರ್ಯನ ಹೆಚ್ಚಿನ ಅಧ್ಯಯನಕ್ಕಾಗಿ ಅಡಿಯಿಟ್ಟಿರುವ ನಮ್ಮ ಬಾಹ್ಯಕಾಶ ವಿಜ್ಞಾನಿಗಳನ್ನು ಗೌರವಿಸಲಾಯಿತು. ಅಂತರಿಕ್ಷಯಾನದ ಪರಿಕಲ್ಪನೆಯಡಿಯಲ್ಲಿ ಚಿತ್ರಸಂತೆಯನ್ನು ಆಯೋಜಿಸಲಾಗಿತ್ತು.



> ಚಿತ್ರಕಲೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಸ್ತು ಸಂಗ್ರಹಾಲಯ ಹಾಗೂ ಆರ್ಟ್ ಗ್ಯಾಲರಿ ಸ್ಥಾಪಿಸಲು ರಾಜ್ಯ ಸರ್ಕಾರವು ಎಲ್ಲಾ ರೀತಿಯ ನೆರವು ಮಾಡಲಿದೆ.
>
> **-ಸಿದ್ದರಾಮಯ್ಯ, ಮುಖ್ಯಮಂತ್ರಿಗಳು**

**ಕಲೆಗಳ ನಡುವೆ ಮಕ್ಕಳ ಕಲರವ:**

ಬೆಂಗಳೂರಿಗರಿಗೆ ಭಾನುವಾರದ ಮೇಲೆ ಪ್ರೀತಿ ಜಾಸ್ತಿ, ರಜೆ ದಿನವಾದ ಅಂದು ಕೆಲವೊಬ್ಬರು ಮನೆಯಲ್ಲಿಯೇ ವಿಶ್ರಾಂತಿ ತೆಗೆದುಕೊಂಡರೆ, ಮತ್ತೊಂದಿಷ್ಟು ಜನ ಸಂಸಾರ ಸಮೇತರಾಗಿ ಒಂದಿನದ ಪಿಕ್ನಿಕ್‌ನಂತೆ ಸುತ್ತಾಡುತ್ತಾರೆ. ಅಂತಹ ಬಹುತೇಕರು ಜನವರಿ ಬಂತೆಂದರೆ ಚಿತ್ರಸಂತೆಯ ದಿನಾಂಕವನ್ನು ಗುರುತಿಟ್ಟುಕೊಳ್ಳುತ್ತಾರೆ.

ಚಿತ್ರಸಂತೆ ನಡೆಯುವ ರಸ್ತೆಯಲ್ಲಿ ವಾಹನಗಳ ಓಡಾಟ ಇರುವುದಿಲ್ಲ, ಮಕ್ಕಳಿಗಾಗಿ ತಿಂಡಿ-ತಿನಿಸುಗಳು, ತಾತ್ಕಾಲಿಕ ಹಚ್ಚೆಗಳು, ಕೂತಲ್ಲಿಯೇ ಹತ್ತು ನಿಮಿಷದ ಒಳಗಡೆ ಚಿತ್ರ ಬಿಡಿಸಿ ಕೊಡುವ ಕಲಾವಿದರು ಸೇರಿದಂತೆ ಮಕ್ಕಳ ವಿಶೇಷ ಆಟಿಕೆಗಳು ಸಹ ಚಿತ್ರಸಂತೆಯಲ್ಲಿ ಲಭ್ಯವಿರುತ್ತದೆ. ದೊಡ್ಡವರ ಕಲೆಗಳ ನಡುವೆ ಮಕ್ಕಳ ಕಲರವ ಜೋರಾಗಿಯೇ ಕೇಳಿಬರುತ್ತದೆ.



Downloaded From:www.kpscvaani.com



### ಕಲೆ ಮತ್ತು ಕಲಾವಿದರ ವಿಶೇಷತೆಗಳು:

ಈ ಬಾರಿಯ ಚಿತ್ರಸಂತೆಯಲ್ಲಿ ಅತ್ಯಂತ ಹೆಚ್ಚು ಕಲಾಪ್ರಿಯರನ್ನು ಸೆಳೆದಿದ್ದು ಕೇರಳದ ದಿವ್ಯಾಂಗ ಕಲಾವಿದೆ ಸುನಿತಾ ತ್ರಿಪ್ಪನಿಕ್ಕರ್ ಅವರು. ಹುಟ್ಟಿನಿಂದಲೇ ದಿವ್ಯಾಂಗರಾಗಿ ಜನಿಸಿದ ಅವರು ಮುಂದೆ ಚಿತ್ರಕಲೆಗೆ ಮಾರುಹೋಗಿ ಅದರಲ್ಲಿಯೇ ತಮ್ಮ ಜೀವನವನ್ನು ಕಂಡುಕೊಂಡವರು. ತಮ್ಮ ದಿವ್ಯಾಂಗತನವನ್ನು ಮೀರಿ ಬಾಯಲ್ಲಿ ಬ್ರಶ್ ಕಚ್ಚಿಕೊಂಡು ಚಿತ್ರವನ್ನು ಬಿಡಿಸುತ್ತಿದ್ದ ಅವರು ಅದ್ಭುತವಾದ ಚಿತ್ರಗಳನ್ನು ಸ್ಥಳದಲ್ಲಿಯೇ ಬಿಡಿಸುವ ಮೂಲಕ ಜನಾಕರ್ಷಣೆ ಸೆಳೆದರು.

ಉಳಿದಂತೆ ಚಿತ್ರಕಲೆಗಳಷ್ಟೆ ಕಲಾವಿದರು ರಚಿಸಿದ್ದ ವಿಶಿಷ್ಟ ಮತ್ತು ವಿಭಿನ್ನ ಕರಕುಶಲ ವಸ್ತುಗಳು ಸಹ ಜನರ ಕಣ್ಮನ ಸೆಳೆದವು. ಬಹುತೇಕ ಆಯಾ ರಾಜ್ಯಗಳ ವಿಶೇಷ ಜನಪದ ಕಲೆಗಳು ಸೇರಿದಂತೆ ಅಲ್ಲಿನ ಜನ-ಜೀವನದ ಚಿತ್ರಕಲೆಗಳು ರಾರಾಜಿಸುತ್ತಿದ್ದವು.

ನೂರಾರು ಸಂಖ್ಯೆಯಲ್ಲಿ ವಿದೇಶಿ ಕಲಾಪ್ರಿಯರು ಸಹ ಭಾಗವಹಿಸುವ ಮೂಲಕ ಚಿತ್ರಸಂತೆಯ ಬಣ್ಣವನ್ನು ಮತ್ತಷ್ಟು ರಂಗೇರಿಸಿದ್ದರು.

### 2024 ರ ಸಾಲಿನ ಚಿತ್ರಸಂತೆಯ ವಿಶೇಷತೆಗಳು:

- ಈ ಬಾರಿಯ ಚಿತ್ರಸಂತೆಯಲ್ಲಿ ನೂರು ರೂಪಾಯಿಂದ ಲಕ್ಷಾಂತರ ರೂಪಾಯಿವರೆಗಿನ ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟ ಮಾಡಲಾಯಿತು.
- ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದ್ದ ಚಿತ್ರಸಂತೆಯಲ್ಲಿ 22 ರಾಜ್ಯಗಳಿಂದ ಸುಮಾರು 1600 ಕ್ಕೂ ಹೆಚ್ಚು ಚಿತ್ರಕಲಾವಿದರು ಭಾಗವಹಿಸಿದ್ದರು. ಈ ಬಾರಿಯ ಚಿತ್ರಸಂತೆಯನ್ನು ಹಿಂದಿನ ವರ್ಷಕ್ಕಿಂತಲೂ ಹೆಚ್ಚಿನ ಅಂದರೆ 4 ಲಕ್ಷಕ್ಕೂ ಹೆಚ್ಚಿನ ಕಲಾಪ್ರಿಯರು ನೋಡಿ ಆನಂದಿಸಿದರು.



- ಚಿತ್ರಸಂತೆಗೆ ಆಗಮಿಸುವ ಕಲಾಪ್ರಿಯರಿಗೆ (ಮಕ್ಕಳು ಹಾಗೂ ವಯಸ್ಸಾದವರಿಗೆ) ತೊಂದರೆಯಾಗದಂತೆ ಉಚಿತವಾಗಿ ಬ್ಯಾಟರಿ ವಾಹನಗಳನ್ನು ವ್ಯವಸ್ಥೆ ಮಾಡಲಾಗಿತ್ತು.
- ಚಿತ್ರಸಂತೆಯಲ್ಲಿ ಭಾಗವಹಿಸಲು ಕೋರಿ ಅತಿ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದು ಚಿತ್ರಸಂತೆಗಿರುವ ಪ್ರಸಿದ್ಧತೆಯನ್ನು ತೋರಿಸುತ್ತದೆ.
- ಚಿತ್ರಗಳನ್ನು ಖರೀದಿಸುವವರಿಗಾಗಿ ತೊಂದರೆಯಾಗದಂತೆ ಕೆನರಾ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವತಿಯಿಂದ ಚಲಿಸುವ ಎಟಿಎಮ್ ಮಷಿನ್‌ಗಳ ವ್ಯವಸ್ಥೆ ಮಾಡಲಾಗಿತ್ತು.
- 20 ಆಯ್ದ ಸ್ಥಳಗಳಲ್ಲಿ ಮೊಬೈಲ್ ಶೌಚಾಲಯ ಹಾಗೂ ಸಿಸಿ ಕ್ಯಾಮೆರಾಗಳ ಅಳವಡಿಕೆ.
- ಭಾಗವಹಿಸುವ ಕಲಾವಿದರ ಬೇಡಿಕೆ ಹೆಚ್ಚಿದ್ದ ಕಾರಣಕ್ಕಾಗಿ ಈ ಹಿಂದಿಗಿಂತ ಹೆಚ್ಚಿನ ಜಾಗದಲ್ಲಿ ಚಿತ್ರಸಂತೆಯನ್ನು ವಿಸ್ತರಿಸಲಾಗಿತ್ತು.

### ಈ ವರ್ಷದ ಚಿತ್ರಸಂತೆಗೆ 50 ಲಕ್ಷ ರೂ ಗಳ ಅನುದಾನ ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಚಿತ್ರಕಲೆಯ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ, ಚಿತ್ರಕಲೆಗಾಗಿ ಇರುವ ಈ ಚಿತ್ರಕಲಾ ಪರಿಷತ್ತಿಗೆ ಈ ಬಾರಿ 50 ಲಕ್ಷ ರೂ. ಗಳ ಅನುದಾನವನ್ನು ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ ವತಿಯಿಂದ ಜನವರಿ 7 ರಂದು ಹಮ್ಮಿಕೊಳ್ಳಲಾಗಿದ್ದ 21ನೇ ಚಿತ್ರಸಂತೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಚಿತ್ರಕಲಾ ಪರಿಷತ್‌ವತಿಯಿಂದ 2003 ರಿಂದ ಈ ಚಿತ್ರಸಂತೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಪ್ರತಿವರ್ಷ ಸಹ ಚಿತ್ರಸಂತೆಯನ್ನು ಉದ್ಘಾಟಿಸಿದ್ದೇನೆ ಎಂದು ಸ್ಮರಿಸಿದರು.

ಅತ್ಯಂತ ಸಂತೋಷದಿಂದ ಈ ಚಿತ್ರಸಂತೆಯನ್ನು ಉದ್ಘಾಟನೆ ಮಾಡಿದ್ದೇನೆ. ಇವತ್ತು ಬೆಳಿಗ್ಗೆಯಿಂದ ಸಂಜೆವರೆಗೆ ಈ ಚಿತ್ರಸಂತೆ ನಡೆಯಲಿದ್ದು, ಸುಮಾರು 22 ರಾಜ್ಯಗಳಿಂದ 1600ಕ್ಕೂ ಹೆಚ್ಚಿನ ಚಿತ್ರಕಲಾವಿದರು ಹಾಗೂ ಮೂರರಿಂದ ನಾಲ್ಕು ಲಕ್ಷ ಜನರು ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಅವರೆಲ್ಲರಿಗೂ ರಾಜ್ಯದ ವತಿಯಿಂದ ಸ್ವಾಗತ ಬಯಸುತ್ತೇನೆ.

ಈ ಬಾರಿಯ ಚಿತ್ರಸಂತೆಯನ್ನು ಬಾಹ್ಯಾಕಾಶ ವಿಜ್ಞಾನಿಗಳಿಗೆ ಸಮರ್ಪಿಸಿರುವುದು ನಮ್ಮ ವಿಜ್ಞಾನಿಗಳಿಗೆ ವಂದನೆಗಳನ್ನು ಮತ್ತು ಗೌರವವನ್ನು ಈ ಮೂಲಕ ಸಲ್ಲಿಸಿದಂತ್ತಾಗಿದೆ. ಸರ್ಕಾರವು ತೆರೆದ ಮನಸಿನಿಂದ ಲಲಿತಕಲೆಗಳಿಗೆ ಸದಾ ಪ್ರೋತ್ಸಾಹ ನೀಡಲಿದೆ ಎಂದರು.

ಈ ಸಂದರ್ಭದಲ್ಲಿ ಸಚಿವರಾದ ಹೆಚ್. ಕೆ. ಪಾಟೀಲ್, ಸುಧಾಕರ್, ಚಿತ್ರಕಲಾ ಪರಿಷತ್ ಅಧ್ಯಕ್ಷರಾದ ಬಿ.ಎಲ್. ಶಂಕರ್, ಉಪಾಧ್ಯಕ್ಷರಾದ ಪ್ರಭಾಕರ್, ಶಾಸಕರಾದ ರಿಜ್ವಾನ್ ಅರ್ಷದ್, ಅಜಯ್ ಸಿಂಗ್, ಅವರುಗಳು ಉಪಸ್ಥಿತರಿದ್ದರು.



Downloaded From:www.kpscvaani.com




# ಗಣಿನಾಡಲ್ಲಿ ಯುವಜನೋತ್ಸವ
# ಸಾಂಸ್ಕೃತಿಕ ಲೋಕದ ಅನಾವರಣ

**ಬಳ್ಳಾರಿಯಲ್ಲಿ ಜರುಗಿದ ರಾಜ್ಯಮಟ್ಟದ ಯುವಜನೋತ್ಸವದಲ್ಲಿ ವಿವಿಧ ಜಿಲ್ಲೆಗಳ ೩೦ಕ್ಕೂ ಹೆಚ್ಚು ಕಲಾತಂಡಗಳು ಭಾಗಿಯಾಗಿದ್ದವು.**

ಹನುಮೇಶ.ಹೆಚ್

ಬಳ್ಳಾರಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಜನವರಿ 6 ಮತ್ತು 7 ರಂದು ನಡೆದ ರಾಜ್ಯಮಟ್ಟದ ಯುವಜನೋತ್ಸವದಲ್ಲಿ ಸಾಂಸ್ಕೃತಿಕ ಲೋಕವೇ ಅನಾವರಣಗೊಂಡಿತ್ತು.

ವಿವಿಧ ಜಿಲ್ಲೆಗಳಿಂದ ಬಂದಿದ್ದ ಯುವ ಕಲಾವಿದರು ತಮ್ಮ ಜಿಲ್ಲೆಯ ಸಾಂಸ್ಕೃತಿಕ ಸೊಗಡನ್ನು ಕಲಾಸಕ್ತರ ಮುಂದೆ ಪ್ರದರ್ಶಿಸಿದರು. ಜಾನಪದ ವಾದ್ಯಗಳ ಬಡಿತ, ಜಾನಪದ ನೃತ್ಯ ಸೇರಿದಂತೆ ರಾಜ್ಯದ 30ಕ್ಕೂ ಹೆಚ್ಚು ಕಲಾತಂಡಗಳು ಎರಡು ದಿನಗಳ ಉತ್ಸವದಲ್ಲಿ ಪಾಲ್ಗೊಂಡಿದ್ದವು.

ಕರಗ ಕುಣಿತ, ಗೊರವರ ಕುಣಿತ, ವೀರಗಾಸೆ, ಜಾಂಜ್ ಮೇಳ, ವಾದ್ಯ, ಕಂಸಾಳೆ ಕುಣಿತ, ಡೊಳ್ಳು ಕುಣಿತ ಜೊತೆಗೆ ಲಲನೆಯರ ನವಿಲು ನರ್ತನ ಮುಂತಾದ ಜಾನಪದ ಕಲಾ ಪ್ರಪಂಚವನ್ನು ಬಳ್ಳಾರಿ ನಗರದ ಜನತೆಗೆ ಪರಿಚಯಿಸಿತು.

ಜಾನಪದ ಕಲಾ ಪ್ರಕಾರಗಳಿಗೆ ಮನಸೋತ ಕಲಾಸಕ್ತರು ಶಿಳ್ಳೆ, ಕೇಕೆ, ಚಪ್ಪಾಳೆ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಿದರು. ರಾಮನಗರ ಜಿಲ್ಲೆಯ ಪೂಜಾ ಕುಣಿತವನ್ನು ಕಂಡು ಪ್ರೇಕ್ಷಕರು ಬೆರಗಾದರು. ಗಿರಿಜನರ ನೃತ್ಯ, ವೇಷ ಭೂಷಣ, ಕುಣಿತ, ವಾದ್ಯಕ್ಕೆ ತಕ್ಕ ಹೆಜ್ಜೆ ಪ್ರಮುಖ ಆಕರ್ಷಣೆಯಾಗಿತ್ತು.

ಚಾಮರಾಜನಗರ ಜಿಲ್ಲೆಯ ಡೊಳ್ಳು ಕುಣಿತ, ಹಾವೇರಿ ಜಿಲ್ಲೆಯ ಗೊರವರ ಕುಣಿತ, ಮಂಡ್ಯದ ಜಾತ್ರೆ ಉತ್ಸವದ ನೃತ್ಯ, ನವಿಲು ಕುಣಿತ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡೊಳ್ಳು ಕುಣಿತ, ಮೈಸೂರು ಜಿಲ್ಲೆಯ ಕಂಸಾಳೆ ನೃತ್ಯ, ರಾಮನಗರದ ಕರಗ, ದೇವಿ ಡೊಳ್ಳು ಕುಣಿತ, ಸೋಮನ ಕುಣಿತ, ಉಡುಪಿ ಜಿಲ್ಲೆಯ ತಂಡದ ಕಂಗಿಲು ಕುಣಿತ ಮನಸೂರೆಗೊಳಿಸಿದವು.


Downloaded From:www.kpscvaani.com




**ತುಳುನಾಡಿನ ಕಂಗಿಲು ಪ್ರದರ್ಶನ:**

ತುಳುನಾಡಿನಲ್ಲಿ ಕಂಡು ಬರುವ ಪ್ರದರ್ಶನ ಕಲೆಗಳಲ್ಲಿ ಕಂಗಿಲು ಕೂಡ ಒಂದು. ಕಂಗಿಲು ಕುಣಿತ ಮಾರಿ ಓಡಿಸುವ ಆಶಯವನ್ನು ಹೊಂದಿರುವ ಒಂದು ಜಾನಪದ ನೃತ್ಯ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ಗೊಡ್ಡ ಹಾಗೂ ಮುಂಡಾಲ ಜನಾಂಗದವರು ತಮ್ಮ ಮಾತೃ ಭಾಷೆಯಾದ ತುಳುವನ್ನು ಬಳಸಿಕೊಂಡು ಪ್ರಕಾರದ ಆಚರಣೆ ಮಾಡುತ್ತಾರೆ. ಕಂಗಿಲು ಕುಣಿತ ಯುವಜನೋತ್ಸವದಲ್ಲಿ ಗಮನ ಸೆಳೆಯಿತು.

**ಎಂಟು ವಿಭಾಗದಲ್ಲಿ ಸ್ಪರ್ಧೆ:**

ರಾಜ್ಯಮಟ್ಟದ ಯುವಜನೋತ್ಸವದಲ್ಲಿ ಎಂಟು ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಶ್ರೀ ವಾಲ್ಮೀಕಿ ಭವನದಲ್ಲಿ ಜನಪದ ನೃತ್ಯ ಗುಂಪು ಸ್ಪರ್ಧೆ, ಎಂ.ಆರ್.ಕೆ ಫಂಕ್ಷನ್ ಹಾಲ್‌ನಲ್ಲಿ ವೈಯಕ್ತಿಕ ಜಾನಪದ ನೃತ್ಯ ಸ್ಪರ್ಧೆ, ಜನಪದ ಗೀತೆ ಗುಂಪು



ಸ್ಪರ್ಧೆ, ವೈಯಕ್ತಿಕ ಜನಪದ ಗೀತೆ ಸ್ಪರ್ಧೆ, ಕರ್ನಾಟಕ ಫಂಕ್ಷನ್ ಹಾಲ್‌ನಲ್ಲಿ ಭಿತ್ತಿ ಪತ್ರ ರಚನೆ (ಪೋಸ್ಟರ್ ಮೇಕಿಂಗ್), ಬಿಡಿಎಎ ಫುಟ್‌ಬಾಲ್ ಮೈದಾನದ ಸಭಾಭವನದಲ್ಲಿ ಘೋಷಣೆ (ವೈಯಕ್ತಿಕ) ಮತ್ತು ಕಥೆ ಬರೆಯುವುದು (ವೈಯಕ್ತಿಕ), ಜಿಲ್ಲಾ ಕ್ರೀಡಾಂಗಣದಲ್ಲಿ ಫೋಟೋಗ್ರಫಿ (ವೈಯಕ್ತಿಕ) ಸ್ಪರ್ಧೆಗಳು ನಡೆದವು.

ಕರ್ನಾಟಕ ರಾಜ್ಯದ ವೈವಿಧ್ಯಮಯ ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಭಾಷೆಗಳಲ್ಲಿನ ಶ್ರೀಮಂತಿಕೆಯನ್ನು ಯುವಜನರಿಗೆ ಪರಿಚಯಿಸಲು ಮತ್ತು ಮೆಲುಕು ಹಾಕಲು ಬಳ್ಳಾರಿ ನಗರದಲ್ಲಿ ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆದ ರಾಜ್ಯ ಮಟ್ಟದ ಯುವಜನೋತ್ಸವವು ಸಾಕ್ಷಿಯಾಯಿತು.

ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಕಲಾತಂಡಗಳು, ಸ್ಪರ್ಧಾಳುಗಳು ಉತ್ಸಾಹ ಮತ್ತು ಕ್ರಿಯಾಶೀಲತೆಯಿಂದ ಪ್ರದರ್ಶಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳ ವೈಭವದ ಮೆರುಗು, ಹೊರಜಿಲ್ಲೆಗಳ ಕಲಾಪ್ರದರ್ಶನ ಸೇರಿದಂತೆ ಭರಪೂರ ಮನರಂಜನೆಯೊಂದಿಗೆ ತೆರೆಗೊಂಡಿತು.

ವಿವಿಧ ವೇದಿಕೆಗಳಲ್ಲಿ ವಿವಿಧ ಜಿಲ್ಲೆಗಳ ಜಾನಪದ ನೃತ್ಯಗಳು ಗಮನ ಸೆಳೆದವು. ಸಾಂಸ್ಕೃತಿಕ ಸಂಗೀತ, ಜಾನಪದ ಗೀತೆಗಳ ಸೊಗಡು ಯುವಜನೋತ್ಸವಕ್ಕೆ ಮೆರುಗು ತಂದಿತು. ಅಂತರ್ ಜಿಲ್ಲೆಯ ಕಲಾವಿದರು ಪೈಪೋಟಿಗೆ ಬಿದ್ದವರಂತೆ ತಮ್ಮ ಪ್ರಾಂತ್ಯದ ಕಲೆ, ಸಂಸ್ಕೃತಿಯ ಸೊಗಡಿನ ಸಿಹಿ ಉಣಬಡಿಸಿದರು.

ಬಳ್ಳಾರಿ ನಗರದ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ಶನಿವಾರದಂದು ಯುವ ಸಬಲೀಕರಣ, ಕ್ರೀಡೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರಿಂದ ಉದ್ಘಾಟನೆಗೊಂಡ ರಾಜ್ಯ ಮಟ್ಟದ ಯುವಜನೋತ್ಸವವು ವಿವಿಧ ಕಲಾ ವೈಭೋಗದ


Downloaded From:www.kpscvaani.com

**ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರು:**

**ಜನಪದ ನೃತ್ಯ (ಗುಂಪು) :** ಪ್ರಥಮ–ಮನೋಜ್ ಮತ್ತು ತಂಡ (ಹಾಸನ).

**ಜನಪದ ಗೀತೆ (ಗುಂಪು) :** ಪ್ರಥಮ–ನಿಸರ್ಗ ಮತ್ತು ತಂಡ (ಬೆಂಗಳೂರು ನಗರ ಜಿಲ್ಲೆ), ದ್ವಿತೀಯ–ಚೈತ್ರ ಮತ್ತು ತಂಡ (ಮಂಡ್ಯ ಜಿಲ್ಲೆ), ತೃತೀಯ–ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಜನಪದ ಕಲಾ ತಂಡ ಮೂಡಿಗೆರೆ ತಾ (ಚಿಕ್ಕಮಗಳೂರು ಜಿಲ್ಲೆ).

**ಜನಪದ ನೃತ್ಯ (ವೈಯಕ್ತಿಕ):** ಪ್ರಥಮ–ಮಹೇಂದ್ರ ತಂಡ (ಶಿವಮೊಗ್ಗ), ದ್ವಿತೀಯ–ರಾಧಿಕಾ ಪತ್ತಾರ (ಬೆಳಗಾವಿ), ತೃತೀಯ–ರಂಜಿತ್ (ದಕ್ಷಿಣ ಕನ್ನಡ).

**ಜನಪದ ಗೀತೆ (ವೈಯಕ್ತಿಕ):** ಪ್ರಥಮ–ಚೈತ್ರ.ಎಸ್ (ಮಂಡ್ಯ), ದ್ವಿತೀಯ–ಸಂಜಯ್.ಆರ್ (ಚಿಕ್ಕಮಗಳೂರು), ತೃತೀಯ–ಪ್ರಣತಿ (ಶಿವಮೊಗ್ಗ).

**ಕಥೆ ಬರೆಯುವುದು :** ಪ್ರಥಮ–ಮಹ್ಮದ್ ಆಸೀಫ್ (ಬಳ್ಳಾರಿ), ದ್ವಿತೀಯ–ಗಗನ್.ಎಸ್ (ಚಿಕ್ಕಮಗಳೂರು), ತೃತೀಯ–ಎನ್.ಗಂಗಾಭಾಗಿರಥ (ಬೆಂಗಳೂರು ಗ್ರಾಮಾಂತರ).

**ಘೋಷಣೆ ಬರೆಯುವುದು:** ಪ್ರಥಮ–ಚಂದನ್.ಎಂ.ನಾಯ್ಕ (ಬೆಂಗಳೂರು ನಗರ), ದ್ವಿತೀಯ–ವರುಣ್.ಡಿ.ಆರ್ (ಚಿಕ್ಕಮಗಳೂರು), ತೃತೀಯ – ಸಾಗರ್.ಎಸ್ (ಹಾಸನ).

**ಛಾಯಾಚಿತ್ರಣ :** ಪ್ರಥಮ–ಲಕ್ಷಿತಾ (ಬೆಂಗಳೂರು ನಗರ), ದ್ವಿತೀಯ–ಬಾಲಾಜಿ.ಕೆ.ಎನ್ (ತುಮಕೂರು), ತೃತೀಯ–ಹರ್ಷಿತ ಟಿ.ಬಿ (ಮಂಡ್ಯ).

ಸಾಕ್ಷಿಯಾಗಿ ವೈವಿಧ್ಯತೆಯನ್ನು ಸಾರಿತು.

ಯುವಜನೋತ್ಸವದ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಾತಂಡಗಳು ನೃತ್ಯಕ್ಕೆ ಪೂರಕವಾದ ಪರಿಕರಗಳನ್ನು ಬಳಸಿ, ನುಡಿಸಿ ಗಮನ ಸೆಳೆದರು. ಕೊಳಲು, ತಬಲಾ, ತಮಟೆ, ಡೋಲು, ಮದ್ದಳೆ, ಢಮರು, ಮೃದಂಗ, ಹಾರ್ಮೋನಿಯಂ ಹೀಗೆ ಪ್ರತಿಯೊಂದು ವಾದ್ಯಗಳನ್ನು ಬಳಸಿದ್ದು ವಿಶೇಷವಾಗಿತ್ತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯ ಮಟ್ಟದ ಯುವಜನೋತ್ಸವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿತು.

ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಯುವಜನರ ಮತ್ತು ಕ್ರೀಡಾಪಟುಗಳ ಬೆಳವಣಿಗೆಗೆ ಎಲ್ಲಾ ರೀತಿಯ ಬೆಂಬಲ ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ರಾಜ್ಯದ ಕ್ರೀಡಾಪಟುಗಳಿಗೆ ಎಲ್ಲ ಇಲಾಖೆಗಳಲ್ಲಿಯೂ ಶೇ.2ರಷ್ಟು ಮೀಸಲಾತಿ ಕಲ್ಪಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರವು, ಯುವಜನರ ಮತ್ತು ಕ್ರೀಡಾಪಟುಗಳ ಪ್ರತಿಭೆಯನ್ನು ಗುರುತಿಸುವ ಕೆಲಸ ಮಾಡುತ್ತಿದೆ. ಹಾಗೆಯೇ ಜಿಲ್ಲೆಯ ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಕ್ರೀಡಾ ಹಾಸ್ಟೆಲ್, ಸುಸಜ್ಜಿತ ಜಿಮ್ ನಿರ್ಮಾಣ ಮಾಡಲಾಗುವುದು ಎಂದರು. ಯುವಕರು ತಮ್ಮ ಜೀವನದಲ್ಲಿ ಸಂಕಲ್ಪ ಇಟ್ಟುಕೊಳ್ಳಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು.

ಯುವಜನೋತ್ಸವ ಕಾರ್ಯಕ್ರಮ ರಾಜ್ಯದ ಕಲೆ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ರಾಷ್ಟ್ರ ಮಟ್ಟದಲ್ಲಿ ಪಸರಿಸಲು ಯುವಜನರಿಗೆ ಉತ್ತಮ ವೇದಿಕೆಯಾಗಿದೆ. ಇದನ್ನು ಯುವಜನತೆ ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ರಾಜ್ಯದ ಮತ್ತು ಕನ್ನಡ ಭಾಷೆಯ ಕಂಪನ್ನು ರಾಷ್ಟ್ರಮಟ್ಟದಲ್ಲಿ ಎತ್ತಿಹಿಡಿಯಲಿ ಎಂದು ಆಶಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಎನ್. ಶಶಿಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಯುವ ಜನೋತ್ಸವ ಕಾರ್ಯಕ್ರಮವು ರಾಷ್ಟ್ರದ ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವಂತಹದ್ದಾಗಿದೆ. ವೈವಿಧ್ಯಮಯ ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಭಾಷೆಗಳಲ್ಲಿನ ಶ್ರೀಮಂತಿಕೆಯನ್ನು ಯುವಜನರಿಗೆ ಪರಿಚಯಿಸಲು ಒಂದು ಉತ್ತಮ ಅವಕಾಶವಾಗಿದೆ ಎಂದರು.

**ಸಿನಿಮಾ ಹಾಡು ಹಾಡಿ ರಂಜಿಸಿದ ಆಯುಕ್ತರು:**

ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ನಟನೆಯ 'ಟಗರು' ಚಲನಚಿತ್ರದ ಹಾಡು ಹಾಡುವ ಮೂಲಕ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರಾದ ಎನ್. ಶಶಿಕುಮಾರ್ ಎಲ್ಲರನ್ನು ರಂಜಿಸಿದರು. ಈ ವೇಳೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯುವಕರು ಹರ್ಷದಿಂದ ಕುಣಿದು ಸಂಭ್ರಮಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಈ ವರ್ಷದ ರಾಜ್ಯ ಮಟ್ಟದ ಯುವಜನೋತ್ಸವ ನಮ್ಮ ಜಿಲ್ಲೆಯಲ್ಲಿ ಆಯೋಜಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದರಲ್ಲದೆ, ಇದೇ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಿಗೆ ಅಭಿನಂದನೆ ಸಲ್ಲಿಸಿದರು.

ಬಳ್ಳಾರಿ ನಗರ ಶಾಸಕರಾದ ನಾರಾ ಭರತ್ ರೆಡ್ಡಿ, ಮಹಾನಗರ ಪಾಲಿಕೆಯ ಉಪಮಹಾಪೌರರಾದ ಬಿ. ಜಾನಕಿ, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ರಂಜಿತ್ ಕುಮಾರ್ ಬಂಡಾರು, ಸಹಾಯಕ ಆಯುಕ್ತರಾದ ಹೇಮಂತ್.ಎನ್, ಅಪರ ಜಿಲ್ಲಾಧಿಕಾರಿಗಳಾದ ಮಹಮ್ಮದ್ ಝುಬೇರ್.ಎನ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉತ್ಸವದಲ್ಲಿ ಉಪಸ್ಥಿತರಿದ್ದರು. ■


Downloaded From:www.kpscvaani.com



ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಸ್ವಚ್ಛ ಹಾಗೂ ಸುರಕ್ಷಿತ ಋತುಚಕ್ರ ನಿರ್ವಹಣೆಗಾಗಿ 'ಮೈತ್ರಿ' ಮುಟ್ಟಿನ ಕಪ್ ಯೋಜನೆ.

ಶೇಷಾದ್ರಿ ಡಿ.ಎನ್

## ಮಹಿಳೆಯರ ಸ್ವಾಸ್ಥ್ಯಕ್ಕಾಗಿ
# ಮುಟ್ಟಿನ ಕಪ್ ಯೋಜನೆ

ಮೈತ್ರಿಯೆಂದರೆ ಯಾವುದೋ ಎರಡು ಗುಂಪುಗಳು, ದೇಶಗಳ ನಡುವೆ ಒಡಂಬಡಿಕೆ ಮಾತುಕತೆ ಅಲ್ಲ. ಮಹಿಳೆಯರ ಸ್ವಾಸ್ಥ್ಯ ಹಾಗೂ ಆರ್ಥಿಕ ಸಬಲೀಕರಣದ ಆಲೋಚನೆ ಮಾಡಬೇಕಾದ ವಿಚಾರ.

ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದಂತ ಕಾರ್ಯಕ್ರಮ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಅಂತಹ ಮಹತ್ತರವಾದ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ. "ಮೈತ್ರಿ"ಮುಟ್ಟಿನಕಪ್ಪು ಎಂದು ಕರೆಯಲ್ಪಡುವ ಈ ಮುಟ್ಟಿನ ಕಪ್ ಅನ್ನು 1937ರಲ್ಲಿಯೇ ಆವಿಷ್ಕಾರ ಮಾಡಲ್ಪಟ್ಟಿತ್ತಾದರೂ ಬಳಕೆಯಲ್ಲಿ ರೂಢಿಸಿಕೊಂಡಿರಲಿಲ್ಲ. 21ನೇ ಶತಮಾನದಲ್ಲೂ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಹಲವಾರು ಸಮುದಾಯಗಳಲ್ಲಿ ಮೂಢನಂಬಿಕೆಗಳಿಂದಾಗಿ, ಮುಟ್ಟಿನ ಕುರಿತು ಕೌಟುಂಬಿಕ ವಾತಾವರಣದಲ್ಲಿ ಮಾತನಾಡಿಕೊಳ್ಳಲು ಅವಕಾಶಗಳು ಇರುವುದಿಲ್ಲ. ಮುಟ್ಟಿನ ವಿಚಾರ ಗುಟ್ಟಾಗಿಡುವುದು, ಗುಟ್ಟಿನಿಂದ ಹೊರಬಂದು ಮಾನಸಿಕ, ದೈಹಿಕ ತೊಳಲಿಕೆಯ ಮಾಹಿತಿಯನ್ನು ಕೌಟುಂಬಿಕ ವಾತಾವರಣದಲ್ಲಿ, ವೈಚಾರಿಕ ಪ್ರಬುದ್ಧರೊಂದಿಗೆ ಹಂಚಿಕೊಳ್ಳದೇ ಇರುವುದನ್ನು ನೋಡಿದರೆ ನಾವುಗಳು ಯಾವ ಕಾಲಘಟ್ಟದಲ್ಲಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಹಿಂದೂ ಮಹಾಕಾವ್ಯ ರಾಮಾಯಣ ಸಂಸ್ಕೃತ ಶ್ಲೋಕದ ಪ್ರಕಾರ "ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸೀ" ಅಂದರೇ ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು. ಸೃಷ್ಠಿಯ ಆಧಾರ ಸ್ತಂಭಗಳು. ಜನನಿ (ಮಹಿಳೆಯರ) ಜನನಾಂಗ ಮತ್ತು ಗರ್ಭಾಶಯ ಅಂಗಾಂಗಗಳು ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹಾಗಾಗಿ ಅವುಗಳ ಸ್ವಾಸ್ಥ್ಯವು ಅಷ್ಟೇ ಮುಖ್ಯವಾಗಿರುತ್ತದೆ. ಪ್ರಾಕೃತಿಕವಾಗಿ ಪ್ರತಿ ಹೆಣ್ಣು ಮಗುವು ಹದಿಹರೆಯದ ವಯಸ್ಸಿಗೆ ಬಂದಾಗ ಋತುಮತಿಯಾಗುವುದು ಸಹಜವಾದ ಕ್ರಿಯೆ. ತದನಂತರ ಪ್ರತಿ ತಿಂಗಳು ಮುಟ್ಟಾಗುವ ಸಮಯದಲ್ಲಿ ಬಹುಶಃ ನಾಲ್ಕರಿಂದ ಆರು ದಿನಗಳವರೆಗೆ ರಕ್ತಸ್ರಾವ ಇರುತ್ತದೆ.

ಪ್ರಾಚೀನ ಕಾಲದಲ್ಲಿ ರಕ್ತಸ್ರಾವವನ್ನು ಹೀರಿಕೊಂಡು ಸ್ವಚ್ಛತೆ, ಸಂತಾನೋತ್ಪತ್ತಿಯ ಅಂಗಾಂಗಗಳಿಗೆ ಅನಾರೋಗ್ಯ ಉಂಟಾಗುವುದನ್ನು ತಪ್ಪಿಸಲು, ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಹತ್ತಿ ಬಟ್ಟೆಯನ್ನು ಪ್ಯಾಡ್‌ಗಳಂತೆ ಮಾಡಿಕೊಂಡು ಉಪಯೋಗಿಸುತ್ತಿದ್ದರು. ಪ್ರತಿ ತಿಂಗಳು ಹೊಸ ಹತ್ತಿಪ್ಯಾಡ್‌ಗಳನ್ನು ಸಿದ್ಧಪಡಿಸಿಕೊಂಡು ಬಳಕೆ ಮಾಡುವುದು ಕಷ್ಟಸಾಧ್ಯವೆಂದು, ಅದೇ ಹತ್ತಿ ಬಟ್ಟೆಯನ್ನು ತೊಳೆದು ಪುನಃ ಬಳಸುತ್ತಿದ್ದಾಗ ರಕ್ತದ ಕಲೆ ಮತ್ತು ವಾಸನೆಯಿಂದ ಬ್ಯಾಕ್ಟೀರಿಯಾಗಳು ಉತ್ಪತ್ತಿಯಾಗಿ ಕೆಲವೊಂದು ಸಾರಿ ಸೋಂಕು ಉಂಟಾಗಿ ಗರ್ಭಾಶಯದ ತೊಂದರೆಗಳು ಮತ್ತು ಬಂಜೆತನಕ್ಕೂ ಕಾರಣವಾಗುತಿತ್ತು.

ಅಲ್ಲದೆ ಇನ್ನಿತರ ಸಣ್ಣಪುಟ್ಟ ಸಮಸ್ಯೆಗಳಿಂದಾಗಿ ಮಹಿಳೆಯರ ಮಾನಸಿಕ ಸ್ಥೈರ್ಯ ಕುಂಠಿತವಾಗುತಿತ್ತು. ಮಾನವನಲ್ಲಿ ನಾಗರೀಕತೆ, ಶಿಕ್ಷಣ,


Downloaded From:www.kpscvaani.com

ವೈಜ್ಞಾನಿಕತೆ ಬೆಳೆದಂತೆ, ಇನ್ನಿತರ ಕಾರಣಗಳ ಪ್ರತಿಫಲದಿಂದ ಸ್ಯಾನಿಟರಿ ಪ್ಯಾಡ್‌ಗಳನ್ನು ಆವಿಷ್ಕಾರ ಮಾಡಿಕೊಂಡು ಉಪಯೋಗಿಸಲು ಪ್ರಾರಂಭಿಸಲಾಯಿತು. ಪ್ರತಿ ತಿಂಗಳು ಒಬ್ಬ ಮಹಿಳೆಯ ಮುಟ್ಟಿನ ರಕ್ತಸ್ರಾವ ನಾಲ್ಕರಿಂದ ಆರು ದಿನಗಳು ಇದ್ದರೆ, ಕನಿಷ್ಟ 15 ರಿಂದ 18 ಸ್ಯಾನಿಟರಿ ಪ್ಯಾಡ್ ಉಪಯೋಗಿಸುವ ಅವಶ್ಯಕತೆ ಬರಬಹುದು. ಆಕೆ ಋತುಮತಿಯಾದಗಿನಿಂದ ಸಂಪೂರ್ಣ ಮುಟ್ಟು ನಿಲ್ಲುವ ತನಕ ಅಂದಾಜು ಆರು ಸಾವಿರದಿಂದ ಎಂಟು ಸಾವಿರ ಪ್ಯಾಡ್‌ಗಳನ್ನು ದುಡ್ಡಿಗೆ ಖರೀದಿಸಿ ಉಪಯೋಗಿಸುವ ಅವಶ್ಯಕತೆ ಬರುತ್ತದೆ. ಇವತ್ತಿನ ಮಾರುಕಟ್ಟೆ ಬೆಲೆಯ ಪ್ರಕಾರ ಅವುಗಳ ಒಟ್ಟು ಮೌಲ್ಯವು ಅಂದಾಜು ಐವತ್ತು ಸಾವಿರ ರೂಪಾಯಿ ಆಗಬಹುದು. ಕೆಲವರಿಗೆ ಖರೀದಿಸಲು ಆರ್ಥಿಕವಾಗಿ ಕಷ್ಟವಾಗುತ್ತದೆ.

ಹತ್ತಿಬಟ್ಟೆಯ ಪ್ಯಾಡ್‌ಗಳಿಗಿಂತ ಸ್ಯಾನಿಟರಿ ಪ್ಯಾಡ್‌ಗಳು ಹೆಚ್ಚು ಅನಾನುಕೂಲಕರವೆ. ಇವುಗಳನ್ನು ಒಂದು ಸಾರಿ ಉಪಯೋಗಿಸಿ ಬಿಸಾಕುವುದರಿಂದ ರಕ್ತಸ್ರಾವದ ವಾಸನೆಯ ಸಮಸ್ಯೆ ಇರುವುದಿಲ್ಲ. ರಾಸಾಯನಿಕಗಳನ್ನು ಉಪಯೋಗಿಸಿ ಈ ಸ್ಯಾನಿಟರಿ ಪ್ಯಾಡ್‌ಗಳನ್ನು ತಯಾರಿಸಲ್ಪಡುವುದರಿಂದ ರಕ್ತಸ್ರಾವವನ್ನು ಅವು ಬೇಗನೇ ಹೀರಿಕೊಳುತ್ತವೆ. ಹಾಗಾಗಿ ದೈನಂದಿನ ಸಾಮಾನ್ಯ ಕೆಲಸ ಕಾರ್ಯಗಳಿಗೆ ಸಮಸ್ಯೆಯಾಗುವುದಿಲ್ಲ. ಆದರೆ ಸ್ಯಾನಿಟರಿ ಪ್ಯಾಡ್‌ಗಳನ್ನು ತೊಂಬತ್ತು ಪ್ರತಿಶತ ಪ್ಲಾಸ್ಟಿಕ್ ಮತ್ತು ರಾಸಾಯನಿಕಗಳನ್ನು ಬಳಸಿ ಮಾಡಿರುವುದರಿಂದ ಅವು ಮಣ್ಣಿನಲ್ಲಿ ಕರಗದೇ ಪರಿಸರ ಮತ್ತು ಮಣ್ಣಿನ ಸ್ವಾಸ್ಥ್ಯವನ್ನು ಕಲುಷಿತಗೊಳಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಸೂಕ್ತವಲ್ಲದ ಸ್ಥಳಗಳಲ್ಲಿ ಬಿಸಾಡುವುದರಿಂದ ಸಾಮಾನ್ಯ ಕಸದಲ್ಲಿ ಬೆರೆತು ಹೋಗುವ ಪ್ಯಾಡ್‌ಗಳು ಹಸಿಕಸ, ಒಣಕಸ ಮತ್ತು ಪ್ಲಾಸ್ಟಿಕ್ ವಿಂಗಡನೆ ಮಾಡುವ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಬಾವಿಗಳು, ನೀರು ಸಂಗ್ರಹ ಕಟ್ಟೆಗಳು, ಕೆರೆಗಳು, ಸಮುದ್ರದಲ್ಲಿ ವಿಲೇವಾರಿ ಮಾಡಿದಾಗ ಜಲಮೂಲಗಳು, ಜಲಚರ ಪ್ರಾಣಿಗಳು ಅನಾರೋಗ್ಯ ಪೀಡಿತವಾಗುತ್ತವೆ. ಬೆಂಕಿಯಲ್ಲಿ ಸುಟ್ಟರೆ ವಿಷಕಾರಕ ಅನಿಲ ಉತ್ಪತ್ತಿಯಾಗಿ ಗಾಳಿಯಲ್ಲಿ ವಿಲೀನವಾಗಿ ಕೊನೆಗೆ ನಾವುಗಳೇ ಈ ಕಲುಷಿತ ಗಾಳಿಯನ್ನು ಉಸಿರಾಟ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಪ್ರಕೃತಿಯಲ್ಲಿ ಕರಗಲು ಬಿಟ್ಟರೆ (ಮಣ್ಣಿನಲ್ಲಿ ಬೆರೆತು ಮಣ್ಣಾಗಲು) 800 ವರ್ಷಗಳು ಬೇಕಾಗುತ್ತದೆ.



ಇನ್ನು ಪ್ಯಾಡ್ ಬಳಸುವ ಕೆಲವರು ದೈಹಿಕವಾಗಿ ತೊಳಲಾಟ (ಅನಾನುಕೂಲ), ಅನುಭವಿಸುತ್ತಿರುತ್ತಾರೆ. ಒಂದು ಪ್ಯಾಡ್‌ಗೆ ಆರು ಎಂ.ಎಲ್ ನಿಂದ ಎಂಟು ಎಂ.ಎಲ್ ರಕ್ತಸ್ರಾವವನ್ನು ಹೀರಿಕೊಳ್ಳುವ ಸಮರ್ಥ್ಯವಿರುತ್ತದೆ. ಇನ್ನಿತರೆ ಸಮಸ್ಯೆಗಳಾದ ಚರ್ಮದಲ್ಲಿ ತುರಿಕೆ, ಸಮಯಕ್ಕೆ ಸರಿಯಾಗಿ ಬದಲಾಯಿಸದಿದ್ದರೆ ಕೆಟ್ಟ ವಾಸನೆಯನ್ನು ಉಂಟುಮಾಡುತ್ತವೆ. ಇದರಿಂದ ಸೋಂಕು, ಬಂಜೆತನ, ಸರ್ವಿಕಲ್ ಕ್ಯಾನ್ಸರ್ ನಂತಹ ಆರೋಗ್ಯ ಸಮಸ್ಯೆಗಳು ಕೆಲವರಿಗೆ ಕಾಣಿಸಿಕೊಂಡಿರುವ ಉದಾಹರಣೆಗಳಿವೆ. ಪಂಚಾಯಿತಿಗಳು, ಶಿಕ್ಷಣ ಸಂಸ್ಥೆಗಳು ಬಹಳಷ್ಟು ಸ್ಥಳಗಳಲ್ಲಿ ಸೂಕ್ತ ವಿಲೇವಾರಿಗಾಗಿ ಇನ್ಸುಲೇಟರ್‌ಗಳನ್ನು ಅಳವಡಿಕೆ ಮಾಡಲಾಗಿದ್ದರೂ, ಅವುಗಳ ಬಳಕೆಯು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ.

ಸ್ಯಾನಿಟರಿ ಪ್ಯಾಡ್‌ಗಳಿಗೆ ಪರ್ಯಾಯವಾದ ವಸ್ತುವೆಂದರೆ ಅದುವೇ ಮುಟ್ಟಿನ ಕಪ್ಪುಗಳು. ವೈದ್ಯಕೀಯ ದರ್ಜೆಯ ಸಿಲಿಕಾನ್‌ನಿಂದ ಮಾಡಲ್ಪಟ್ಟಿದ್ದು, ತುಂಬಾ (ಸಾಫ್ಟ್) ಮೃದುವಾಗಿರುತ್ತವೆ. ಐಎಸ್‌ಒ (ISO13485) ಸಂಸ್ಥೆಯಿಂದ ಪ್ರಮಾಣೀಕೃತಗೊಂಡು, ಎಫ್‌ಡಿಎ (FDA) ಸಂಸ್ಥೆಯಿಂದ ಬಳಕೆಗೆ

**ಪರಿಸರ ಸ್ನೇಹಿಯಾಗಿರುವ ಮುಟ್ಟಿನಕಪ್ (ಮೆನ್ಸಟ್ರುಯಲ್ ಕಪ್) ಗಳನ್ನು ಅಧಿಕ ಸಮಯದವರೆಗೆ (8 ಗಂಟೆಗಳ ಅವಧಿ) ಬಳಸುವ ಜೊತೆಗೆ ಸೂಕ್ತ ನಿರ್ವಹಣೆಯೊಂದಿಗೆ ಕನಿಷ್ಟ 8 ರಿಂದ 10 ವರ್ಷಗಳವರೆಗೆ ಸಮರ್ಥನೀಯವಾಗಿ ಮರು ಬಳಕೆ ಮಾಡಬಹುದು. ಇದರಿಂದ ಪರಿಸರ ನೈರ್ಮಲ್ಯ ತಡೆಯುವ ಜೊತೆಗೆ ಹಣ ಕೂಡ ಉಳಿತಾಯವಾಗಲಿದೆ. ಈ ನಿಟ್ಟಿನಲ್ಲಿ ಮಹಿಳೆಗೆ ಮುಟ್ಟಿನಕಪ್ ಬಳಕೆಯ ಮೇಲೆ ವಿಶ್ವಾಸ ಮೂಡಿಸಲು ಆರೋಗ್ಯ ಸಚಿವರಾದ ದಿನೇಶ್ ಗುಂಡೂ ರಾವ್ ಅವರು ಆರೋಗ್ಯಾಧಿಕಾರಿಗಳೊಂದಿಗೆ ಕ್ರಮವಹಿಸುತ್ತಿದ್ದಾರೆ.**

ಉತ್ತಮವೆಂದು ಅನುಮೋದನೆ ಪಡೆದುಕೊಂಡಿವೆ. ಖರೀದಿಸಲು ಯಾರಿಗೂ ಆರ್ಥಿಕವಾಗಿ ಅನಾನುಕೂಲವಾಗುವುದಿಲ್ಲ. ಒಮ್ಮೆ ಖರೀದಿಸಿದ ಮೈತ್ರಿ ಮುಟ್ಟಿನ ಕಪ್ಪುಗಳನ್ನು ಆರು ವರ್ಷದಿಂದ ಎಂಟು ವರ್ಷಗಳವರೆಗೆ ಮರುಬಳಕೆ ಮಾಡಿಕೊಳ್ಳಬಹುದು. ಇವು ಉತ್ತಮವಾದ ಮರುಬಳಕೆಯ ಸಾಮರ್ಥ್ಯವನ್ನು ಹೊಂದಿರುತ್ತವೆ. ಅಳವಡಿಸಿಕೊಂಡಾಗ ದೈಹಿಕವಾಗಿ ಆರಾಮದಾಯಕವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ಹತ್ತು ವರ್ಷಕ್ಕೆಲ್ಲಾ ಪ್ರಾಯಕ್ಕೆ ಬಂದು ಋತುಮತಿಯಾಗುತ್ತಿರುವ ಉದಾಹರಣೆಗಳಿವೆ. ಮುಟ್ಟಿನ ಸಮಯದಲ್ಲಿ ಮಹಿಳೆಯು ಇದನ್ನು ಜನನಾಂಗದಲ್ಲಿ ಅಳವಡಿಸಿಕೊಂಡರೆ ರಕ್ತಸ್ರಾವ ಸೋರಿಕೆಯಾಗದಂತೆ ಶೇಖರಣೆ ಮಾಡುತ್ತದೆ. ಧರಿಸುವ ಬಟ್ಟೆಗಳಿಗೆ ರಕ್ತಸ್ರಾವದ ಕಲೆಗಳು ಆಗುವ ಸಾಧ್ಯತೆಗಳು ಇರುವುದಿಲ್ಲ. ಪ್ರವಾಸ, ಇನ್ನಿತರೇ ಕಾರ್ಯಗಳ ನಿಮಿತ್ತ ಪ್ರಯಾಣ ಸಮಯದಲ್ಲಿ ತೆಗೆದುಕೊಂಡು ಹೋಗಲು ಕೂಡ ಇದು ಸುಲಭವಾಗಿದೆ. ಪ್ರತಿ ತಿಂಗಳು ಮುಟ್ಟಿನ ಸಮಯದಲ್ಲಿ




Downloaded From:www.kpscvaani.com



ಬಳಸುವ ಮುಂಚೆ, ಬಳಕೆಯ ನಂತರ ಬಿಸಿನೀರಿನಿಂದ ಸ್ವಚ್ಛಗೊಳಿಸಬೇಕು. ಮಹಿಳೆಯರಲ್ಲಿನ ರಕ್ತಸ್ರಾವದ ಅನುಗುಣವಾಗಿ ಚಿಕ್ಕಗಾತ್ರ, ಮಧ್ಯಮ ಗಾತ್ರ, ದೊಡ್ಡಗಾತ್ರದ ಮೂರು ಬೇರೆ ಬೇರೆ ಗಾತ್ರದಲ್ಲಿ ಮುಟ್ಟಿನಕಪ್ಪುಗಳನ್ನು ತಯಾರಿಸಲಾಗಿದ್ದು, ಮಾರುಕಟ್ಟೆಯಲ್ಲಿ ವಿಭಿನ್ನ ಕಂಪನಿಗಳ ಹೆಸರಿನಲ್ಲಿ ದೊರೆಯುತ್ತಿವೆ.

ಇತ್ತೀಚೆಗೆ ಔಷಧಿ ಅಂಗಡಿಗಳಲ್ಲಿ, ಅಥವಾ ಅನ್‌ಲೈನ್ ಮುಖಾಂತರ ಖರೀದಿಸಬಹುದಾಗಿದೆ. ಸಣ್ಣಗಾತ್ರದ (12 ml ರಕ್ತಸ್ರಾವ ಶೇಖರಣಾ ಸಾಮರ್ಥ್ಯ) ಮುಟ್ಟಿನ ಕಪ್ಪುಗಳು ಹದಿಹರೆಯದ ಹೆಣ್ಣು ಮಕ್ಕಳಿಗಾಗಿ, ಮಧ್ಯಮ ಗಾತ್ರದ (20 ml ರಕ್ತಸ್ರಾವ ಶೇಖರಣಾ ಸಾಮರ್ಥ್ಯ) ಮುಟ್ಟಿನ ಕಪ್ಪುಗಳು ಶಸ್ತ್ರಚಿಕಿತ್ಸೆ ಮೂಲಕ ಮಕ್ಕಳಿಗೆ ಜನ್ಮ ನೀಡಿರುವ ಮಹಿಳೆಯರಿಗೆ, ದೊಡ್ಡ ಗಾತ್ರದ (26 ml ರಕ್ತಸ್ರಾವ ಶೇಖರಣಾ ಸಾಮರ್ಥ್ಯ) ಮುಟ್ಟಿನ ಕಪ್ಪುಗಳು ಸಹಜ ಹೆರಿಗೆ ಮುಖಾಂತರ ಮಕ್ಕಳಿಗೆ ಜನ್ಮ ನೀಡಿರುವ ತಾಯಂದಿರ ಬಳಕೆಗೆ ಸೂಕ್ತವಾದವುಗಳಾಗಿರುತ್ತದೆ.

**ಸ್ಯಾನಿಟರಿ ಪ್ಯಾಡ್‌ಗಳಿಗೆ ಪರ್ಯಾಯವಾದ ವಸ್ತುವೆಂದರೆ ಅದುವೇ ಮುಟ್ಟಿನ ಕಪ್ಪುಗಳು. ವೈದ್ಯಕೀಯ ದರ್ಜೆಯ ಸಿಲಿಕಾನ್‌ನಿಂದ ಮಾಡಲ್ಪಟ್ಟಿದ್ದು, ತುಂಬಾ (ಸಾಫ್ಟ್) ಮೃದುವಾಗಿರುತ್ತವೆ.**




ಈ ಮೂರು ವಿಭಿನ್ನ ಗಾತ್ರದ ಮುಟ್ಟಿನಕಪ್‌ಗಳಲ್ಲಿ ತಮಗೆ ಸರಿಹೊಂದುವುದನ್ನು ಋತುಕ್ರಮದ ಸಮಯದಲ್ಲಿ ಅಳವಡಿಸಿಕೊಳ್ಳಲು ಸಲಹೆ ನೀಡಲಾಗುತ್ತಿದೆ. ರಕ್ತಸ್ರಾವದ ಸಾಂದ್ರತೆಗೆ ಅನುಗುಣವಾಗಿ ದಿನಕ್ಕೆ ಎರಡು ಬಾರಿ ಅಥವಾ ಮೂರು ಬಾರಿ ಮುಟ್ಟಿನಕಪ್ ಅನ್ನು ಹೊರತೆಗೆದು ಶೇಖರಣೆಯಾದ ರಕ್ತವನ್ನು ಹೊರಚೆಲ್ಲಿ, ನಂತರ ನೀರಿನಲ್ಲಿ ತೊಳೆದು ಪುನಃ ಅಳವಡಿಸಿಕೊಳ್ಳಬೇಕು. ಪ್ರಾರಂಭದಲ್ಲಿ ಅಳವಡಿಸಿಕೊಳ್ಳಲು ಸಣ್ಣ ಪುಟ್ಟ ಸಮಸ್ಯೆಗಳು ಕಂಡು ಬರಬಹುದು. ಅದಕ್ಕೆ ಪರಿಹಾರವನ್ನು ತಿಳಿದು, ಅಸಹ್ಯ ಪಡದೇ, ಭಯಪಡದೇ, ಸಂಕೋಚಕ್ಕೆ ಒಳಗಾಗದೇ ಮೈತ್ರಿ ಮುಟ್ಟಿನ ಕಪ್ಪುಗಳನ್ನು ಉಪಯೋಗಿಸಬೇಕು.

ಒಂದು ಮೈತ್ರಿ ಮುಟ್ಟಿನ ಕಪ್ಪು ಖರೀದಿಸಿ ಬಳಸುವುದರಿಂದ ಒಂದು ವರ್ಷಕ್ಕೆ ಸುಮಾರು 1500 ಸ್ಯಾನಿಟರಿ ಪ್ಯಾಡ್ ಉಪಯೋಗಿಸುವುದನ್ನು ತಪ್ಪಿಸುತ್ತದೆ ಎಂದು ಅಂದಾಜಿಸಲಾಗಿದೆ. ಇದರಿಂದ ಪ್ರತಿ ಮಹಿಳೆಯು ಸ್ವಲ್ಪ ಮಟ್ಟಿಗೆ ಹಣವನ್ನು ಉಳಿತಾಯ ಮಾಡಿದಂತೆ ಆಗುತ್ತದೆ. ಹಾಗೆಯೇ ಪ್ಯಾಡ್‌ಗಳಿಂದ ಪ್ರಕೃತಿಯಲ್ಲಿ ಉಂಟಾಗುತ್ತಿದ್ದ ಮಲಿನವನ್ನು ತಡೆಗಟ್ಟಿ, ಪ್ರಕೃತಿಯ ಸ್ವಾಸ್ಥ್ಯವು ಪುನಃ ಮರುಕಳಿಸುತ್ತದೆ. ಆದುದರಿಂದ ಮುಂದಿನ ದಿನಗಳಲ್ಲಿ ಸಮಾಜದ ಮಹಿಳೆಯರ ಸ್ವಾಸ್ಥ್ಯವು ಉತ್ತಮವಾಗಲಿ ಎಂದು ಸ್ತ್ರೀರೋಗ ತಜ್ಞರು, ಮಹಿಳಾ ಆರೋಗ್ಯ ಸಲಹೆಗಾರರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕರ್ನಾಟಕ ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯು ರಾಜ್ಯಾದ್ಯಂತ ಹಿರಿಯ ಪ್ರಾಥಮಿಕ ಶಾಲೆಯಿಂದ ಪದವಿಪೂರ್ವ ಶಿಕ್ಷಣವರೆಗಿನ ಅರ್ಹ ವಿದ್ಯಾರ್ಥಿನಿಯರಿಗೆ ಈ ಹಿಂದೆ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಣೆ ಮಾಡುತ್ತಿದ್ದು, ಅದಕ್ಕೆ ಪರ್ಯಾಯವಾಗಿ ಮೈತ್ರಿ ಮುಟ್ಟಿನ ಕಪ್ಪುಗಳನ್ನು ಉಚಿತವಾಗಿ ವಿತರಣೆ ಮಾಡುವ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಇಲಾಖೆಯ ಆಶಾ ಕಾರ್ಯಕರ್ತೆಯರು, ಆರೋಗ್ಯ ಸುರಕ್ಷಾತಾಧಿಕಾರಿಗಳು, ಸಮುದಾಯ ಆರೋಗ್ಯಾಧಿಕಾರಿಗಳು, ಶುಶ್ರೂಷಕರು ಮತ್ತು ವೈದ್ಯವೃಂದದವರು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿಸಲು ಉತ್ಸಾಹದಿಂದ ಹದಿಹರೆಯದ ಮಹಿಳೆಯರ ಮನವೊಲಿಸಬೇಕಾಗಿದೆ. ಪ್ರತಿಯೊಬ್ಬ ಮಹಿಳೆಯು ಪ್ಯಾಡ್ ಬಳಸುವುದನ್ನು ನಿಲ್ಲಿಸಿ, ಮುಟ್ಟಿನ ಕಪ್ಪುಗಳನ್ನು ಉಪಯೋಗಿಸಲು ಪರಿವರ್ತನೆ ಮಾಡಿಕೊಳ್ಳುವ ಮೂಲಕ ತಮ್ಮ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಪರಿಸರದ ಸ್ವಾಸ್ಥ್ಯವನ್ನು ಕಾಪಾಡಲು ದಿಟ್ಟ ಮನಸ್ಸು ಮಾಡಬೇಕಿದೆ. ■



Downloaded From:www.kpscvaani.com

# ಮಾನವ ದಿನಗಳ ಸೃಜನೆಯಲ್ಲಿ ರಾಯಚೂರು ಜಿಲ್ಲೆ ಪ್ರಥಮ ಸ್ಥಾನ



**ನರೇಗಾದಡಿ ಅತಿ ಹೆಚ್ಚು ಕೂಲಿಕಾರರಿಗೆ ಕೆಲಸ ಸೃಜಿಸುವಲ್ಲಿ ರಾಜ್ಯದಲ್ಲೇ ರಾಯಚೂರು ಜಿಲ್ಲೆ ಪ್ರಥಮ ಸ್ಥಾನ**

ಶಶಿಧರ ಅಂಗಡಿ

ಬೇಸಿಗೆ ಬಂತೆಂದರೆ, ಗ್ರಾಮೀಣ ಭಾಗದ ಜನರಿಗೆ ಬರದ ಬರೆ ಬೀಳುವುದು ಕಡ್ಡಾಯವಾಗುತ್ತದೆ. ಒಂದೆಡೆ ಕೃಷಿ ಚಟುವಟಿಕೆಗಳು ನಿಂತು ಹೋಗುವ ಭಯ. ಮತ್ತೊಂದೆಡೆ ಜೀವನವನ್ನು ನಡೆಸಲು ಕೆಲಸ ಹುಡುಕಾಡುತ್ತಾ ಪಟ್ಟಣಕ್ಕೆ ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬೇಸಿಗೆ ಅವಧಿಯಲ್ಲಿ ಗ್ರಾಮೀಣ ಪ್ರದೇಶದ ಜನರು ಗುಳೆ ಹೋಗುವುದನ್ನು ತಡೆಗಟ್ಟಲು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕೆಲಸ ನೀಡಲಾಗುತ್ತದೆ. ಆದರೆ ರಾಯಚೂರು ಜಿಲ್ಲೆಯಲ್ಲಿ ನರೇಗಾದಡಿ ಹೆಚ್ಚಿನ ಮಾನವ ದಿನಗಳನ್ನು ಸೃಜನೆ ಮಾಡುವ ಮೂಲಕ ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ.

ಈ ಯೋಜನೆಯಡಿ ರಾಯಚೂರು ಜಿಲ್ಲೆಗೆ 1 ಕೋಟಿ 10 ಲಕ್ಷ ಮಾನವ ದಿನಗಳ ಗುರಿ ನೀಡಲಾಗಿತ್ತು. 2023ರ ಏಪ್ರಿಲ್ ನಿಂದ ಜುಲೈವರೆಗೆ 1,07,63,026 ಮಾನವ ದಿನಗಳನ್ನು ಸೃಜಿಸುವ ಮೂಲಕ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇನ್ನು ಬೆಳಗಾವಿ 1,06,11,453 (ದ್ವಿತೀಯ ಸ್ಥಾನ), ಕೊಪ್ಪಳ 86,02,434 (ತೃತೀಯ ಸ್ಥಾನ), ವಿಜಯನಗರ 70,32,260 (ನಾಲ್ಕನೇ ಸ್ಥಾನ), ಬಳ್ಳಾರಿ 60,19,848 (ಐದನೇ ಸ್ಥಾನ)ದಲ್ಲಿದೆ.

ಪ್ರತಿ ವರ್ಷ ಬೇಸಿಗೆ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರು ತಮ್ಮ ಊರಲ್ಲಿ ಕೆಲಸವಿಲ್ಲದ ಕಾರಣ ಅಕ್ಕಪಕ್ಕದ ಜಿಲ್ಲೆಯ



Downloaded From:www.kpscvaani.com







ನಗರ ಪ್ರದೇಶಗಳಿಗೆ ಅಲ್ಲದೆ ರಾಜಧಾನಿ ಬೆಂಗಳೂರು ತನಕ ಗುಳೆ ಹೋಗುತಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನರೇಗಾ ಯೋಜನೆಯಡಿ ಈ ಬಾರಿ ಐಇಸಿ ಚಟುವಟಿಕೆಯಿಂದ ಪ್ರಚಾರ ನೀಡುವ ಜೊತೆಗೆ ಕೂಲಿಕಾರರಿಗೆ ನರೇಗಾದಿಂದ ಅಧಿಕ ದಿನಗಳನ್ನು ಸೃಜಿಸಿಕೊಡುವ ಮೂಲಕ ಸ್ಥಳೀಯರಿಗೆ ಉದ್ಯೋಗ ಒದಗಿಸಿಕೊಟ್ಟರು.

ಜೊತೆಗೆ 2023ರ ಏಪ್ರಿಲ್ 1 ರಿಂದ ಕೇಂದ್ರ ಸರ್ಕಾರವು ನರೇಗಾ ಕೂಲಿ ಮೊತ್ತವನ್ನು 309 ರಿಂದ 316 ರೂ.ಗೆ ಹೆಚ್ಚಳ ಮಾಡಿದೆ. ಈ ಬಗ್ಗೆ ಕೂಲಿಕಾರರಿಗೆ ಅರಿವು ಮೂಡಿಸಿ ಯೋಜನೆಯತ್ತ ಕರೆತಂದು ಎಲ್ಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲಸ ನೀಡಲಾಗುತ್ತಿದೆ. ಹಾಗೆಯೇ ಬೆಳಗಾವಿ ಹಾಗೂ ಕಲಬುರಗಿ ವಿಭಾಗ ವ್ಯಾಪ್ತಿಯ ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಳದ ಹಿನ್ನೆಲೆಯಲ್ಲಿ ನರೇಗಾ ಕೆಲಸದಲ್ಲಿ ಶೇ.30 ರಿಯಾಯಿತಿ ಸೌಲಭ್ಯವನ್ನು ರಾಜ್ಯ ಸರಕಾರ ನೀಡಿದೆ. ಈ ಬಗ್ಗೆ ರಾಯಚೂರು ಜಿಲ್ಲೆಯ ಕೂಲಿಕಾರರಿಗೆ ಹೆಚ್ಚು ಮಾಹಿತಿ ನೀಡಿದ್ದರಿಂದ ಜನ ಗುಳೆ ಹೋಗುವುದನ್ನು ಬಿಟ್ಟು ನರೇಗಾದಡಿ ತಮ್ಮ ಊರಿನಲ್ಲೇ ಕೆಲಸ ಮಾಡಿಕೊಂಡು ನೆಮ್ಮದಿಯ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.

ಸದ್ಯ ನರೇಗಾದಡಿ ರಾಯಚೂರು ಜಿಲ್ಲೆಯ 179 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೂಲಿಕಾರರು ಕೆರೆ ಅಭಿವೃದ್ಧಿ, ಕೃಷಿ ಹೊಂಡ, ಬದು ನಿರ್ಮಾಣ ಮತ್ತು ನಾಲಾ ಹೂಳೆತ್ತುವ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಶೇ.52.17. ರಾಯಚೂರು ಜಿಲ್ಲೆಯಾದ್ಯಂತ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ನರೇಗಾ ಯೋಜನೆಯಡಿ ಮಹಿಳೆಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಕೂಲಿ ಒದಗಿಸಲಾಗಿದ್ದು, 2022-23 ನೇ ಸಾಲಿನಲ್ಲಿ 51.22% ರಷ್ಟು ಮಹಿಳಾ ಕೂಲಿಕಾರರ ಭಾಗವಹಿಸುವಿಕೆ ಪ್ರಮಾಣ ಇದ್ದು, ಪ್ರಸಕ್ತ ಸಾಲಿನಲ್ಲಿ ಶೇ.52.81 ರಷ್ಟು ಮಹಿಳೆಯರು ನರೇಗಾದಡಿ ಉದ್ಯೋಗ ಪಡೆದುಕೊಂಡಿದ್ದಾರೆ. ಇದು ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದಾಗ ಕೇವಲ 3 ತಿಂಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣದಲ್ಲಿ ಏರಿಕೆ ಕಂಡಿದೆ.

ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರು ಬೇಸಿಗೆ ಕಾಲದಲ್ಲಿ ಕೆಲಸ ಅರಸಿ ಗುಳೆ ಹೋಗುತ್ತಿದ್ದರು. ಹೀಗಾಗಿ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ ಹೆಚ್ಚು ಮಾನವ ದಿನಗಳ ಸೃಜನೆ ಮಾಡುವ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗಿದೆ. ಹಾಗಾಗಿ ಜನರು ಗುಳೆ ಹೋಗುವುದು ತಪ್ಪಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಮ ಪಾಂಡ್ವೆ ಅವರು ಪ್ರತಿಕ್ರಿಯಿಸಿದ್ದಾರೆ.

ಗ್ರಾಮೀಣ ಪ್ರದೇಶದ ಜನರಿಗೆ ನರೇಗಾ ಯೋಜನೆಯು ವರದಾನವಾಗಿದೆ. ರಾಯಚೂರು ಜಿಲ್ಲೆಯ ಜನರು ಕೆಲಸ ಅರಿಸಿ ಬೇರೆ ರಾಜ್ಯಗಳಿಗೆ ಗುಳೆ ಹೋಗುವುದನ್ನು ತಡೆಯುವ ನಿಟ್ಟಿನಲ್ಲಿ ಮತ್ತು ಅತೀ ಹೆಚ್ಚು ಕೂಲಿಕಾರರಿಗೆ ಕೆಲಸ ನೀಡುವಲ್ಲಿ ರಾಯಚೂರು ಜಿಲ್ಲೆಯು ರಾಜ್ಯದಲ್ಲಿಯೇ ಪ್ರಥಮ ಸ್ಥಾನ ಲಭಿಸಿದೆ ಎಂದು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಪ್ರಕಾಶ್. ವಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿಯನ್ನು ವೃದ್ಧಿಸಲು ಸರ್ಕಾರದಿಂದ ಹಲವು ಯೋಜನೆಗಳನ್ನು ಸರ್ಕಾರ ಅನುಷ್ಠಾನಗೊಳಿಸುತ್ತಿದ್ದು, ಸಾರ್ವಜನಿಕರು ಈ ಯೋಜನೆಗಳ ಬಗ್ಗೆ ಜಾಗೃತರಾಗಿ ಸರ್ಕಾರದ ಸೌಲಭ್ಯಗಳನ್ನು ಪಡೆಯುವತ್ತ ಮುಂದಾಗಬೇಕಿದೆ. ಒಟ್ಟಿನಲ್ಲಿ ನರೇಗಾ ಯೋಜನೆಯು ಗ್ರಾಮೀಣ ಭಾಗದ ಜನರ ಆರ್ಥಿಕ ಸ್ಥಿತಿ ಸುಧಾರಿಸಲು ಮತ್ತು ಗುಳೆ ಹೋಗುವುದನ್ನು ತಪ್ಪಿಸಲು ಸಹಕಾರಿಯಾಗಿದೆ. ■



Downloaded From:www.kpscvaani.com



# ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರದ ಯೋಜನೆಗಳು

**ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಗಾಗಿ ಒದಗಿಸಿರುವ ಸೇವಾ ಸೌಲಭ್ಯಗಳು.**

ಆರ್. ಸ್ಮಿತಾ

ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಸರ್ಕಾರವು ರೂಪಿಸಿ ಜಾರಿಗೊಳಿಸುತ್ತಿದೆ.

ಮಂಡಳಿಯಲ್ಲಿ ಇದುವರೆಗೂ 46.42 ಲಕ್ಷ ಕಾರ್ಮಿಕರು ನೋಂದಣಿ ಆಗಿರುತ್ತಾರೆ. ಅದರಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಇದುವರೆಗೂ 4.84 ಲಕ್ಷ ಕಾರ್ಮಿಕರು ನೋಂದಣಿಯಾಗಿದ್ದಾರೆ. ಈ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ 59,800 ಫಲಾನುಭವಿಗಳಿಗೆ ವಿವಿಧ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಯೋಜನೆಗಳ ರೂಪದಲ್ಲಿ ಒಟ್ಟು ರೂ.99.31 ಕೋಟಿಗಳಷ್ಟು ಸಹಾಯಧನವನ್ನು ನೀಡಲಾಗಿದೆ.

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ನಿರಂತರವಾಗಿ ಬೃಹತ್ ನಿರ್ಮಾಣ ಕಾಮಗಾರಿಗಳು ನಿರ್ಮಾಣಗೊಳ್ಳುತ್ತಿದ್ದು, ಅವುಗಳಲ್ಲಿ ಕಾರ್ಯನಿರ್ವಹಿಸಲು ನಿರ್ಮಾಣದಾರರು ವಿವಿಧ ರಾಜ್ಯಗಳಿಂದ ವಲಸೆ ಕಾರ್ಮಿಕರನ್ನು ಸ್ಥಳದಲ್ಲಿಯೇ ಮಂಡಳಿಯ ಫಲಾನುಭವಿಗಳನ್ನಾಗಿ ನೋಂದಾಯಿಸಲು ಇತ್ತೀಚೆಗೆ ವಿಶೇಷ ನೋಂದಣಿ ಅಭಿಯಾನವನ್ನು ಕಾರ್ಮಿಕ ಇಲಾಖೆವತಿಯಿಂದ ಕೈಗೊಳ್ಳಲಾಗಿತ್ತು. ಇದರಿಂದಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ಅರ್ಹ ಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳನ್ನಾಗಿ ನೋಂದಾಯಿಸಿ ಅವರಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಯಿತು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಇರುವ ಅರ್ಹತೆ ಮತ್ತು ವಿಧಾನಗಳು ಈ ಕೆಳಕಂಡಂತಿದೆ :

ಕಳೆದ 12 ತಿಂಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕನಿಷ್ಠ 90 ದಿನಗಳ ಕಾಲ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರಬೇಕು. ವಯೋಮಿತಿಯು 18



Downloaded From:www.kpscvaani.com



ರಿಂದ 60 ವರ್ಷದೊಳಗಿರಬೇಕು. ಅರ್ಜಿಯನ್ನು https://kbocwwb.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಉದ್ಯೋಗ ಪ್ರಮಾಣ ಪತ್ರ, ಸ್ವಯಂ ದೃಢೀಕರಣ ಪತ್ರ, ಆಧಾರ್ ನಂಬರ್, ಬ್ಯಾಂಕ್ ಖಾತೆ ಪಾಸ್ ಬುಕ್ ಪ್ರತಿಗಳೊಂದಿಗೆ ಸಲ್ಲಿಸಬೇಕು. ಅಥವಾ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರ ಕಛೇರಿಗಳಿಗೆ ಭೇಟಿ ನೀಡಿ ಕೂಡ ಅರ್ಜಿ ಸಲ್ಲಿಸಬಹುದು.

ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಬಿತರಿಗೆ ಸಹಾಯ ಧನ ನೀಡಲು ಪ್ರಸ್ತುತ ಈ ಕೆಳಕಂಡ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಲಾಗಿದೆ.

**ಪಿಂಚಣಿ ಮತ್ತು ಕುಟುಂಬ ಪಿಂಚಣಿ ಸೌಲಭ್ಯ:**

ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3000 ಪಿಂಚಣಿಯನ್ನು ಹಾಗೂ ಫಲಾನುಭವಿ ಮೃತರಾದಲ್ಲಿ ಅವರ ಅವಲಂಬಿತರಿಗೆ (ಮೃತ ಪಿಂಚಣಿದಾರರ ಪತಿ/ಪತ್ನಿಗೆ) ಮಾಸಿಕ ರೂ. 1500 ಮಾಸಿಕ ಕುಟುಂಬ ಪಿಂಚಣಿ ಸೌಲಭ್ಯವನ್ನು ನೀಡಲಾಗುತ್ತದೆ.

**ದುರ್ಬಲತೆ ಪಿಂಚಣಿ:**

ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ ಅಥವಾ ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2000 ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ. 2,00,000 ದವರೆಗೆ ಅನುಗ್ರಹ ರಾಶಿ ಸಹಾಯಧನ ನೀಡಲಾಗುವುದು. ಅಲ್ಲದೆ, ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ, ಟ್ರೈನಿಂಗ್–ಕಮ್–ಟೂಲ್‌ಕಿಟ್ ಖರೀದಿಗಾಗಿ (ಶ್ರಮ ಸಾಮರ್ಥ್ಯ) ರೂ.30,000 ರವರೆಗೆ ನೀಡಲಾಗುವುದು.

**ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ:**

ನೋಂದಾಯಿತ ಫಲಾನುಭವಿಯ ಅವಲಂಬಿತರಿಗೆ ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯವನ್ನು ಒದಗಿಸಲಾಗುವುದು.

**ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ):**

ವಸತಿ ಸೌಲಭ್ಯ ಯೋಜನೆಯಡಿ ವಸತಿ ನಿರ್ಮಾಣಕ್ಕಾಗಿ ರೂ. 2,00,000 ದವರೆಗೆ ಮುಂಗಡ ಸೌಲಭ್ಯ ನೀಡಲಾಗುವುದು.

**ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):**

ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್) ಯೋಜನೆಯಡಿ, ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ. 50,0000 ನೀಡಲಾಗುವುದಲ್ಲದೆ ಶಿಶುಪಾಲನೆಗಾಗಿ ವಿಶೇಷ ಸೌಲಭ್ಯವನ್ನು ಒದಗಿಸಲಾಗುವುದು.

**ತಾಯಿ ಮಗು ಸಹಾಯ ಹಸ್ತ:**

ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷ ತುಂಬುವವರೆಗೆ ವಾರ್ಷಿಕ ರೂ. 6,000 ಗಳ ಸಹಾಯಧನ ನೀಡಲಾಗುವುದು.

**ಅಂತ್ಯಕ್ರಿಯೆ ವೆಚ್ಚ:**

ಫಲಾನುಭವಿಗಳು ಮೃತರಾದಲ್ಲಿ ಅಂತ್ಯಕ್ರಿಯೆಗೆ ಅನುಕೂಲವಾಗುವಂತೆ ರೂ. 4,000 ನೀಡಲಾಗುವುದು, ಹಾಗೂ ಅನುಗ್ರಹ ರಾಶಿ ಯೋಜನೆಯಡಿ ರೂ. 71,000 ಸಹಾಯಧನ ನೀಡಲಾಗುವುದು.

**ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):**

ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ) ಯೋಜನೆಯಡಿ, 1ನೇ ತರಗತಿಯಿಂದ 5ನೇ ತರಗತಿಯವರೆಗೆ ರೂ. 1,100, 6ನೇ ತರಗತಿಯಿಂದ 7ನೇ ತರಗತಿಯವರೆಗೆ ರೂ. 1,250, 8ನೇ ತರಗತಿಗೆ ರೂ. 1,350, 9ನೇ ತರಗತಿಯಿಂದ 10ನೇ ತರಗತಿಯವರೆಗೆ ರೂ. 3,000, ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ ಗೆ 4,600, ಪದವಿಗೆ 6,000, ಬಿಇ/ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್‌ಗೆ ರೂ.10,000, ಸ್ನಾತಕೋತ್ತರ ಪದವಿಗೆ ರೂ. 10,000, ಪಾಲಿಟೆಕ್ನಿಕ್/ಡಿಪ್ಲೊಮಾ/ಐಟಿಐ ಗೆ ರೂ.4,600, ಬಿಎಸ್‌ಸಿ


Downloaded From:www.kpscvaani.com

ನರ್ಸಿಂಗ್ / ಜಿಎನ್‌ಎಮ್ / ಎಎನ್‌ಎಮ್ / ಪಾರಮೆಡಿಕಲ್ ಕೋರ್ಸ್ / ಎಕ್ಸೂಲರಿ ನರ್ಸಿಂಗ್ ಅಂಡ್ ಮಿಡಿವೈಫ್ ಗೆ ರೂ.10000, ಬಿ.ಎಡ್‌ಗೆ ರೂ.6,000, ವೈದ್ಯಕೀಯ (ಎಮ್‌ಬಿಬಿಎಸ್/ ಬಿಎಎಮ್‌ಎಸ್/ಬಿಡಿಎಸ್/ಬಿಹೆಚ್‌ಎಮ್‌ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್‌ಗೆ ರೂ.11,000, ಎಲ್‌ಎಲ್‌ಬಿ / ಎಲ್‌ಎಲ್‌ಎಮ್ ರೂ. 10,000, ಎಮ್.ಟೆಕ್ / ಎಮ್‌ಇ (ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕೋತ್ತರ ಕೋರ್ಸ್) ಗೆ ರೂ.10,000, ಎಮ್‌ಡಿ ಮೆಡಿಕಲ್ ಗೆ ರೂ.12,000, ಡಿ.ಎಡ್‌ಗೆ ರೂ.4,600, ಪಿಹೆಚ್‌ಡಿ / ಎಂ.ಫಿಲ್ (ಯಾವುದೇ ವಿಷಯ) ಗೆ ರೂ.11,000, ಐಐಟಿ / ಐಐಐಟಿ / ಐಐಎಮ್ / ಎನ್‌ಐಟಿ / ಐಐಎಸ್‌ಇಆರ್ / ಎಐಐಎಮ್‌ಎಸ್ / ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳಿಗೆ ರೂ.11,000 ವರೆಗೆ ನೀಡಲಾಗುವುದು.

**ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):**

ಈ ಯೋಜನೆಯಡಿ ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಬಿತರಿಗೆ ರೂ.300 ರಿಂದ ರೂ. 20,000 ವರೆಗೆ ನೀಡಲಾಗುವುದು.

**ಅಪಘಾತ ಪರಿಹಾರ:**

ಫಲಾನುಭವಿಯು ಮರಣ ಹೊಂದಿದ್ದಲ್ಲಿ ರೂ. 5,00,000, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ2,00,000 ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/- ನೀಡಲಾಗುವುದು.

**ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):**

ಈ ಯೋಜನೆಯಡಿ ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್



ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಸನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000 ವರೆಗೆ ಸಹಾಯಧನ ನೀಡಲಾಗುವುದು.

**ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):**

ಈ ಯೋಜನೆಯಡಿ ಫಲಾನುಭವಿಯ ಮಕ್ಕಳ ಮದುವೆ ವೆಚ್ಚ ಭರಿಸುವ ಸಲುವಾಗಿ (ಇಬ್ಬರು ಮಕ್ಕಳಿಗೆ ಮಾತ್ರ) ತಲಾ ರೂ.60,000 ಸಹಾಯಧನ ನೀಡಲಾಗುವುದು.

**ಶೈಕ್ಷಣಿಕ ತರಬೇತಿ ಸೌಲಭ್ಯ :**

ಈ ಯೋಜನೆಯಡಿ ಫಲಾನುಭವಿಯ ಮಕ್ಕಳು ಯುಪಿಎಸ್‌ಸಿ, ಕೆಪಿಎಸ್‌ಸಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ಸೌಲಭ್ಯವನ್ನು ಸಹ ಒದಗಿಸಲಾಗುವುದು.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಲು ಜಾರಿಗೊಳಿಸುತ್ತಿರುವ ಯೋಜನೆಗಳು ಈ ಕೆಳಕಂಡಂತಿದೆ.

**ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:**

ನಿರಂತರ ರಸ್ತೆ ಅಪಘಾತಗಳಿಗೆ ತುತ್ತಾಗಿ ಸಂಕಷ್ಟಕ್ಕೆ ಒಳಗಾಗುವ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳ ಕುಟುಂಬದವರಿಗೆ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸಲು "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ" ಯನ್ನು ಜಾರಿಗೊಳಿಸಲಾಗುತ್ತಿದೆ.

ಈ ಯೋಜನೆಯಡಿ ಫಲಾನುಭವಿಗಳು ಅಪಘಾತಗೊಂಡಲ್ಲಿ ರೂ.5 ಲಕ್ಷಗಳವರೆಗೆ ಅಪಘಾತ ಪರಿಹಾರವನ್ನು ಒದಗಿಸಲಾಗುವುದು. ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಚಾಲನಾ ಪರವಾನಗಿಯನ್ನು ಹೊಂದಿದ ಚಾಲಕರು ಪ್ರತ್ಯೇಕವಾಗಿ ನೋಂದಣಿ ಮಾಡಿಸುವ ಅವಶ್ಯಕತೆ ಇರುವುದಿಲ್ಲ. ಆದರೆ, ನಿರ್ವಾಹಕರು ಮತ್ತು ಕ್ಲೀನರ್‌ಗಳು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸುವ ಅವಶ್ಯಕತೆ ಇರುತ್ತದೆ.

ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ. 10,000 ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

**ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:**

ಈ ಯೋಜನೆಯಡಿ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ

**ಉಚಿತ ಸಹಾಯವಾಣಿ**

ಕಾರ್ಮಿಕರು ಹೆಚ್ಚಿನ ಮಾಹಿತಿ ಮತ್ತು ಸಹಾಯಕ್ಕಾಗಿ 24 ಗಂಟೆ ಕಾರ್ಯನಿರ್ವಹಿಸುವ ಕಾರ್ಮಿಕರ ಸಹಾಯವಾಣಿ 155214ಕ್ಕೆ ಕರೆ ಮಾಡಬಹುದು. ಹಾಗೆಯೇ ಯಾವುದಾದರು ದೂರುಗಳಿದ್ದಲ್ಲಿ www.gms.eshram.gov.in ಗೆ ಭೇಟಿ ನೀಡಿ ತಮ್ಮ ದೂರನ್ನು ಸಲ್ಲಿಸಬಹುದು.


Downloaded From:www.kpscvaani.com



ಫುಡ್ ಡೆಲಿವರಿ ಮಾಡುವ ಹಾಗೂ ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಫ್‌ಕಾರ್ಟ್, ಬಿಗ್ ಬಾಸ್ಕೆಟ್, ಪೋರ್ಟರ್, ಫಾರ್ಮಸಿ, ಬ್ಲಿಂಕಿಟ್, ಜೆಪ್ಟೋ, ಡಾಮಿನೋಜ್ ನಂತಹ ಸಂಸ್ಥೆಗಳಲ್ಲಿ ಡೆಲಿವರಿ ವೃತ್ತಿಯಲ್ಲಿ ತೊಡಗಿಸಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರಿಗೆ ಅಪಘಾತ ಪರಿಹಾರವನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.

ಈ ಯೋಜನೆಯಡಿ ನೋಂದಾಯಿತ ಎಲ್ಲಾ ಅರ್ಹ ಕಾರ್ಮಿಕರು ರೂ. 2 ಲಕ್ಷಗಳ ಜೀವವಿಮೆ ಮತ್ತು ರೂ. 2 ಲಕ್ಷಗಳ ಅಪಘಾತ ವಿಮೆ ಸೇರಿದಂತೆ ಒಟ್ಟು ರೂ. 4 ಲಕ್ಷಗಳ ವಿಮಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ. ಕಾರ್ಮಿಕರು ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

**ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:**

ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 11 ಅಸಂಘಟಿತ ವಲಯಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಲಾಗುತ್ತಿದೆ.

**ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್-ಧನ್ ಯೋಜನೆ (ಪಿಎಂ-ಎಸ್‌ವೈಎಂ):**

ಕೇಂದ್ರ ಸರ್ಕಾರವು ದೇಶದ ಅಸಂಘಟಿತ ವಲಯದ ಕಾರ್ಮಿಕರಿಗೆ 60 ವರ್ಷ ಪೂರೈಸಿದ ನಂತರ ಮಾಸಿಕ ರೂ.3,000 ಗಳ ನಿಶ್ಚಿತ ಪಿಂಚಣಿ ಸೌಲಭ್ಯ ಒದಗಿಸುವ ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್-ಧನ್-ಯೋಜನೆ (ಪಿಎಂ-ಎಸ್‌ವೈಎಂ),ಯನ್ನು ಮಾರ್ಚ್ 2019ರಿಂದ ಜಾರಿಗೆ ತಂದಿರುತ್ತದೆ. ಇಎಸ್‌ಐ ಹಾಗೂ ಭವಿಷ್ಯನಿಧಿ ಸೌಲಭ್ಯಕ್ಕೆ ಅರ್ಹರಲ್ಲದ, ರೂ.15,000 ಮಾಸಿಕ ಆದಾಯಕ್ಕಿಂತ ಕಡಿಮೆ ಆದಾಯ ಹೊಂದಿರುವ 18 ರಿಂದ 40 ವಯೋಮಾನದ ಎಲ್ಲಾ ಅಸಂಘಟಿತ ಕಾರ್ಮಿಕರು ಯೋಜನೆಯಡಿ ನೋಂದಾಯಿಸಿಕೊಂಡು ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ. ಇದು ವಂತಿಕೆ ಆಧಾರಿತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ಫಲಾನುಭವಿಯ ವಯಸ್ಸಿನ ಆಧಾರದ ಮೇಲೆ ಮಾಸಿಕ ರೂ.55 ರಿಂದ 200 ರವರೆಗೆ ಸಮಾನಾಂತರ ವಂತಿಕೆಯನ್ನು ಪಾವತಿಸುತ್ತದೆ.

**ಪ್ರಧಾನಮಂತ್ರಿ ವ್ಯಾಪಾರಿ ಮಾನ್-ಧನ್ ಯೋಜನೆ:**

ಈ ಯೋಜನೆಯಡಿ ವಾರ್ಷಿಕ ರೂ.1.5 ಕೋಟಿಗಳಿಗಿಂತ ಕಡಿಮೆ ಮೊತ್ತದ ವ್ಯವಹಾರ ಹೊಂದಿರುವ ಎಲ್ಲಾ ಲಘು ವ್ಯಾಪಾರಿಗಳು, ಸ್ವಯಂ ಉದ್ಯೋಗಿಗಳು ಯೋಜನೆಯಡಿ ಫಲಾನುಭವಿಯಾಗಿ ನೋಂದಾಯಿಸಿಕೊಳ್ಳಬಹುದು. ನೋಂದಾಯಿತ ಫಲಾನುಭವಿಗಳು ಪ್ರಧಾನಮಂತ್ರಿ ಶ್ರಮ್ ಯೋಗಿ ಮಾನ್-ಧನ್ ಯೋಜನೆಯಡಿ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

**ಆಶಾದೀಪ ಯೋಜನೆ:**

ಕರ್ನಾಟಕ ರಾಜ್ಯ ಸರ್ಕಾರವು, ಖಾಸಗಿ ವಲಯದ ಉದ್ಯೋಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಮಾಲೀಕರನ್ನು ಹಾಗೂ ಉದ್ಯೋಗದಾತರನ್ನು ಉತ್ತೇಜಿಸುವ ದೃಷ್ಟಿಯಿಂದ "ಆಶಾದೀಪ" ಎಂಬ ನೂತನ ಯೋಜನೆಯನ್ನು ರೂಪಿಸಿದೆ.

ಈ ಯೋಜನೆಯಡಿ, ಮಾಲೀಕರು ಪಾವತಿಸಿದ ಇ.ಎಸ್.ಐ. ಮತ್ತು ಪಿ.ಎಫ್ ವಂತಿಕೆಯ ಮೊತ್ತ, ಅಪ್ರೆಂಟಿಸ್ ಶಿಷ್ಯವೇತನ ಮತ್ತು ಅಪ್ರೆಂಟಿಸ್ ತರಬೇತಿ ಪಡೆದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಂಡಲ್ಲಿ ವೇತನವನ್ನು ಸದರಿ ಮಾಲೀಕರಿಗೆ ಮರುಪಾವತಿ ಮಾಡಲಾಗುತ್ತದೆ.

**ಇ-ಶ್ರಮ್ ನೋಂದಣಿ ಕಾರ್ಯಕ್ರಮ:**

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ ಸಂಗ್ರಹಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಈ ಪೋರ್ಟಲ್‌ನಲ್ಲಿ 16 ರಿಂದ 59 ವಯೋಮಾನದ ಇ.ಎಸ್.ಐ. ಹಾಗೂ ಇ.ಪಿ.ಎಫ್ ಸೌಲಭ್ಯವನ್ನು ಹೊಂದಿರದ ಹಾಗೂ ಆದಾಯ ತೆರಿಗೆ ಪಾವತಿ ಮಾಡದ ಸುಮಾರು 379 ವರ್ಗಗಳ ಅಸಂಘಟಿತ ಕಾರ್ಮಿಕರ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಅಸಂಘಟಿತ ಕಾರ್ಮಿಕರು ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಅಥವಾ ಸ್ವಯಂ ಆಗಿ ಇ-ಶ್ರಮ್ ಪೋರ್ಟಲ್ www.eshram.gov.in ಮೂಲಕ ಉಚಿತವಾಗಿ ನೋಂದಾಯಿಸಿಕೊಂಡು ಸ್ಥಳದಲ್ಲಿಯೇ ಗುರುತಿನ ಚೀಟಿ ಪಡೆಯಬಹುದಾಗಿದೆ.



Downloaded From:www.kpscvaani.com




## ಕೀಟಗಳ ಸಂರಕ್ಷಣೆಗಾಗಿ

# “ಕೀಟ ಕೆಫೆ”

**ಸೈಬರ್ ಕೆಫೆ, ಕಾಫಿ ಕೆಫೆ ನಮಗೆಲ್ಲಾ ಗೊತ್ತಿರುವುದೇ. ಆದರೆ ಲಾಲ್‌ಬಾಗ್ ಉದ್ಯಾನವನದಲ್ಲಿ ಇರುವ ‘ಕೀಟ ಕೆಫೆ’ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಿರಲು ಸಾಧ್ಯವಿಲ್ಲ**

ಮುನಿರಾಜ.ಎಂ

ರಾಜ್ಯ ರಾಜಧಾನಿ ಬೆಂಗಳೂರು ನಗರೀಕರಣದ ಹಿಂದೆ ಮಿಂಚಿನ ಓಟದಲ್ಲಿರುವ ಕಾರಣದಿಂದ ಮರಗಳ ಸಂಖ್ಯೆ ದಿನೇ ದಿನಕ್ಕೆ ಕಡಿಮೆ ಆಗುತ್ತಿದೆ. ನಗರೀಕರಣಕ್ಕಾಗಿ ಕಡಿದ ಮರಗಳ ಜಾಗದಲ್ಲಿ ಹೊಸ ಗಿಡ ನೆಡುವಲ್ಲಿಯೂ ಹಿಂದೆ ಬಿದ್ದಿದೆ. ಮಾನವ ತಾನು ಜೀವಿಸಲು ಎಲ್ಲ ರೀತಿಯ ಅನುಕೂಲ ಮಾಡಿಕೊಳ್ಳುವ ಧಾವಂತದಲ್ಲಿ ಕೀಟ, ಪ್ರಾಣಿ, ಪಕ್ಷಿ ಹಾಗೂ ಜಲಚರ ಜೀವಿಗಳು ಸೇರಿದಂತೆ ಕೋಟ್ಯಾಂತರ ಜೀವಿಗಳ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾನೆ. ಮಹಾನಗರಿ ತನ್ನ ಹಸಿರು ಸೌಂದರ್ಯವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ. ಈ ವೇಳೆ, ನಿಸರ್ಗದ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ದುಂಬಿ ಜಾತಿಗೆ ಸೇರಿದ ಕೀಟಗಳ ಸಂರಕ್ಷಣೆಗೆ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ವಿಶಿಷ್ಟ ಹೆಸರಿನೊಂದಿಗೆ 'ಕೀಟ ಕೆಫೆ' ಆರಂಭವಾಗಿದೆ.

ಹವಾಮಾನ ವೈಪರೀತ್ಯ ಹಾಗೂ ನಗರೀಕರಣದಿಂದಾಗಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಕೀಟಗಳು ಅಳಿವಿನ ಅಂಚಿನಲ್ಲಿವೆ. ಇಂತಹ ಅಳಿವಿನಂಚಿನಲ್ಲಿರುವ ಕೀಟಗಳನ್ನು ಸಂರಕ್ಷಣೆ ಮಾಡುವ ಸಲುವಾಗಿ ಲಾಲ್‌ಬಾಗ್‌ನಲ್ಲಿ ಕೀಟಗಳಿಗೊಂದು ಮನೆಯನ್ನು ನಿರ್ಮಾಣ ಮಾಡಲಾಗಿದೆ. ಅದುವೇ “ಕೀಟ ಕೆಫೆ”!

ಲಾಲ್‌ಬಾಗ್‌ನಲ್ಲಿ ವೈವಿಧ್ಯಮಯ ಕೀಟಗಳ ಜೀವ ವೈವಿಧ್ಯತೆಯನ್ನು ಪರಿಗಣಿಸಿ ಚಿಂತನಾಶೀಲವಾಗಿ ಬಹುವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವಿಭಾಗವನ್ನು ಚಿಂತನಾಶೀಲವಾಗಿ, ಸುಂದರವಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಮರದ ತುಂಡುಗಳು, ವಿವಿಧ ರೀತಿಯ ಸಸ್ಯ ಕಾಂಡದ ತುಂಡುಗಳು ಮತ್ತು ಕೀಟಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ಇತರ ವಸ್ತುಗಳನ್ನು ಅಳವಡಿಸಲಾಗಿದೆ.


Downloaded From:www.kpscvaani.com





'ಲಾಲ್‌ಬಾಗ್ ಉದ್ಯಾನ'ವು ಪರ್ಷಿಯಾ, ಆಫ್ಘಾನಿಸ್ತಾನ ಮತ್ತು ಫ್ರಾನ್ಸ್‌ನಿಂದ ತರಿಸಲ್ಪಟ್ಟ ಅಪರೂಪದ ಸಸ್ಯಜಾತಿಯನ್ನು ಹೊಂದಿದೆ. ನೀರಾವರಿಗಾಗಿ ಅನೇಕ ವಿಧವಾದ ವ್ಯವಸ್ಥೆಯನ್ನು ಹೊಂದಿದ್ದು, ಉದ್ಯಾನವನ್ನು ಹುಲ್ಲುಹಾಸುಗಳು, ಹೂವಿನ ಪಾತಿಗಳು, ಕಮಲದ ಕೆರೆ ಮತ್ತು ಕಾರಂಜಿಗಳಿಂದ ತುಂಬಾ ಸದಭಿರುಚಿಯಿಂದ ವಿನ್ಯಾಸಗೊಳಿಸಿ, ದೇಶ ಮತ್ತು ರಾಜ್ಯದ ಹೆಮ್ಮೆಯ ಸಸ್ಯಶಾಸ್ತ್ರೀಯ ತೋಟವನ್ನಾಗಿಸಲಾಗಿದೆ. ಪ್ರಸ್ತುತ ದೇಶ ವಿದೇಶದ 3000 ಕ್ಕೂ ಹೆಚ್ಚು ಸಸ್ಯ ಪ್ರಭೇದಗಳ ಆಗರವಾಗಿದೆ. ಹಾಗೆಯೇ ಅಸಂಖ್ಯಾತ ಜೀವರಾಶಿಯ ಕೇಂದ್ರವಾಗಿರುವುದರ ಮುಖೇನ ಬೆಂಗಳೂರು ನಗರದ ಪ್ರಮುಖ ಜೀವ ವೈವಿಧ್ಯತಾ ಕೇಂದ್ರವಾಗಿದೆ.

ಪರಿಸರದಲ್ಲಿ ಅಸಂಖ್ಯಾತ ಬಗೆಯ ಕ್ರಿಮಿಕೀಟ, ದುಂಬಿಗಳಿದ್ದು, ಇವು ನೈಸರ್ಗಿಕ ಆಹಾರ ಸರಪಳಿಯ ಪ್ರಥಮ ಹಂತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ನಿಸರ್ಗದ ಅಸಂಖ್ಯಾತ ಗಿಡ–ಮರ, ಬಳ್ಳಿಗಳಲ್ಲಿ ಹೂವು, ಹಣ್ಣು ಬೆಳವಣಿಗೆಗೆ ಕಾರಣೀಭೂತವಾಗಿದೆ. ಆದರೆ ಇತ್ತೀಚಿನ ನಗರೀಕರಣ ಹಾಗೂ ಹವಾಮಾನ ವೈಪರೀತ್ಯದ ದೆಸೆಯಲ್ಲಿ ಪ್ರಕೃತಿದತ್ತವಾಗಿದ್ದಂತಹ ಹಸಿರು ತಾಣಗಳು, ಹುಲ್ಲುಗಾವಲುಗಳು, ಮರಗಳು, ಸಸ್ಯಗಳು ಮರೆಯಾಗಿದೆ. ಹಾಗಾಗಿ ಇದು ಕೀಟಗಳ ಆಸರೆ, ಸಂತಾನೋತ್ಪತ್ತಿ ಮತ್ತು ವೃದ್ಧಿಗಾಗಿ ತಮ್ಮದೇ ಆದ ಸಂರಕ್ಷಿತ ಮತ್ತು ಸುರಕ್ಷಿತ ನೆಲೆ ಇಲ್ಲದಂತಾಗಿದೆ.

ಕೀಟಗಳಿಗೆ ಸರ್ವ ರೀತಿಯಲ್ಲೂ ಪೂರಕವಾಗಿರಬಲ್ಲ ಹೊಸ ಪರಿಕಲ್ಪನೆಯಲ್ಲಿ "ಕೀಟ ಕೆಫೆ"ಯನ್ನು ಲಾಲ್‌ಬಾಗ್‌ನಲ್ಲಿ ಅನಾವರಣಗೊಳಿಸಲಾಗಿದೆ. ಕೀಟ ಕೆಫೆಯ ವಿಶೇಷತೆ ಎಂದರೆ, ಮರದ ಫ್ರೇಮ್‌ಗಳಿಂದ ಸಣ್ಣ ಮನೆಯಾಕಾರದಲ್ಲಿ ವಿನ್ಯಾಸಗೊಳಿಸಲಾಗಿದ್ದು, ಪ್ರತಿ ವಿಭಾಗದಲ್ಲಿ ಸಣ್ಣ, ಮಧ್ಯಮ ಮರದ ತುಂಡುಗಳು, ಒಣ ಹುಲ್ಲು, ನಾನಾ ರೀತಿಯ ಸಸ್ಯಗಳ ಕಟ್ಟಿಗೆ ಇತ್ಯಾದಿಗಳನ್ನು ಅಂಟಿಕೊಂಡಿರುವಂತೆ ಜೋಡಿಸಿ ವೇದಿಕೆಯನ್ನು ಸಿದ್ಧಪಡಿಸಲಾಗಿದೆ. ಈ ರಚನೆಯು ಎಲ್ಲಾ ಬಗೆಯ ಕೀಟ, ದುಂಬಿಗಳು ನೆಲೆಸಲು ಮೂಲನೆಲೆ ಕಲ್ಪಿಸಿ, ಸಂತಾನೋತ್ಪತ್ತಿ ಹೊಂದಿ ಅವುಗಳ ವೃದ್ಧಿ ಮತ್ತು ಬೆಳವಣಿಗೆಗೆ ಕಾರಣವಾಗಲಿದೆ.

ದುಂಬಿ ಜಾತಿಯ ಕೀಟಗಳಿಗೆ ಸರ್ವ ರೀತಿಯಲ್ಲಿಯೂ ಸಹಕಾರಿಯಾಗುವಂತೆ ಒಣ ಮರವನ್ನು ಕೊರೆಯುವ ದುಂಬಿ ಪ್ರಭೇದಗಳಿಗೆ ಬೇಕಾದ ಮರಗಳು ಹಾಗೂ ಮಣ್ಣಿನೊಳಗೆ ಕೊರಕಲು ಮಾಡಿ ಅಲ್ಲಿ ಅಡಗಿಸಿಕೊಳ್ಳುವ ಕೀಟಗಳಿಗೂ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಾರ್ಪೆಂಟರ್ ಬೀ, ಬಂಬಲ್ ಬೀ ಇತ್ಯಾದಿ ಪ್ರಭೇದಗಳು ಪ್ರಮುಖವಾದವುಗಳು. ಗೂಡು ಕಟ್ಟಿ ಜೇನು ಸಂಗ್ರಹಿಸುವ ದುಂಬಿಗಳು ಕಡಿಮೆ ಸಂಖ್ಯೆಯಲ್ಲಿದ್ದು, ಒಂಟಿ ದುಂಬಿಗಳು ಸಹಸ್ರಾರು ಸಂಖ್ಯೆಯಲ್ಲಿ ಇವೆ. ಅವುಗಳು ಗೂಡು ಕಟ್ಟುವುದರ ಬದಲು ಒಂಟಿಯಾಗಿ ಒಣ ಮರವನ್ನು ಕೊರೆದು ತೂತು ಮಾಡಿ ಅಲ್ಲೇ ಬದುಕುತ್ತವೆ.

ವಿಭಿನ್ನ ಇಂಡಿಯಾ ಫೌಂಡೇಶನ್ ಸಂಸ್ಥೆಯ ಸಿಇಒ ಆಗಿರುವ ಡೇವಿಡ್ ಕುಮಾರ್ ಅವರು ಸಾರ್ವಜನಿಕ ಸಹಭಾಗಿತ್ವದಡಿ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಪ್ರಾರಂಭಿಕವಾಗಿ ಒಂದು ಇನ್‌ಸೆಕ್ಟ್ ಕೆಫೆಯನ್ನು ಲಾಲ್‌ಬಾಗ್ ಬ್ಯಾಂಡ್ ಸ್ಟ್ಯಾಂಡ್ ಬಳಿ ನಿರ್ಮಿಸಿದ್ದಾರೆ. ತೋಟಗಾರಿಕಾ ನಿರ್ದೇಶಕರಾದ ಡಿ.ಎಸ್. ರಮೇಶ್ ಅವರು ಈ ಇನ್‌ಸೆಕ್ಟ್ ಕೆಫೆ (ಕೀಟ ಕೆಫೆ) ಯನ್ನು ಅನಾವರಣಗೊಳಿಸಿದ್ದಾರೆ.

ಲಾಲ್‌ಬಾಗ್ ಒಳಗೊಂಡಂತೆ ಕಬ್ಬನ್ ಉದ್ಯಾನವನ, ನಂದಿ ಗಿರಿಧಾಮ, ಕೃಷ್ಣರಾಜೇಂದ್ರ ಗಿರಿಧಾಮ, ರಾಜ್ಯ ವ್ಯಾಪ್ತಿಯ ಎಲ್ಲಾ ಸಸ್ಯಶಾಸ್ತ್ರೀಯ ತೋಟಗಳಲ್ಲಿಯೂ ಸಹ ಈ ಹೊಸ ಪರಿಕಲ್ಪನೆಯಡಿ 50 ಕ್ಕೂ ಹೆಚ್ಚು ಇನ್‌ಸೆಕ್ಟ್ ಕೆಫೆಗಳನ್ನು ನಿರ್ಮಿಸಲು ಚಿಂತಿಸಲಾಗಿದೆ ಎಂದು ತೋಟಗಾರಿಕಾ ನಿರ್ದೇಶಕರಾದ ಡಿ.ಎಸ್. ರಮೇಶ್ ಅವರು ತಿಳಿಸಿದ್ದಾರೆ.

ರಾಜ್ಯದಾದ್ಯಂತ ಇಂತಹ ನೂರಾರು ಕೀಟ ಕೆಫೆಗಳನ್ನು ಸ್ಥಾಪಿಸುವ ಮುಖೇನ ಕೀಟ ಸಂರಕ್ಷಣೆಗೆ ಪೂರಕವಾಗಬೇಕೆಂದು ತೋಟಗಾರಿಕೆ ಇಲಾಖೆಯ ಆಶಯವಾಗಿದೆ.


Downloaded From:www.kpscvaani.com



# ಕುರಿ ಸಾಕಾಣಿಕೆಯಲ್ಲಿ ಯಶಸ್ಸು ಕಂಡ ಯುವ ರೈತ

**ನರೇಗಾ ಯೋಜನೆಯಡಿ ಕುರಿ ಶೆಡ್ ನಿರ್ಮಿಸಿಕೊಂಡು ಕುರಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುವ ವನದುರ್ಗ ಗ್ರಾಮದ ಮಲ್ಲಣ್ಣ ಅವರ ಯಶೋಗಾಥೆ.**

ಬಸಪ್ಪ

ಕುರಿ, ಆಡು ಸಾಕಾಣಿಕೆ ಮಾಡುವವರಿಗೆ ಎದುರಾಗುವ ಪ್ರಮುಖ ಸಮಸ್ಯೆ ಎಂದರೆ ಕಾಡುಪ್ರಾಣಿಗಳಿಂದ ಅವುಗಳನ್ನು ಕಾಪಾಡುವುದು. ಆಡು, ಕುರಿಗಳಿಗೆ ಶೆಡ್ ಇಲ್ಲದೇ, ಮನೆಯ ಹೊರಗಡೆ ಬಯಲಲ್ಲೇ ಕಟ್ಟುವ ಜನರಿಗೆ ತಮ್ಮ ಆಡು, ಕುರಿಗಳನ್ನು ಕಾಡುಪ್ರಾಣಿಗಳಿಂದ ಹಾಗೂ ಕುರಿ ಕಳ್ಳರಿಂದ ರಕ್ಷಿಸಿಕೊಳ್ಳಲು ಮತ್ತು ಕುರಿ ಸಾಕಾಣಿಕೆ ಮೂಲಕ ಸ್ವಯಂ ಉದ್ಯೋಗ ಮಾಡಲು ಇಚ್ಛಿಸುವ ಜನರಿಗೆ ಪ್ರೋತ್ಸಾಹ ನೀಡಲು ಸರಕಾರ ನರೇಗಾ ಯೋಜನೆಯಡಿ ಕುರಿ ಶೆಡ್ ನಿರ್ಮಾಣಕ್ಕೆ 70 ಸಾವಿರ ರೂ.ಗಳ ಸಹಾಯಧನವನ್ನು ನೀಡುತ್ತಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ವನದುರ್ಗ ಗ್ರಾಮ ಪಂಚಾಯಿತಿಗೆ ಸೇರಿದ ವನದುರ್ಗ ಗ್ರಾಮದ ಮಲ್ಲಣ್ಣ ಅವರು 2023–24ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗಾಮೀಣ ಉದ್ಯೋಗ ಖಾತರಿ ಯೋಜನೆಯ ವೈಯಕ್ತಿಕ ಕಾಮಗಾರಿಗಳಡಿ ಕುರಿ ಶೆಡ್ ನಿರ್ಮಿಸಿಕೊಂಡ ಫಲಾನುಭವಿ.

ಕುರಿ, ಕೋಳಿ, ಹಂದಿ ಹಾಗೂ ಇತರೆ ಜಾನುವಾರು ಸಾಕಾಣಿಕೆ ರೈತರ ಉಪಕಸುಬು. ಅದರಿಂದ ಆದಾಯ ಹೊಂದಲು ಅವುಗಳ ಲಾಲನೆ ಪಾಲನೆ ಅತೀ ಅವಶ್ಯಕ. ಹಾಗಾಗಿ ಅವುಗಳ ಪಾಲನೆ–ಪೋಷಣೆ ಸುಗಮವಾಗಿ ನಡೆದಲ್ಲಿ ರೈತರ ಜೀವನೋಪಾಯಕ್ಕೆ ದಾರಿಯಾಗುವುದಲ್ಲದೆ ಆರ್ಥಿಕ ಸಬಲೀಕರಣ ಸಾಧ್ಯವಾಗುವುದು. ಈ ಸದುದ್ದೇಶದಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಆಡು ಹಾಗೂ ಕುರಿ ಸಾಕಾಣಿಕೆಗೆ ಅನುಕೂಲವಾಗಲು ಕುರಿ ಶೆಡ್ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡಲು ಹೆಚ್ಚು ಒತ್ತು ನೀಡಲಾಗುತ್ತಿದೆ.

ಗ್ರಾಮ ಪಂಚಾಯಿತಿಯಿಂದ ನರೇಗಾ ಯೋಜನೆಯಡಿ ಅನುಷ್ಠಾನ ಮಾಡುವ ಕುರಿ ಶೆಡ್ ನಿರ್ಮಾಣಕ್ಕೆ ಈ ಮೊದಲು 43 ಸಾವಿರ ರೂ.ಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹಾಗೂ 19,500 ರೂ.ಗಳನ್ನು ಸಾಮಾನ್ಯ ವರ್ಗದವರಿಗೆ ಆರ್ಥಿಕ ನೆರವನ್ನು ಒದಗಿಸಲಾಗುತಿತ್ತು. ಆದರೆ ಈಗ 70 ಸಾವಿರ ರೂ.ಗಳು ನೀಡಲಾಗುತ್ತಿದೆ. ಕನಿಷ್ಠ 10 ಕುರಿಗಳು ವಾಸಿಸುವಂತೆ ಹೊಸ ಮಾದರಿಯ ಕುರಿ ಶೆಡ್ ನಿರ್ಮಾಣಕ್ಕೆ ಕೂಲಿ ಹಾಗೂ ಸಾಮಗ್ರಿ ವೆಚ್ಚದ ರೂಪದಲ್ಲಿ


Downloaded From:www.kpscvaani.com





ನನಗೆ ಸುಮಾರು 3 ಎಕರೆ ಜಮೀನು ಪಿತ್ರಾರ್ಜಿತವಾಗಿ ಬಂದಿದ್ದು, ಅದರಲ್ಲಿ ಅರ್ಧ ಎಕರೆಗೆ ಕುರಿ ಸಾಕಾಣಿ ಮಾಡಲು ಹುಲ್ಲು ಬೆಳೆಸಿದ್ದೇನೆ. ಈ ಹಿಂದೆ ಪ್ರಕೃತಿ ವಿಕೋಪ ಮತ್ತು ಕಳ್ಳರಿಂದ ಕೆಲವು ಕುರಿಗಳನ್ನು ಕಳೆದುಕೊಂಡಿದ್ದೆ. ಈಗ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕುರಿ ಶೆಡ್ ನಿರ್ಮಿಸಿಕೊಂಡಿರುವುದು ನನಗೆ ಸಂತಸ ತಂದಿದೆ. ಕುರಿ ಸಾಕಾಣಿಕೆಗೆ ಪ್ರೋತ್ಸಾಹ ನೀಡಿದ ಸರ್ಕಾರಕ್ಕೆ ಧನ್ಯವಾದಗಳು.

**– ಮಲ್ಲಣ್ಣ**

ಫಲಾನುಭವಿಗಳಿಗೆ 70 ಸಾವಿರ ರೂ.ಗಳನ್ನು ಪಾವತಿಸಲಾಗುತ್ತದೆ.

ಮಲ್ಲಣ್ಣ ಅವರು ಈ ಹಿಂದೆ ಯಾವುದೇ ವೈಜ್ಞಾನಿಕ ಕ್ರಮ ಅನುಸರಿಸದೆ ಕುರಿ ಸಾಕಾಣಿಕೆ ಮಾಡುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದರು. ಆಡುಗಳಿಗೆ ಯಾವುದೇ ಶೆಡ್ ಇಲ್ಲದೇ, ಬಯಲಲ್ಲೇ ಕಟ್ಟುತ್ತಿದ್ದರು. ಇದರಿಂದ ಮಳೆ, ಗಾಳಿ, ಕಾಡುಪ್ರಾಣಿ ಹಾಗೂ ಕಳ್ಳರಿಂದಾಗಿ ಕೆಲವು ಕುರಿಗಳನ್ನು ಕಳೆದುಕೊಂಡು ನಷ್ಟವನ್ನೂ ಅನುಭವಿಸಿದ್ದರು.

ಈಗ, ಗ್ರಾಮ ಪಂಚಾಯಿತಿ ಮಹಾತ್ಮಗಾಂಧಿ ನರೇಗಾ ಯೋಜನೆ ವೈಯಕ್ತಿಕ ಕಾಮಗಾರಿಗಳಲ್ಲಿ ಕುರಿ ಶೆಡ್ ನಿರ್ಮಾಣಕ್ಕೆ ನೀಡಿರುವ 70 ಸಾವಿರ ರೂ.ಗಳ ಆರ್ಥಿಕ ಸಹಾಯಧನಕ್ಕೆ ತಮ್ಮ ಸ್ವಂತ ಹಣವನ್ನು ಸೇರಿಸಿ, ಒಂದು ಸುಸಜ್ಜಿತ ಕುರಿ ಶೆಡ್ ನಿರ್ಮಿಸಿಕೊಂಡಿರುವುದರಿಂದ ಯಾವುದೇ ಕುರಿ ಪ್ರಕೃತಿ ವಿಕೋಪ ಹಾಗೂ ಕಾಡುಪ್ರಾಣಿಗಳಿಗೆ ಬಲಿಯಾಗಿಲ್ಲ. ಅಲ್ಲದೆ ಕಳ್ಳರಿಂದಲೂ ಸುಲಭವಾಗಿ ರಕ್ಷಿಸಿಕೊಳ್ಳಲು ಸಾಧ್ಯವಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಭಾಗದ ರೈತರಿಗೆ ಹಾಗೂ ಕೃಷಿ ಕೂಲಿ ಕಾರ್ಮಿಕರಿಗೆ ಇರುವ ವಿವಿಧ ಯೋಜನೆಗಳ ಪ್ರಯೋಜನದ ಕುರಿತು ಮಾಹಿತಿ ನೀಡಲು ಗ್ರಾಮ ಪಂಚಾಯಿತಿಯಲ್ಲಿ ಪ್ರತಿ ತಿಂಗಳು ಎರಡನೆ ಗುರುವಾರ ನಡೆಸುವ ರೋಜಗಾರ ದಿವಸ ಮತ್ತು ಮನೆ–ಮನೆ ಭೇಟಿ ನೀಡುವ ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ನರೇಗಾ ಯೋಜನೆ ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕರು ಮನೆ ಮನೆಗೆ ಹೋಗಿ ಕುರಿ ಶೆಡ್ ನಿರ್ಮಾಣದ ಕುರಿತು ತಿಳಿಸಿದ ಸಂದರ್ಭದಲ್ಲಿ ಕುರಿ ಸಾಕಾಣಿಕೆ ಮಾಡುವ ಮಲ್ಲಣ್ಣ ಅವರು ಕೂಡ ಒಂದು ಕುರಿ ಶೆಡ್ ನಿರ್ಮಿಸಿಕೊಳ್ಳಬಾರದು ಎಂದು ಯೋಚಿಸಿದರು. ಹಾಗೆಯೇ ಈ ಯೋಜನೆಯ ಲಾಭ ಪಡೆದು ಒಂದು ಕುರಿ ಶೆಡ್ ನಿರ್ಮಿಸಿಕೊಂಡರು. ಇದರಿಂದ ಪ್ರತಿ ವರ್ಷ ಅನಗತ್ಯವಾಗಿ ಪ್ರಕೃತಿ ವಿಕೋಪ, ಕಾಡುಪ್ರಾಣಿ ಹಾಗೂ ಕಳ್ಳರಿಗೆ ಬಲಿಯಾಗುತ್ತಿದ್ದ ಕುರಿಗಳನ್ನು ರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಗಿದೆ.

ಹಾಗಾಗಿ ಮನೆಯ ಹೊರಗಡೆ ಬಯಲಲ್ಲೇ ಕುರಿ–ಆಡುಗಳನ್ನು ಕಟ್ಟುತ್ತಿರುವವರು ಚಿಂತೆ ಮಾಡದೆ ನಿಮ್ಮ ಕುರಿ–ಮೇಕೆಗಳ ರಕ್ಷಣೆಗಾಗಿ ನರೇಗಾ ಯೋಜನೆಯಡಿ ಕುರಿ ಶೆಡ್ ನಿರ್ಮಾಣ ಮಾಡಿಕೊಳ್ಳಬಹುದು. ಅದಕ್ಕಾಗಿ ನಿಮ್ಮ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಅರ್ಜಿ ಸಲ್ಲಿಸುವ ಮೂಲಕ ಯೋಜನೆಯ ಸೌಲಭ್ಯ ಪಡೆದುಕೊಳ್ಳಬಹುದು.



Downloaded From:www.kpscvaani.com




# ಐತಿಹಾಸಿಕ ದ್ವೀಪನಗರಿ ಶ್ರೀರಂಗಪಟ್ಟಣ

**ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾದ ಮಂಡ್ಯ ಜಿಲ್ಲೆಯ ದ್ವೀಪನಗರಿ ಶ್ರೀರಂಗಪಟ್ಟಣದ ಒಂದು ನೋಟ.**

ಬನ್ನೂರು ಕೆ. ರಾಜು

ಕನ್ನಡನಾಡಿನ ಜೀವನದಿ ಕಾವೇರಿಯು ಕೊಡಗಿನಲ್ಲಿ ಹುಟ್ಟಿ ಕುಣಿಯುತ, ನಲಿಯುತ, ನಿನದವಾಡುತ್ತಾ ಜೀವದ್ರವ್ಯವಾಗಿ ಹರಿದು ಬರುತ್ತಾಳೆ. ಹೀಗೆ ಮಂಡ್ಯದಿಂದ 30 ಕಿ.ಮೀ. ದೂರದಲ್ಲಿ ಎರಡು ಹೋಳಾಗಿ ಪಟ್ಟಣದ ಸುತ್ತ ವೈಯ್ಯಾರದಿಂದ ಹರಿಯುವ ಕಾವೇರಿಯು ಇಡೀ ಪಟ್ಟಣವನ್ನು ಆವೃತ್ತಗೊಂಡು ಒಂದು ಚೆಂದದ ದ್ವೀಪವಾಗಿಸಿದ್ದಾಳೆ. ಅದೇ ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯ ದ್ವೀಪನಗರಿ ಶ್ರೀರಂಗಪಟ್ಟಣ. ಈ ಹೆಸರು ಕೇಳಿದಾಕ್ಷಣ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಟಿಪ್ಪು ಸುಲ್ತಾನ್ ನೆನಪಾಗುತ್ತಾರೆ. ಟಿಪ್ಪು ಬಾಳಿ ಬದುಕಿದ್ದ, ಬ್ರಿಟಿಷರೊಡನೆ ಧೀರತನದಿಂದ ಹೋರಾಡಿ ಹುತಾತ್ಮರಾದ ವೀರಭೂಮಿಯಿದು. ಮೈಸೂರು ಅರಸರು ಆಳಿದ ಭವ್ಯ ನೆಲವಿದು.

ಈ ದ್ವೀಪನಗರ ಶ್ರೀರಂಗಪಟ್ಟಣ ಧಾರ್ಮಿಕವಾಗಿ, ಚಾರಿತ್ರಿಕವಾಗಿ, ಪೌರಾಣಿಕವಾಗಿ ನಾನಾ ಘಟನಾವಳಿಗಳಿಂದ ಮಹತ್ವ ಪಡೆದುಕೊಂಡಿದೆ. ವಿಶೇಷವಾಗಿ ಸ್ವಾತಂತ್ರ್ಯ ಪೂರ್ವದ ಭಾರತದ ಇತಿಹಾಸದಲ್ಲಿ ಇದು ಪ್ರಾಮುಖ್ಯತೆಗಳಿಸಿದೆ. ಇಡೀ ಭಾರತವನ್ನು ಕಬಳಿಸುತ್ತಿದ್ದ ಬ್ರಿಟಿಷರಿಗೆ ಇದು ಭೇದಿಸಲಾಗದ ಉಕ್ಕಿನ ಕೋಟೆಯಾಗಿತ್ತು. ಇದನ್ನು ವಶಪಡಿಸಿಕೊಳ್ಳಲು ಬ್ರಿಟಿಷರು ತಮ್ಮೆಲ್ಲಾ ಸರ್ವ ಪ್ರಯತ್ನಗಳ ಜೊತೆಗೆ ನಾಲ್ಕು ಬಾರಿ ದಂಡೆತ್ತಿ ಬಂದು ಯುದ್ಧಕ್ಕೆ ನಿಂತು ಬೆವರು ಸುರಿಸಿ ರಕ್ತ ಹರಿಸಬೇಕಾಯಿತು.

ಪೌರಾಣಿಕವಾಗಿ 'ಆದಿರಂಗ' ಎಂದೂ, ಚಾರಿತ್ರಿಕವಾಗಿ 'ಅಷ್ಟಗ್ರಾಮ' ಎಂದೂ ಕರೆಯಲ್ಪಟ್ಟಿರುವ ಶ್ರೀರಂಗಪಟ್ಟಣವು ಕಾವೇರಿ ನದಿಯಿಂದ ನಿರ್ಮಿತವಾದ


Downloaded From:www.kpscvaani.com





**ಒಂದು ಕಾಲದಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದ ಚಾರಿತ್ರಿಕ ಹಿರಿಮೆಯ, ಪೌರಾಣಿಕ ಗರಿಮೆಯ ಶ್ರೀರಂಗಪಟ್ಟಣ ಇಂದಿಗೂ ತನ್ನ ಗತವೈಭವವನ್ನು ಸಾರುತ್ತಾ, ಕರ್ನಾಟಕದ ಪ್ರಮುಖ ಪ್ರವಾಸಿ ತಾಣವಾಗಿದೆ. ಒಂದೇ ಕಡೆ ಕೆಲವೇ ಕಿಲೋ ಮೀಟರ್‌ಗಳ ಅಂತರದಲ್ಲಿ ಹಲವಾರು ಅದ್ಭುತ ಸ್ಥಳಗಳನ್ನು ಪ್ರವಾಸಿಗರು ಪ್ರಯಾಸವಿಲ್ಲದೆ ವೀಕ್ಷಿಸಬಹುದಾದ ಒಂದು ಅಪೂರ್ವ ದ್ವೀಪ ಪಟ್ಟಣವಿದು.**

ನಯನ ಮನೋಹರ ದ್ವೀಪವಾಗಿದ್ದು, ಪಶ್ಚಿಮದಿಂದ ಪೂರ್ವಕ್ಕೆ ಸುಮಾರು 3 ಮೈಲಿಗಳಷ್ಟು ಉದ್ದ ಮತ್ತು ಉತ್ತರ–ದಕ್ಷಿಣವಾಗಿ ಒಂದು ಮೈಲಿಯಷ್ಟು ಅಗಲವನ್ನು ಹೊಂದಿದೆ.
ಶ್ರೀರಂಗಪಟ್ಟಣವನ್ನು ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ಸಹೋದರ ಉದಯಾದಿತ್ಯನು ಕ್ರಿ.ಶ. 1120ರಲ್ಲಿ ನಿರ್ಮಿಸಿದ್ದರೆ, ಕ್ರಿ.ಶ. 1454ರಲ್ಲಿ ನಾಗಮಂಗಲದ ದೊರೆ ತಿಮ್ಮಣ್ಣನೆಂಬುವನು ಶ್ರೀರಂಗಪಟ್ಟಣಕ್ಕೆ ಸುತ್ತಲೂ ಕೋಟೆಯನ್ನು ಕಟ್ಟಿಸಿದ್ದಾನೆ. ನಾಲ್ಕು ದ್ವಾರಗಳಿಂದ ಪಟ್ಟಣವನ್ನು ಸುತ್ತುವರಿದಿರುವ ಈ ಬಲವಾದ ಕೋಟೆ ಭಾರತದ ಎರಡನೇ ಅತ್ಯಂತ ಬಲಿಷ್ಠ ಕೋಟೆಯೆಂದು ಪರಿಗಣಿತವಾಗಿದೆ. ವಿಜಯನಗರದರಸರ ಆಳ್ವಿಕೆಗೂ ಒಳಪಟ್ಟಿದ್ದ ಇದು ಅವರ ಸಾಮಂತ ಶ್ರೀರಂಗರಾಯನ ನಂತರ 1610ರಲ್ಲಿ ಮೈಸೂರು ಅರಸರ ಕೈವಶವಾಗಿತ್ತು. ಆಗವರ ರಾಜಧಾನಿಯಾಗಿ ಬಹು ವೈಭವದಿಂದ ಮಿಂಚಿತ್ತು. ಟಿಪ್ಪುವಿನ ಮರಣಾನಂತರ ಬ್ರಿಟಿಷರ ಅಧಿಪತ್ಯಕೊಳ್ಳಪಟ್ಟ ಶ್ರೀರಂಗಪಟ್ಟಣ ತನ್ನ ರಾಜಧಾನಿ ಪಟ್ಟವನ್ನು ಮೈಸೂರಿಗೆ ಬಿಟ್ಟುಕೊಟ್ಟಿತ್ತು.

ಹೀಗೆ ಒಂದು ಕಾಲದಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದ ಚಾರಿತ್ರಿಕ ಹಿರಿಮೆಯ, ಪೌರಾಣಿಕ ಗರಿಮೆಯ ಶ್ರೀರಂಗಪಟ್ಟಣ ಇಂದಿಗೂ ತನ್ನ ಗತವೈಭವವನ್ನು ಸಾರುತ್ತಾ, ಕರ್ನಾಟಕದ ಪ್ರಮುಖ ಪ್ರವಾಸಿ ತಾಣವಾಗಿದೆ. ಒಂದೇ ಕಡೆ ಕೆಲವೇ ಕಿಲೋ ಮೀಟರ್‌ಗಳ ಅಂತರದಲ್ಲಿ ಹಲವಾರು ಅದ್ಭುತ ಸ್ಥಳಗಳನ್ನು ಪ್ರವಾಸಿಗರು ಪ್ರಯಾಸವಿಲ್ಲದೆ ವೀಕ್ಷಿಸಬಹುದಾದ ಒಂದು ಅಪೂರ್ವ ದ್ವೀಪ ಪಟ್ಟಣವಿದು.

ಇಲ್ಲಿ ಪುರಾಣ ಇತಿಹಾಸ ಪ್ರಸಿದ್ಧ ಗಗನ ಚುಂಬಿಸುವ ಬೃಹತ್ ರಾಜಗೋಪುರವುಳ್ಳ ಕ್ರಿ.ಶ. 894ರಲ್ಲಿ ಗಂಗರ ತಿರುಮಲೈ ಕಟ್ಟಿಸಿದನೆಂಬ ಐತಿಹ್ಯವಿರುವ ಮಲಗಿರುವ ಶ್ರೀರಂಗನಾಥಸ್ವಾಮಿ ದೇವಸ್ಥಾನ ಸೇರಿದಂತೆ ಶ್ರೀಲಕ್ಷ್ಮೀನರಸಿಂಹಸ್ವಾಮಿ, ಶ್ರೀಅಯ್ಯಪ್ಪಸ್ವಾಮಿ, ಶ್ರೀಜನಾರ್ಧನಸ್ವಾಮಿ, ಶ್ರೀಜ್ಯೋತಿರ್ಮಹೇಶ್ವರಿ, ಶ್ರೀವಿಘ್ನೇಶ್ವರ, ಶ್ರೀನಗರೇಶ್ವರ, ಶ್ರೀಆಂಜನೇಯಸ್ವಾಮಿ, ಶ್ರೀಸುಬ್ರಹ್ಮಣ್ಯಸ್ವಾಮಿ, ಶ್ರೀಗೋಪಾಲಕೃಷ್ಣಸ್ವಾಮಿ, ಶಕ್ತಿದೇವತೆಗಳಾದ ಶ್ರೀಅಂಕಾಳಮ್ಮ, ಶ್ರೀಮಾರಮ್ಮ, ಶ್ರೀಕಾಳಮ್ಮ ಮುಂತಾದ ದೇವಾನುದೇವತೆಗಳ ಸಾಲು ಸಾಲು ದೇವಾಲಯಗಳನ್ನು ಕಾಣಬಹುದು. ಹಾಗೆಯೇ ಶತಕೋಟಿ ರಾಮಮಂದಿರ, ಕಾವೇರಿ ತೀರದಲ್ಲಿರುವ ಪ್ರಸಿದ್ಧ ಸಾಯಿಮಂದಿರ, ಉತ್ತರಾಧಿಮಠ, ರಾಘವೇಂದ್ರಮಠ, ಯತಿರಾಜಮಠ ಇತ್ಯಾದಿ ಮಠ ಮಾನ್ಯಗಳು, ಮಂದಿರಗಳು, ಜೈನ ಬಸದಿಗಳು ಇಲ್ಲಿ ಯಥೇಚ್ಛವಾಗಿವೆ.

ಟಿಪ್ಪು ಪ್ರಾರ್ಥನೆ ಮಾಡುತ್ತಿದ್ದ 1781ರಲ್ಲಿ ನಿರ್ಮಾಣಗೊಂಡಿರುವ ಆಕಾಶ ಮುಟ್ಟುವ ನೂರಡಿ ಎತ್ತರದ ಆಕರ್ಷಕವಾದ ಎರಡು ಮಿನಾರುಗಳುಳ್ಳ ಐತಿಹಾಸಿಕ 'ಜುಮ್ಮಾ ಮಸೀದಿ', ದೂರದ ಸ್ಥಳಗಳನ್ನು ವೀಕ್ಷಿಸಲು ಟಿಪ್ಪು ಬಳಸುತ್ತಿದ್ದ ಬಹು ಎತ್ತರದ 'ಬತೇರಿ', ಬ್ರಿಟಿಷರು ಹಾಗೂ ಮತ್ತಿತರೇ ವೈರಿಗಳನ್ನು ಟಿಪ್ಪು ಬಂಧಿಸಿಡುತಿದ್ದ ನೆಲಮಾಳಿಗೆಯ ಬಂದೀಖಾನೆಯಾದ 'ಬೇಲಿಡಂಜನ್', ಇದರ ಮಧ್ಯದಲ್ಲಿರುವ ಹತ್ತು ಅಡಿ ಉದ್ದದ ಟಿಪ್ಪುಕಾಲದ 'ಫಿರಂಗಿ', ಇದರ ಹತ್ತಿರದಲ್ಲೇ ಇರುವ ಮೈಸೂರಿನ ನಾಲ್ಕನೇ ಮಹಾಯುದ್ಧದಲ್ಲಿ ಹೋರಾಡಿ ಮಡಿದ ಸೈನಿಕರನ್ನು ಸ್ಮರಿಸುವ 'ಸೈನಿಕ ಸ್ತಂಭ', ಕಾವೇರಿ ನದಿಯ ಎಡಕವಲಿಗೆ ಅಡ್ಡವಾಗಿ ನಿರ್ಮಿಸಿರುವ ಕರ್ನಾಟಕದ ಅತ್ಯಂತ ಪ್ರಾಚೀನ ಸೇತುವೆಯಾದ 'ವೆಲ್ಲೆಸ್ಲಿ ಸೇತುವೆ', 1784ರಲ್ಲಿ


Downloaded From:www.kpscvaani.com



ಕಟ್ಟಲ್ಪಟ್ಟಿರುವ 1959 ರಿಂದ ವಸ್ತು ಸಂಗ್ರಹಾಲಯವಾಗಿರುವ ಟಿಪ್ಪುವಿನ ಅಂದದ ಬೇಸಿಗೆ ಅರಮನೆ 'ದರಿಯಾದೌಲತ್', ಟಿಪ್ಪು ಸುಲ್ತಾನ್ ಮತ್ತು ಆತನ ತಂದೆ-ತಾಯಿ ಮತ್ತವರ ಕುಟುಂಬದವರ ಸಮಾಧಿಗಳಿರುವ 1784ರಲ್ಲಿ ನಿರ್ಮಾಣಗೊಂಡಿರುವ ಗೋಳಗುಮ್ಮಟದಾಕಾರದ 'ಗುಂಬಜ್', ಇಲ್ಲೇ ಸಮೀಪದಲ್ಲಿ ಕಾವೇರಿ ನದಿ ಇಬ್ಭಾಗವಾಗಿ ಒಡೆದು ಮುಂದೆ ಸಾಗಿ ಒಂದಾಗಿ ಸೇರುವ 'ಸಂಗಮ', ಅಲ್ಲೇ ಸಮೀಪದಲ್ಲಿ ರಮಣೀಯ 'ಗೋಸಾಯಿ ಘಾಟ್' ಇಲ್ಲೇ ಅನತಿ ದೂರದ ಕಾವೇರಿಯ ಉತ್ತರ ದಡದಲ್ಲಿರುವ ಗಂಜಾಂನ ಪ್ರಸಿದ್ಧ 'ನಿಮಿಷಾಂಬ ದೇವಸ್ಥಾನ' ತುಸುದೂರದಲ್ಲೇ ಇರುವ ಶ್ರೀರಾಮ, ಕಾಶಿವಿಶ್ವನಾಥ, ಕನ್ಯಕಾ ಪರಮೇಶ್ವರಿ, ಗೌರಿ ದೇಗುಲಗಳು ಹಾಗೂ ಫ್ರೆಂಚ್‌ನ ಕ್ರೈಸ್ತ ಪಾದ್ರಿ ಅಬ್ಬಿದುಬುವಾ ಸ್ಥಾಪಿಸಿರುವ 'ಅಬ್ಬಿದುಬುವಾ ಚರ್ಚ್' ಕಾವೇರಿ ನದಿಯ ಮಧ್ಯ ಭಾಗದಲ್ಲಿರುವ ವಿಶ್ವವಿಖ್ಯಾತ 'ರಂಗನತಿಟ್ಟು ಪಕ್ಷಿಧಾಮ', ನಂದಿಬಸಪ್ಪ ಛತ್ರ, ಅಂಡಾಪುರದರಂಗಾಚಾರ್ಯ ಛತ್ರ, ಗಾಡಿಚೆಲುವರಾಯಶೆಟ್ಟಿ ಛತ್ರ, ಮಹಾರಾಜರ ಛತ್ರಗಳು ಹೀಗೆ ಹಲವಾರು ಛತ್ರಗಳ ಪುಣ್ಯ ಸಂಗಮವೇ ಆಗಿರುವ 'ಪಶ್ಚಿಮವಾಹಿನಿ' ಮುಂತಾದವು ಶ್ರೀರಂಗಪಟ್ಟಣದಲ್ಲಿ ಪ್ರವಾಸಿಗರು ನೋಡಲೇಬೇಕಾದ ಭವ್ಯ ತಾಣಗಳು.

ಹಾಗೆಯೇ ಇಲ್ಲಿಂದ ಕೇವಲ 4 ಕಿ.ಮೀ. ಅಂತರದಲ್ಲಿ ಬನ್ನೂರು ರಸ್ತೆಯಲ್ಲಿರುವ 'ಕರಿಘಟ್ಟ ಗಿರಿಧಾಮ', ಅಲ್ಲೇ ತುಸುದೂರದಲ್ಲಿ ಇತ್ತೀಚೆಗೆ ಬಹಳ ಪ್ರಸಿದ್ಧಿಗೆ ಬರುತ್ತಿರುವ 'ಗೆಂಡೆಹೊಸಹಳ್ಳಿ ಪಕ್ಷಿಧಾಮ' (ಬಂಡಿಸಿದ್ದೇಗೌಡ ಪಕ್ಷಿಧಾಮ) ಇದರ ಸಮೀಪದಲ್ಲೇ 'ಬೋರೇದೇವರಗುಡಿ', ಚಿತ್ರನಗರಿ ಎಂದೇ ಖ್ಯಾತವಾಗಿರುವ 'ಮಹದೇವಪುರ' ದಂತಹ ರಮ್ಯ ಸ್ಥಳಗಳು ಪ್ರವಾಸಿಗರನ್ನು ಮಂತ್ರ ಮುಗ್ಧಗೊಳಿಸುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ ಇಲ್ಲಿಂದ 15ಕಿ.ಮೀ.ದೂರದಲ್ಲಿರುವ ಲೋಕ ವಿಖ್ಯಾತ 'ಕೃಷ್ಣರಾಜ ಸಾಗರ' ವೀಕ್ಷಣೆಯಂತೂ ಭೂ ಲೋಕದ ಸ್ವರ್ಗವೇ ಸರಿ.

ಜಿಲ್ಲಾ ಕೇಂದ್ರ ಮಂಡ್ಯದಿಂದ 30 ಕಿ.ಮೀ. ಮೈಸೂರಿನಿಂದ 16 ಕಿ.ಮೀ. ರಾಜಧಾನಿ ಬೆಂಗಳೂರಿನಿಂದ 122 ಕಿ.ಮೀ. ದೂರದಲ್ಲಿರುವ ಶ್ರೀರಂಗಪಟ್ಟಣದಲ್ಲಿ ಉಳಿದುಕೊಳ್ಳಲು ಮತ್ತು ಊಟ-ತಿಂಡಿಗೆ ಎಲ್ಲಾ ಶ್ರೇಣಿಯ ಹೋಟೆಲ್‌ಗಳೂ ಇಲ್ಲುಂಟು. ಇಲ್ಲಿಗೆ ಬಂದು ಹೋಗಲು ಸಾರಿಗೆ ವ್ಯವಸ್ಥೆ ಉತ್ತಮವಾಗಿದ್ದು, ಸಮೀಪದ ಸುತ್ತ ಮುತ್ತಲಿನ ಸ್ಥಳಗಳನ್ನು ವೀಕ್ಷಿಸಲು ಖಾಸಗಿ ವಾಹನಗಳನ್ನು ಇಲ್ಲಿಂದಲೇ ವ್ಯವಸ್ಥೆ ಮಾಡಿಕೊಳ್ಳಬಹುದು.


## STATEMENT ABOUT OWNERSHIP AND OTHER PARTICULARS ABOUT VARTHA JANAPADA

### FORM IV Rule 8

1. Place of Publication : Bengaluru

2. Periodicity of Publication : Monthly

3. Printer Name : G. Gopalakrishna
   Nationality : Indian
   Address : Lavanya Mudrana
   Banashankari 1st Stage
   Vidyapeeta Circle
   Benglauru - 560 050

4. Publishers Name : Hemanth M Nimbalkar
   Nationality : Indian
   Address : Dept. of Information & Public Relations
   #17, Mahaveer Road, (Infantry Rd)
   Bengaluru - 560 001.

5. Editor's Name : Hemanth M Nimbalkar
   Nationality : Indian
   Address : Dept. of Information & Public Relations
   #17, Mahaveer Road, (Infantry Rd)
   Bengaluru - 560 001.

6. License No. - Regd. No.
   **KARKAN/2017/75029**

I, **Hemanth M Nimbalkar** hereby declare that the particulars given above are true to the best of my knowledge and belief.


Bengaluru
01.02.2024

Sd.
Commissioner
Signature of the Publisher




Downloaded From:www.kpscvaani.com

# ಪದಬಂಧ-51



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಈ ಪರಿ ಹರಡಿರುವ ಸುವಾಸನೆ! (4)
5. ದೇವಾಲಯದ ಸಭಾಮಂಟಪ (4)
6. ಶ್ರೀ ಮಾರಿಕಾಂಬ ದೇವಸ್ಥಾನವಿರುವ ಈ ಊರು ಉತ್ತರಕನ್ನಡ ಜಿಲ್ಲೆಯಲ್ಲಿದೆ (3)
9. ಹಗರಣದಲ್ಲಿ ಸಿಕ್ಕಿರುವ ದುಡ್ಡು! (2)
10. ಅವಸರಕ್ಕೊಂದು ಪರ್ಯಾಯ ಪದ (3)
11. ಬಡಗಣ ದಿಕ್ಕಿನಲ್ಲಿ ಕಾಣುತ್ತಿರುವ ಗುಂಪು! (2)
13. ಕನಸು ಇಲ್ಲಿ ನಿಜವಾಗಿದೆ! (3)
15. ತಾಯಿಯ ಮನೆ ಕಿಟಕಿ (4)
17. ನಿರುದ್ಯೋಗ ಯುವಕ ಯುವತಿಯರಿಗೆ ಸಹಾಯಧನ ನೀಡುವ ಯೋಜನೆ (4)

## ಮೇಲಿಂದ ಕೆಳಕ್ಕೆ

1. ಪ್ರತ್ಯಯಸಹಿತವಾದ ಶಬ್ದ(2)
2. ಕನ್ನಡಿಗನು ಹಿಡಿದಿರುವ ಲೆನ್ಸು! (3)
3. ವನದ ಬಗ್ಗೆ ಬರೆದ ಪದ್ಯ (3)
4. ನಡುವೆ ಗರವಿದ್ದರೆ ಈ ಗೊಂದಲ! (4)
6. ತಲೆಯನ್ನು ಕಾಪಾಡುವ ಸಾಧನ (4)
7. ಕಿರಿಧಾನ್ಯವೆಂದು ಕರೆಯಲಾಗುತ್ತಿದ್ದ ಧಾನ್ಯಗಳಿಗೆ ಈ ಹೊಸಹೆಸರು ಬಂದಿದೆ (4)
8. ಓಟನ್ನು ನೀಡುವಿಕೆ (4)
9. ಹಸುವಿನ ಹತ್ತಿರವಿರುವ ಎಳೆಮಗು(4)
11. ಕದಂಬರ ರಾಜಧಾನಿಯಾಗಿದ್ದ ಈ ಊರಿನಲ್ಲಿಮಧುಕೇಶ್ವರ ದೇವಾಲಯವಿದೆ (4)
12. ಕಾಯ ಬಗ್ಗಿಸಿ ಮಾಡುವ ಕೆಲಸ! (3)
14. ಮುಖವಿಲ್ಲಿ ಉಲ್ಟಾ ಪಲ್ಟಾ ಕಾಣುತ್ತಿದೆ (3)

## ಉತ್ತರ

**ಮೇಲಿಂದ ಕೆಳಕ್ಕೆ**

1. ಪದ 2. ಮಸೂರ 3. ಕವನ 4. ಹಗರಣ 6. ಶಿರಸ್ತ್ರಾಣ 7. ಸಿರಿಧಾನ್ಯ 8.ಮತದಾನ 9. ಹಸುಗೂಸು 11.ಬನವಾಸಿ 12.ಕಾಯಕ 14.ನದವ

**ಎಡದಿಂದ ಬಲಕ್ಕೆ**

1. ಪರಿಮಳ 5. ನವರಂಗ 6. ಶಿರಸಿ 9.ಹಣ 10. ಧಾವಂತ 11. ಬಣ 13. ನನಸು 15. ವಾತಾಯನ 17.ಯುವನಿಧಿ

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com




ಜನವರಿ 20 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿಗಳು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಇವರ ವಿವಿಧ ವೈವಿಧ್ಯಮಯ ಉತ್ಪನ್ನಗಳನ್ನು ಬಿಡುಗಡೆ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ಕೈಗಾರಿಕಾ ಸಚಿವರಾದ ಎಂ.ಬಿ.ಪಾಟೀಲ್, ಕೆಎಸ್‌ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಪ್ರಶಾಂತ್ ಸಲಹೆಗಾರರಾದ ರಜನೀಕಾಂತ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು ಉಪಸ್ಥಿತರಿದ್ದರು



ಜನವರಿ 23 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನಾಚರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಅವರ ಪುತ್ಥಳಿಯ ಬಳಿ ಇರಿಸಲಾಗಿದ್ದ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com